# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮೇ, ೨೦೧೯ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೮ ಸಂಚಿಕೆ: ೩

ಚಂದಾ ರೂ. ೧೫೦/– (ಮೇ ಯಿಂದ ಸೆಪ್ಟಂಬರ್‌ವರೆಗೆ) ರೂ. ೨೦೦/–(ಸಂಸ್ಥೆಗಳಿಗೆ) ಬೆಲೆ : ಬಿಡಿ ಪ್ರತಿ: ರೂ. ೨೫/– ಪುಟ: ೨೦

ವಿಳಾಸ: ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

ದೂ: ೦೮೧೮೨–೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಈ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ಲೋಕಸಭಾ ಚುನಾವಣೆಗಳ ಮತದಾನ ಹೆಚ್ಚೂ ಕಡಿಮೆ ಅರ್ಧದಷ್ಟು ಮುಗಿದಿರುತ್ತದೆ. ಸುಮಾರು ಒಂದು ತಿಂಗಳ ಹಿಂದೆ ಶುರುವಾದ ಈ ಪ್ರಕ್ರಿಯೆ ಇನ್ನೂ ಎರಡು ವಾರ ನಡೆಯಲಿದೆ. ಅಂದರೆ ಮೊದಲ ಸುತ್ತಿನಲ್ಲಿ ಮತದಾನ ಮಾಡಿದ ಕ್ಷೇತ್ರದ ಜನ ತಮ್ಮ ಪ್ರತಿನಿಧಿ ಯಾರು ಎಂದು ತಿಳಿಯಲು ಒಂದೂವರೆ ತಿಂಗಳು ಕಾಯಬೇಕು! ೧೯೫೨ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆ ಒಂದು ದಿನದಲ್ಲಿ ಮುಗಿದು ಎರಡು–ಮೂರು ದಿನಗಳಲ್ಲಿ ಫಲಿತಾಂಶ ಪ್ರಕಟವಾಗುತ್ತಿದ್ದುದು ಈಗ ೧೭ನೇ ಸಾರ್ವತ್ರಿಕ ಚುನಾವಣೆಯ ಹೊತ್ತಿಗೆ ಈ ಅವಧಿ ಒಂದೂವರೆ ತಿಂಗಳಿಗೆ ಹೆಚ್ಚಿದೆ. ಕಾರಣ, ಚುನಾವಣೆ ಎಂಬುದು ಈಗ ತೀವ್ರ ನಿಗಾ ವಹಿಸಬೇಕಾದ ಕಾನೂನು ಮತ್ತು ಶಿಸ್ತಿನ ವ್ಯವಹಾರವಾಗಿ ಹೋಗಿರುವುದು. ದೇಶದ ಕಾನೂನು ಮಾಡುವವರೇ ಮತ್ತು ಶಿಸ್ತಿನ ಮೇಲುಸ್ತುವಾರಿ ವಹಿಸಬೇಕಾದವರೇ ಆಯ್ಕೆಯಾಗಬೇಕಾದ ಪ್ರಕ್ರಿಯೆಯೇ ಒಂದು ಕಾನೂನು ಮತ್ತು ಶಿಸ್ತು ಪಾಲನೆಯ ಸಮಸ್ಯೆಯಾಗಿ ಹೋಗಿದೆ ಎಂಬ ಸಂಗತಿಯೇ ನಮ್ಮ ಪ್ರಜಾಪ್ರಭುತ್ವ ಎಂಥಹ ವಿಪರ್ಯಾಸಕರ ಸ್ಥಿತಿ ಮುಟ್ಟಿದೆ ಎಂಬುದನ್ನು ಸೂಚಿಸುತ್ತದೆ.

ಚುನಾವಣೆಗಳಿಗಾಗಿ ಚುನಾವಣಾ ಆಯೋಗದ ರಾಷ್ಟ್ರವ್ಯಾಪಿ ಬೃಹತ್ ಸಿಬ್ಬಂದಿ ಜಾಲದ ಜೊತೆಗೆ ಸಾವಿರಾರು ತುಕಡಿ ಮೀಸಲು ಪಡೆಗಳು, ಸಾವಿರಾರು ಜನ ವೀಕ್ಷಕರು, ವಿಚಕ್ಷಣ ದಳಗಳು ಬೇಕಾಗಿದೆ ಎಂದರೆ ನಮ್ಮ ಚುನಾವಣೆಗಳು ಎಷ್ಟು ಗಬ್ಬೆದ್ದುಹೋಗಿವೆ ಎಂಬುದನ್ನು ಊಹಿಸಬಹುದು. ಸಜ್ಜನರಾಗಲಿ, ಹಣ ಬಲವಿಲ್ಲದ ಸಾಮಾನ್ಯ ಜನರಾಗಲೀ ಜನಪ್ರತಿನಿಧಿಗಳಾಗಲು ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ಇದನ್ನು ಯಾವ ಅರ್ಥದಲ್ಲಿ ಪ್ರಜೆಗಳ ಪ್ರಭುತ್ವ ಎಂದು ಕರೆಯಬೇಕೋ ತಿಳಿಯದಾಗಿದೆ. ಇದಕ್ಕಾಗಿ ದೇಶ ತನ್ನ ಖಜಾನೆಯಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಹೀಗಾಗಿ ಚುನಾವಣೆ ಎಂಬುದು ಜನತೆಯ ಮೇಲೆ ನಿಯಮಿತವಾಗಿ ಪ್ರಯೋಗಿಸಲಾಗುತ್ತಿರುವ ಕ್ರೂರ ವ್ಯಂಗ್ಯ ಮತ್ತು ಆಚರಣೆಯೇ ಆಗಿದೆ. ತಾಂತ್ರಿಕ ಅರ್ಥದಲ್ಲಿ ಮಾತ್ರ ಪ್ರಜಾಸತ್ತಾತ್ಮಕವಾಗಿರುವ ಈ ಪ್ರಕ್ರಿಯೆಯನ್ನು ನಮ್ಮ ಜನ ಮತ್ತು ಅವರ ವಾಣಿಗಳೆನಿಸಿದ ಮಾಧ್ಯಮಗಳು ಕೂಡ 'ಪ್ರಜಾಪ್ರಭುತ್ವದ ಹಬ್ಬ' ಎಂದು ಕರೆದು ಸಂಭ್ರಮಿಸುತ್ತಿರುವುದನ್ನು ನೋಡಿದರೆ ಮುಂದಿನ ದಾರಿ ಕತ್ತಲೆಯಿಂದಲೇ ತುಂಬಿದೆ ಎನಿಸದಿರದು. ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿದ್ದ ನಮ್ಮ ಚಿಂತಕ ಸಮೂಹ ಸಿನಿಕವಾಗಿಯೋ, ಹತಾಶವಾಗಿಯೋ ಅರ್ಧದಷ್ಟು ಜನ ಮೌನಕ್ಕೆ ಶರಣಾಗಿದ್ದರೆ ಇನ್ನರ್ಧದಷ್ಟು ಜನ ಈ ಹಬ್ಬದಲ್ಲಿ ಒಬ್ಬರಲ್ಲದಿದ್ದರೆ ಇನ್ನೊಬ್ಬರ ಕಡೆ ಸೇರಿಕೊಂಡು ಅವರ ಪರವಾಗಿ ಬಾಜಾ ಭಜಂತ್ರಿ ನಡೆಸತೊಡಗಿದ್ದಾರೆ.

ಈ ಹಿಂದೆಯೂ ಚುನಾವಣೆಗಳಲ್ಲಿ ಹಣ, ಜಾತಿ, ಮತ ಮತ್ತು ತೋಳ್ಬಲಗಳ ಪಾತ್ರ ಇರಲಿಲ್ಲವೆಂದಲ್ಲ. ಆದರೆ ಅದು ಅನೈತಿಕ ಎನಿಸಿ ಸಮಾಜದ ಆತ್ಮಸಾಕ್ಷಿಯನ್ನು ಕೆಣಕಿ ಸಾರ್ವತ್ರಿಕ ಖಂಡನೆಗೆ ಒಳಗಾಗುವಷ್ಟರಮಟ್ಟಿಗೆ ನಿಯಂತ್ರಣದಲ್ಲಿತ್ತು. ಅನೈತಿಕತೆಯ ಟೀಕೆಗೆ ಒಳಗಾದವನಿಗೆ ನಾಚಿಕೆ ಎಂಬುದಾದರೂ ಇರುತ್ತಿತ್ತು. ಆದರೆ ಇಂದು ಇದು ಎಲ್ಲರ ನಿಯಂತ್ರಣ ತಪ್ಪಿ ಅನೈತಿಕತೆಯೇ ವ್ಯಾಪಕವಾಗಿ ನೈತಿಕತೆ, ನಾಚಿಕೆ ಎಂಬುವುಗಳೇ ಚಲಾವಣೆ ಕಳೆದುಕೊಂಡ ನಾಣ್ಯಗಳಾಗಿಬಿಟ್ಟಿವೆ. ಇದು ಸಾಪೇಕ್ಷ ನೈತಿಕತೆ ಅಥವಾ ಅನೈತಿಕತೆಯ ಕಾಲವಾಗಿ ಪರಿವರ್ತಿತವಾಗಿ ಪ್ರತಿಯೊಬ್ಬರೂ ಇನ್ನೊಬ್ಬರಿಗಿಂತ ಕಡಿಮೆ ಅನೈತಿಕ ಎಂದು ಸಾಬೀತುಪಡಿಸುವ ಅನೈತಿಕ ದಾರಿ ಹಿಡಿದಿದ್ದಾರೆ. ಅಂದರೆ ಅನೈತಿಕತೆ ಇಂದು ಅನಿವಾರ್ಯವೆನಿಸಿ, ಅದೊಂದು ಒಪ್ಪಿತ ಹೊಸ 'ಮೌಲ್ಯ'ವೆನಿಸಿಬಿಟ್ಟಿದೆ.

ಇಂತಹ ಮೌಲ್ಯ ಪಲ್ಲಟದ ಕಾರಣ ಆ ಸಮಾಜದ ಒಡಲಲ್ಲೇ ಇರುವುದು ಸಹಜ. ಅದೂ ಒಂದು ಸಾಮಾಜಿಕ ಪಲ್ಲಟದ ರೂಪದಲ್ಲೇ ಇರುತ್ತದೆ. ಈ ಸಾಮಾಜಿಕ ಪಲ್ಲಟ ನಮ್ಮ ಸಮಾಜದಲ್ಲಿ ಆಗಿರುವುದು ಹೊಸ ಮಧ್ಯಮ ವರ್ಗವೊಂದರ ಸೃಷ್ಟಿಯ ರೂಪದಲ್ಲಿ. ಭಾರತದಲ್ಲಿ ಹೊಸ ಸಮಾಜವೊಂದರ ಕನಸು ಕಾಣುತ್ತಿದ್ದ ಭಾರತದ ನವೋದಯ ಯುಗದ ಮಧ್ಯಮ ವರ್ಗ ಈಗ ಸಂಪೂರ್ಣ ಕಾಣೆಯಾಗಿದೆ. ಹಣ–ಅಧಿಕಾರಗಳನ್ನು ಕೆಡುಕಿನ ಮೌಲ್ಯಗಳೆಂದು ಭಾವಿಸಿದ್ದ ಆ ವರ್ಗ ಸಮಾಜದಲ್ಲಿ ಯಾವುದೇ ಕೆಟ್ಟದ್ದು ನಡೆದರೂ ಅದನ್ನು ಖಂಡಿಸುವ, ಅದನ್ನು ದಿಟ್ಟವಾಗಿ ಎದುರಿಸುವ ಸ್ಥೈರ್ಯವನ್ನು ಹೊಂದಿತ್ತು. ಈ ಸ್ಥೈರ್ಯದ ಮೂಲ ಇದ್ದುದು ಹಣ ಮತ್ತು ಅಧಿಕಾರಗಳು ಮಾಡಬಹುದಾದ ಸಾಮಾಜಿಕ ಅನಾಹುತಗಳನ್ನು ಕುರಿತ ಅದರ ನೈತಿಕ ಎಚ್ಚರದಲ್ಲಿ.

ಆದರೆ ಈ ವರ್ಗ ಇಂದು ನಾಶವಾಗಿ ಅದರ ಪಾಳಿನ ಮೇಲೆ ಮಹಾ ದುರಾಶೆಯ ಹೊಸ ಮಧ್ಯಮವರ್ಗವೊಂದು ಸೃಷ್ಟಿಯಾಗಿದೆ. ಇದಕ್ಕೆ ಕಾರಣ, ವಸಾಹತುಶಾಹಿಯ ಸೂರೆಯಿಂದ ಬಲಿಷ್ಠವಾಗಿ ಬೆಳೆದಿದ್ದ ಪಶ್ಚಿಮದ ದೇಶಗಳು ವಸಾಹತುಶಾಹಿಯ ನಿರ್ನಾಮದ ನಂತರ ಕಂಗಾಲಾಗಿ ತಮ್ಮ ಬಲಿಷ್ಠತೆಯನ್ನು ಉಳಿಸಿಕೊಳ್ಳಲು ಮಾರುಕಟ್ಟೆ ಸಂಬಂಧಿತ ಷರತ್ತುಗಳನ್ನೊಳಗೊಂಡ ಸಾಲ ಮತ್ತು ನೆರವಿನ ರೂಪದ ನವವಸಾಹತುಶಾಹಿಯನ್ನು ನಮ್ಮ ಮೇಲೆ ಪ್ರಯೋಗ ಮಾಡಿರುವುದು. ಇದನ್ನು ಜಾಗತೀಕರಣ, ಆರ್ಥಿಕ ಸುಧಾರಣೆಗಳು, ಮುಕ್ತ ಮಾರುಕಟ್ಟೆ ಇತ್ಯಾದಿ ಸವಿ ಹೆಸರುಗಳಿಂದ ಕರೆಯಲಾಗುತ್ತಿದೆ. ಇದು ಈ ದೇಶದೊಳಕ್ಕೆ ಹಡಬೆ ಹಣದ ದೊಡ್ಡ ಹೊಳೆಯನ್ನೇ ಹರಿಸಿದ್ದು, ಇದರ ಲಾಭ ಪಡೆದ ವರ್ಗ ಇಂದು ಮುಂಚೂಣಿ ವರ್ಗವಾಗಿ ಮೂಡಿ ಹಳೆಯ ನೈತಿಕ ನೆಲೆಗಟ್ಟಿನ ಮಧ್ಯಮವರ್ಗದ ಜಾಗವನ್ನು ಆಕ್ರಮಿಸಿಕೊಂಡಿದೆ.

ದುಡಿಮೆಗೂ ನೈತಿಕತೆಗೂ ಇದ್ದ ಅವಿನಾ ಸಂಬಂಧವನ್ನೇ ಕಡಿದು ಹಾಕಿರುವ ಈ ಹೊಸ ವಿದ್ಯಮಾನ ಶೀಲವಿಲ್ಲದ ಹಣವಂತರ ದೊಡ್ಡ ಸಮುದಾಯವನ್ನೇ ಸೃಷ್ಟಿಸಿದೆ. ಈ ಸಮುದಾಯ ತನ್ನ ದಿಢೀರ್ ಶ್ರೀಮಂತಿಕೆಯನ್ನು ಉಳಿಸಿ ಬೆಳೆಸಿಕೊಳ್ಳಲು ಹಣದ ಜೊತೆಗೆ ಅಧಿಕಾರದ ಸಮೀಕರಣಗಳನ್ನು ಹೆಣೆಯುತ್ತಿರುವುದೇ ಇಂದಿನ ರಾಜಕಾರಣದ ನಗ್ನ ಅನೈತಿಕತೆಗೆ ಕಾರಣವಾಗಿದೆ. ಈ ಸಮುದಾಯ ತನ್ನ ಅನುಕೂಲಗಳಿಗೆ ತಕ್ಕಂತೆ ವಿವಿಧ ರಾಜಕೀಯ ಪಕ್ಷಗಳಲ್ಲಿ ಹಂಚಿಹೋಗಿದೆ. ಹಣ ಮತ್ತು ಅಧಿಕಾರದ ಅನೈತಿಕ ಸಂಬಂಧ ಧರ್ಮ ಮತ್ತು ದೇಶಭಕ್ತಿಯ ಮರೆಯಲ್ಲಿ ನೀತಿಯ ವೇಷ ತೊಟ್ಟು ಮಾನ್ಯತೆ ಪಡೆಯಲು ಸಾಧ್ಯವಿರುವುದರಿಂದ ಇಂದು ಈ ಹೊಸ ಮಧ್ಯಮ ವರ್ಗ ಹೆಚ್ಚಾಗಿ ಕೋಮುವಾದದ ಮೊರೆ ಹೋಗಿರುವುದು ಆಶ್ಚರ್ಯಕರ ಸಂಗತಿ ಏನಲ್ಲ. ಈ ಶಕ್ತಿಗಳು ತಮ್ಮ ಈ ಹಣ–ಅಧಿಕಾರಗಳ ಕೋಟೆಯ ರಕ್ಷಣೆಗಾಗಿ ಧರ್ಮ ಮತ್ತು ದೇಶದ ಹೆಸರಿನಲ್ಲಿ ಹಲವು ಪಡೆಗಳನ್ನೂ ನಿರ್ಮಿಸಿಕೊಂಡಿರುವುದು ಸಹಜವೇ ಆಗಿದೆ. ಇದಕ್ಕೆ ಈ ಹಿಂದೆ ಬಡವರ ಹೆಸರಿನಲ್ಲಿ, ಧರ್ಮನಿರಪೇಕ್ಷತೆಯ ಹೆಸರಿನಲ್ಲಿ ನಡೆದ ಭ್ರಷ್ಟ ರಾಜಕಾರಣದ ಪಾಪದ ಹೊರೆಯೂ ಕಾರಣವಾಗಿರುವುದನ್ನೂ ನಾವಿಲ್ಲಿ ಪರಿಗಣಿಸದಿರಲಾಗದು

ಆದರೆ ಸಮಸ್ಯೆ ಎಂದರೆ ನಮ್ಮ ಒಟ್ಟು ಸಮಾಜ ಈ ಹೊಸ ಸಮೃದ್ಧಿಯ ಸಾಧಕ ಬಾಧಕಗಳೇನು ಎಂಬುದರ ಪರಿವೆಯನ್ನೇ ಕಳೆದುಕೊಂಡು ಈ ಅನೈತಿಕ ರಾಜಕಾರಣದಲ್ಲಿ ಭಾಗಿಯಾಗಿರುವುದು. ಇದರಿಂದಾಗಿ ಪ್ರಜಾಪ್ರಭುತ್ವದ ಆಂತರ್ಯ ಮತ್ತು ಸತ್ವವನ್ನು ಅರಿತು ದೇಶ ಕಟ್ಟಬಲ್ಲ ಅಭ್ಯರ್ಥಿಗಳೇ ಕಣ್ಮರೆಯಾಗಿರುವುದು. ಈ ಬಾರಿ ಮತಾಧಿಕಾರ ಜಾಗೃತಿ ಆಂದೋಲನ ಬಹು ಜೋರಾಗಿಯೇ ನಡೆಯಿತು. ಚುನಾವಣೆಗಳು ಹೆಚ್ಚೆಚ್ಚು ಅಸಂಬದ್ಧಗೊಳ್ಳುತ್ತಿದ್ದಂತೆ ಇಂತಹ ಜಾಗೃತಿ ಆಂದೋಲನಗಳೂ ಬಿರುಸುಗೊಳ್ಳುತ್ತಿರುವುದು ಒಟ್ಟು ನಮ್ಮ ವ್ಯವಸ್ಥೆಯೇ ಬುದ್ಧಿಭ್ರಮಣೆಗೆ ಒಳಗಾಗಿದೆಯೋ ಎಂಬ ಅನುಮಾನವನ್ನು ಉಂಟು ಮಾಡುತ್ತಿರುವುದು. ಯಾರಿಗೆ ಮತ ಹಾಕಿದರೂ ಮುಂದಿನ ದಿನಗಳ ದುರಂತ

ಕಡಿಮೆಯಾಗಲಾರದು ಎನಿಸಿದಾಗ ಯಾರಿಗೆ ಮತ ಹಾಕುವುದು?

ನಟ ಭಯಂಕರ ಮೋದಿಯವರು ತಮ್ಮ ಐದು ವರ್ಷಗಳ ಆಡಳಿತದ ಬಗ್ಗೆ ಮಾತಾಡುವ ಅಗತ್ಯವಿಲ್ಲದಷ್ಟು ಅದರ ಸಾಧನೆಗಳು ಜನರಿಗೆ ಮನವರಿಕೆಯಾಗಿದೆ ಎಂಬಂತೆ ಬರೀ ದೇಶ ರಕ್ಷಣೆ, ಸೇನೆ, ಬಾಲ್‌ಕೋಟ್, ಅಭಿನಂದನ್, ಪಾಕಿಸ್ತಾನ, ಅಣ್ವಸ್ತ್ರ ಪ್ರಯೋಗ ಇತ್ಯಾದಿ ವಿಷಯಗಳ ಬಗ್ಗೆ, ಪಾಕಿಸ್ತಾನವನ್ನು ಬೆಂಬಲಿಸುವ ಚೀನಾ ಕೂಡ ನಮ್ಮ ನೆರೆಯ ದೇಶವಾಗಿದೆ ಎಂಬ ನೆದರೇ ಇಲ್ಲದೆ ಸುಲಭ ಯುದ್ಧೋನ್ಮಾದದ ಭಾಷಣ ಮಾಡುತ್ತಾ ಅವರ ರಾಜಕೀಯ ಪ್ರಬುದ್ಧತೆಯ ಬಗ್ಗೆಯೇ ನಿರಾಶೆ ಹುಟ್ಟಿಸುತ್ತಿದ್ದರೆ ಅದಕ್ಕೆ ತಕ್ಕಂತೆ ಅವರ ಪಕ್ಷ ಅನಂತಕುಮಾರ್ ಹೆಗಡೆ, ಯೋಗಿ ಆದಿತ್ಯನಾಥ, ಸಾಕ್ಷಿ ಮಹಾರಾಜ್, ಸಾಧ್ವಿ ನಿರಂಜನ್ ಜ್ಯೋತಿ, ಪ್ರತಾಪಸಿಂಹ, ತೇಜಸ್ವಿ ಸೂರ್ಯರಂತಹ ಅಗ್ನಿಭಕ್ಷಕರು ಸಾಲದೆಂಬಂತೆ ಮಾಲೇಗಾಂವ್ ಸ್ಫೋಟದ ಆರೋಪಿ ಪ್ರಗ್ಯಾ ಸಿಂಗ್ ಎಂಬ ಉಗ್ರವಾದಿ ಮಹಿಳೆಯನ್ನು ಚುನಾವಣಾ ಅಖಾಡಕ್ಕೆ ಇಳಿಸಿದೆ. ಇವರೆಲ್ಲ ಸೇರಿ ದೇಶವನ್ನು ಎಲ್ಲಿಗೆ ಕೊಂಡೊಯ್ಯುವರೋ ತಿಳಿಯದಾಗಿದೆ. ಪ್ರಗ್ಯಾಸಿಂಗ್ ಮೇಲಿನ ಆಪಾದನೆ ಸೇರಿದಂತೆ ಸಂಘ ಪರಿವಾರಿಗಳ ಮೇಲಿದ್ದ ಹಲವು ಹತ್ಯೆ-ದೊಂಬಿ-ಭಯೋತ್ಪಾದನೆಯ ಮೊಕದ್ದಮೆಗಳನ್ನು ಬೇಕೆಂತಲೇ ವಿಳಂಬಗೊಳಿಸಿದ ಹಿಂದಿನ ಕಾಂಗ್ರೆಸ್ ಸರ್ಕಾರದ ಪಾಪವನ್ನು ಈಗ ದೇಶ ಹೊರಬೇಕಾಗಿದೆ.

ಇನ್ನು ಇತ್ತ ನೋಡಿ. ಈ ನಮ್ಮ ಹಿರಿಯ ರಾಜಕಾರಣಿ ದೇವೇಗೌಡರು ತಮ್ಮ ಕ್ಷೇತ್ರವನ್ನು ತಮ್ಮ ಮೊಮ್ಮಗನಿಗೆ ಧಾರೆ ಎರೆದುಕೊಟ್ಟು ಸ್ವಜಾತಿ ಪ್ರಧಾನ ಕ್ಷೇತ್ರವೊಂದನ್ನು ಹುಡುಕಿಕೊಂಡು ಹೋಗಿ ಉಪಾಯವಾಗಿ ಸರಿಯಾದ ಜಾಗದಲ್ಲಿ ಕಾಂಗ್ರೆಸ್ಸಿನ ಬೆನ್ನೆಲುಬನ್ನು ಮುರಿದಿದ್ದಲ್ಲದೆ ಶಿವಮೊಗ್ಗಕ್ಕೆ ಬಂದು ನಾನು ಬಂಗಾರಪ್ಪನ ಮಗನ ಜೊತೆ ಇಲ್ಲದೆ ನನ್ನ ಮೊಮ್ಮಕ್ಕಳೊಂದಿಗೆ ಸಂಸತ್ತಿಗೆ ಹೋಗಲು ಮುಜುಗರವಾಗುತ್ತದೆ ಎಂದು ಭಾಷಣ ಮಾಡುವಷ್ಟು ನಾಚಿಕೆಗೆಟ್ಟರೆ ಯಾರಾದರೂ ಏನು ಮಾಡಬಲ್ಲರು? ಇನ್ನು ನಮ್ಮ ಸಮಾಜವಾದಿ ಸಿದ್ದರಾಮಯ್ಯ ಮೇ ೨೩ಕ್ಕೆ ಆಗಬಹುದಾದ ಅನಾಹುತವನ್ನು ಜಾಣ್ಮೆಯಿಂದ ನಿರ್ವಹಿಸುವ ಕ್ರಮವವೆಂಬಂತೆ ನಾನೇ ಮುಂದಿನ ಮುಖ್ಯಮಂತ್ರಿ ಎಂದು ಹೆಮ್ಮೆಯಿಂದ ಘೋಷಿಸಿಕೊಂಡಿದ್ದಲ್ಲದೆ ಜನರಿಗೆ ಉಚಿತವಾಗಿ ಹತ್ತು ಕೇಜಿ ಅಕ್ಕಿ ಕೊಡುವುದಾಗಿಯೂ ಪ್ರಕಟಿಸಿದ್ದಾರೆ! ಇವರಿಗೆ ತಾನು ಸಂಸದೀಯ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕೆಲಸ ಮಾಡುವ ಪಕ್ಷವೊಂದರ ಸದಸ್ಯನಾಗಿ ತಾನು ಮುಖ್ಯಮಂತ್ರಿಯಾಗುವುದನ್ನು ನಿರ್ಧರಿಸಬೇಕಾದವರು ತನ್ನ ಪಕ್ಷದ ಶಾಸಕರು ಮತ್ತು ನಾಯಕರು ಮತ್ತು ಅಕ್ಕಿ ಪಕ್ಕಿ ಕೊಡುವ ನೀತಿ ನಿರ್ಧಾರಗಳನ್ನೆಲ್ಲ ತೆಗೆದುಕೊಳ್ಳಬೇಕಾದದ್ದು ಒಂದು ಸಚಿವ ಸಂಪುಟ ಎಂಬ ಪ್ರಜಾಸತ್ತಾತ್ಮಕ ಸಂಸ್ಥೆಯ ಪರಿವೆಯೇ ಇದ್ದಂತಿಲ್ಲ. ಈ ಸಿದ್ದರಾಮಯ್ಯ ಚಾಮುಂಡೇಶ್ವರಿ ಕ್ಷೇತ್ರದ ಅಪಮಾನಕರ ಸೋಲಿನಿಂದ ಯಾವ ಪಾಠವನ್ನೂ ಕಲಿತಂತಿಲ್ಲ. ಜಾತಿರಹಿತ ಸಮಾಜದ ಪಾಠ ಹೇಳುವ ಸಮಾಜವಾದಿಯಾಗಿ ಸ್ವಜಾತಿ ಬಲದ ಕ್ಷೇತ್ರವೊಂದನ್ನು ಹುಡುಕಿಕೊಂಡು ಹೋಗಿ ಮಾನ ಉಳಿಸಿಕೊಂಡ ಮುಜುಗರವೂ ಅವರಿಗೆ ಇದ್ದಂತಿಲ್ಲ. ಇವರು ತಮ್ಮದೇ ಜಾತಿಯ ಬಿಜೆಪಿ ನಾಯಕ ಈಶ್ವರಪ್ಪನವರಿಗೆ ಹಾಕಿರುವ ರಾಜಕೀಯ ಸವಾಲಿನ ಪರಿ ನೋಡಿ: 'ಈ ಈಶ್ವರಪ್ಪ ತನ್ನ ಪಕ್ಷದಲ್ಲಿ ಎಷ್ಟು ಜನ ಕುರುಬರಿಗೆ ಟಿಕೆಟ್ ಕೊಡಿಸಿದ್ದಾನೆ ವಿಚಾರಿಸಿ!'

ಒಂದು ಕಡೆ ಕೋಮುವಾದಿ ಮತ್ತು ಹುಸಿ ದೇಶಭಕ್ತಿಯ ಪುಂಡು ರಾಜಕಾರಣ. ಇನ್ನೊಂದು ಕಡೆ ಕುಟುಂಬವಾದಿ ಪಾಳೆಗಾರಿ ರಾಜಕಾರಣ. ಆದರೆ ಈ ಎರಡೂ ಕಡೆಯವರೂ ಒಂದು ಒಮ್ಮತಕ್ಕೆ ಬಂದಂತೆ ಕಾಣುತ್ತದೆ. ಅದೆಂದರೆ ತಮ್ಮ ರಾಜಕಾರಣದಿಂದ ಈ ದೇಶದ ಬಡವರ ಕಷ್ಟವನ್ನು ಶಾಶ್ವತವಾಗಿ ನೀಗಲು ಸಾಧ್ಯವಿಲ್ಲವೆಂದು ತೀರ್ಮಾನಿಸಿದ್ದಾರೆ. ಹಾಗಾಗಿಯೇ ಈ ಇಬ್ಬರೂ 'ಕಿಸಾನ್ ಸಮ್ಮಾನ್ ಯೋಜನಾ' ಮತ್ತು 'ನ್ಯಾಯ್' ಎಂಬ ಹೆಮ್ಮೆಯ ಹೆಸರುಗಳಡಿ ಜನರಿಗೆ ನೇರ ಹಣ ಕೊಡಲು ಹೊರಟಿದ್ದಾರೆ. ಇದು ಈ ದೇಶದ ೭೦ ವರ್ಷಗಳ 'ಕಲ್ಯಾಣ ರಾಜ್ಯ' ಮತ್ತು 'ಅಭಿವೃದ್ಧಿ' ರಾಜಕಾರಣದ ಸಂಪೂರ್ಣ ವೈಫಲ್ಯದ ನಾಚಿಕೆಗೆಟ್ಟ ಒಪ್ಪಿಗೆಯೇ ಆಗಿದೆ. ಹಾಗೇ ಇದು ನಮ್ಮ ಇಂದಿನ ಒಟ್ಟಾರೆ ರಾಜಕಾರಣದ ಬೌದ್ಧಿಕ ದಿವಾಳಿತನದ ಪ್ರತೀಕವೂ ಹೌದು. ಈ ದಿವಾಳಿತನದ ಮಧ್ಯೆಯೇ ಜನತೆ ತನ್ನ ಆಯ್ಕೆ ಯಾವುದೆಂದು ನಿರ್ಣಯಿಸಬೇಕಿದೆ. ಕಾದು ನೋಡೋಣ.

**- ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

'ಹೊಸ ಮನುಷ್ಯ' ಏಪ್ರಿಲ್ ಸಂಚಿಕೆ ಸಮೃದ್ಧವಾಗಿ ಹೊರ ಬಂದಿದೆ. ಹೇಳಬಹುದಾದದ್ದು ಬೇಕಾದಷ್ಟಿದೆ; ಆದರೆ ಮೂರು ಟಿಪ್ಪಣಿಗಳಿಗಷ್ಟೇ ಮಿತಿಗೊಳಿಸುತ್ತೇನೆ. ಒಂದು: "ಹಟ್ಟಿ ಎಂಬ ನನ್ನೂರಿನ ಆ ಮುಸಲ್ಮಾನ ಅಜ್ಜ" ಒಂದು ಆತ್ಮೀಯ ನಿರೂಪಣೆ. ಆ ಬಗೆಯ ಅಜ್ಜಂದಿರು ಎಲ್ಲ ಕಾಲದಲ್ಲಿ, ಎಲ್ಲ ಕಡೆಯೂ ಇರುತ್ತಾರೆ. ಅವರನ್ನು ಗುರುತಿಸಿ, ಪ್ರೀತಿಸುವ ಹೃದಯ ವೈಶಾಲ್ಯತೆ ಮಾತ್ರವೇ ಕಳೆದುಹೋಗುತ್ತಿದೆ. ಎರಡು: 'ನಮ್ಮ ಹಳ್ಳಿಯ ಕಡೆಯ ಜನ' ಕವನ ತುಂಬ ಇಷ್ಟವಾಯಿತು; ನನ್ನ ಬಾಲ್ಯದ ನೆನಪುಗಳು ಮರುಕಳಿಸುವಂತೆ ಮಾಡಿತು. ಮೂರು: ಸುಮಾರು ಅರ್ಧ ಶತಮಾನದಷ್ಟು ದೀರ್ಘ ಕಾಲ ವಿಶ್ವವಿದ್ಯಾಲಯಗಳ ಜೊತೆ ನಿಕಟ ಸಂಬಂಧ ಹೊಂದಿದ್ದ ನನಗೆ, ಅವು 'ಪಿಎಚ್‌ಡಿ ಕಾರ್ಖಾನೆ'ಗಳಾಗಿ ಕಾರ್ಯನಿರ್ವಹಿಸುತ್ತಿರುವ ನಿಮ್ಮ ಟಿಪ್ಪಣಿ ನೋವಿನ ಸಂಗತಿ. ಅಭ್ಯರ್ಥಿಗಳೆನೋ ತಮ್ಮ ಹುದ್ದೆ, ಮುಂಬಡ್ತಿ ಕಾರಣಗಳಿಗೆ ಆ ಪದವಿಗೆ ಹಾತೊರೆಯುತ್ತಾರೆ; ಸುಲಭ ಮಾರ್ಗಗಳನ್ನು ಅರಸಿಕೊಂಡು ಹೋಗುತ್ತಾರೆ. ಆ ಬಗ್ಗೆ ತಕರಾರು ಇಲ್ಲ. ಈ ವ್ಯವಹಾರದಲ್ಲಿ ಮಾರ್ಗದರ್ಶಕರ ವೃತ್ತಿ ಧರ್ಮ ಮತ್ತು ನೈತಿಕ ಹೊಣೆ ರಾಜಿಯಾಗುತ್ತಿರುವುದು ಹೆಚ್ಚು ಆತಂಕಕಾರಿ ವಿಚಾರವಾಗಿ ತೋರಿಬರುತ್ತದೆ.

**-ಪ್ರೊ. ಹೆಚ್. ಎಸ್. ಈಶ್ವರ,** ಬೆಂಗಳೂರು

ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾದ ಡಾ. ನಾಗಭೂಷಣ ಪಟೇಲ್ ಅವರ ಯುವ ಲಹರಿ ಮನ ಕಲಕಿತು. ಒಂದೂ ಮುಸ್ಲಿಂ ಕುಟುಂಬ ಇಲ್ಲದಿದ್ದರೂ ಪಕ್ಕದೂರಿನಿಂದ ಮುಸ್ಲಿಂ ಮೌಲ್ವಿಗಳನ್ನು ಕರೆಸಿ ವಾರಗಟ್ಟಲೆ ಬಾಬಯ್ಯನ ಹಬ್ಬ ಮಾಡುತ್ತಿದ್ದ ನಮ್ಮೂರನ್ನು ನೆನಪಿಸಿತು. ಸರಳ ಮಾತಿನ ಚೊಕ್ಕ ನಿರೂಪಣೆ.

**-ಮಲ್ಲಿಕಾರ್ಜುನ ಹೊಸಪಾಳ್ಯ,** ತುಮಕೂರು

ಎಪ್ರಿಲ್ ತಿಂಗಳ 'ಹೊಸ ಮನುಷ್ಯ' ಓದಿದ ನಂತರ ಅನ್ನಿಸಿದ ಎರಡು ವಿಚಾರಗಳು. ನಮ್ಮ ವಿಶ್ವವಿದ್ಯಾಲಯಗಳನ್ನು ಪಿಎಚ್.ಡಿ ಕಾರ್ಖಾನೆಗಳು ಎಂದು ನೀವು ಸರಿಯಾಗಿ ಗುರುತಿಸಿದ್ದೀರಿ. ಪಿ ಎಚ್.ಡಿ ವಿದ್ಯಾರ್ಥಿಗಳ ಅಧ್ಯಯನ ಶ್ರದ್ದೆಗಳ ಕೊರತೆಯಂತೆಯೇ ಇವರಿಗೆ ಮಾರ್ಗದರ್ಶನ ಮಾಡುವ ಅಧ್ಯಾಪಕರಲ್ಲಿ ಬಹುತೇಕರಿಗೆ ಅಧ್ಯಯನದ ಕೊರತೆಯಿದೆ. ವಿದ್ಯಾರ್ಥಿಗಳಿಂದ ಲಕ್ಷ ಲಕ್ಷ ಪೀಕುವ, ಅವರನ್ನು ತಮ್ಮ ಗುಲಾಮರಂತೆ ನಡೆಸಿಕೊಳ್ಳುವ, ಹೆಣ್ಣುಮಕ್ಕಳನ್ನು ತಮ್ಮ ತೆವಲಿಗೆ ಈಡುಮಾಡುವ ನೀಚರ ಸಂಖ್ಯೆಯೂ ಸಾಕಷ್ಟಿದೆ.ಯು.ಜಿ.ಸಿ ಈ ಬಗ್ಗೆ ಗಂಭೀರ ಚಿಂತನೆ ನಡೆಸಬೇಕಿದೆ.

ಎನ್.ಕೆ ಮೋಹನರಾಮ್ ಲಂಕೇಶರ ಬಗ್ಗೆ ಬರೆದ ಪುಸ್ತಕದ ಬಗ್ಗೆ ಹಿಂದೆ ಬೇರೆ ಬೇರೆ ಪತ್ರಿಕೆಗಳಲ್ಲಿ ಓದಿದ್ದೆ. ಆದರೆ ಆ ಪುಸ್ತಕವನ್ನು ಕೊಂಡುಕೊಂಡು ಓದಬೇಕು ಅನ್ನಿಸಿರಲಿಲ್ಲ. ನಿಮ್ಮ ಟಿಪ್ಪಣಿ ಓದಿ ಆ ಪುಸ್ತಕ ಓದುವ ಕುತೂಹಲ ಮೂಡಿದೆ. ಲಂಕೇಶರನ್ನು ಹಲವು ಸಮಯ ಹತ್ತಿರದಿಂದ ನೋಡಿರುವ ನೀವು ಯಾಕೆ ನಿಮ್ಮ ಅನುಭವಗಳನ್ನು ಕುರಿತು ಒಂದು ಪುಸ್ತಕ ಬರೆಯಬಾರದು?

**-ಸರ್ಜಾಶಂಕರ್ ಹರಳಿಮಠ,** ಶಿವಮೊಗ್ಗ

ಪ್ರಸಕ್ತ ಲೋಕಸಭಾ ಚುನಾವಣೆಗಳ ಮುನ್ನಾ ದಿನಗಳ ರಾಜಕೀಯ ಸಂದರ್ಭ ಮತ್ತು 'ಮೋದಿ ಏಕೆ ಬೇಡ? ಎಂಬ ಪ್ರಶ್ನೆ ಕುರಿತು ಸಮಾಜದ ವಿವಿಧ ವರ್ಗಗಳಿಗೆ ಸೇರಿದ ಕೆಲ ಗಣ್ಯರ ಅಭಿಪ್ರಾಯಗಳು ಗಂಭೀರ ಓದಿಗೆ ಅರ್ಹವಾಗಿದ್ದವು. ಇವರಲ್ಲಿ ಕೆಲವರು ಲಕ್ಷಾಂತರ ರೂಪಾಯಿಗಳ ಸಂಬಳ ಭತ್ಯೆಗಳ ಕೌಟುಂಬಿಕ ಆದಾಯವುಳ್ಳವರಾಗಿ ಸ್ವತಃ ಅವರೇ ಬಂಡವಾಳಶಾಹಿ ವ್ಯವಸ್ಥೆಯ ನಿಯಮಿತ ಫಲಾನುಭವಿಗಳಾಗಿದ್ದುಕೊಂಡೇ ಮೋದಿ ಆಡಳಿತವನ್ನು ನವ ವಸಾಹತುಶಾಹಿ-ಬಂಡವಾಳಶಾಹಿ ಎಂದೆಲ್ಲ ದೂಷಿಸುವುದು ಆತ್ಮದ್ರೋಹದ ಮಾತಲ್ಲದೆ ಮತ್ತೇನಲ್ಲ. ಇಂಥವರು ಮೋದಿಯನ್ನು ಟೀಕಿಸಿದಷ್ಟೂ ಮೋದಿ ಬಲಗೊಳ್ಳುತ್ತಾರೆ ಎಂಬುದು ಇವರಿಗೆ ತಿಳಿದರೆ ಒಳ್ಳೆಯದು. ಇದೇ ರೀತಿ ಯಾವ ಎಗ್ಗೂ ಇಲ್ಲದೆ ಲಕ್ಷಾಂತರ ರೂಪಾಯಿಗಳ ಸಂಬಳ ಪಡೆಯುವ ಬಂಡಾಯ ಕವಿಗಳು ತಮ್ಮ ಕವಿತೆಗಳಲ್ಲಿ 'ರಾಜನ ವಜ್ರದ ಕಿರೀಟ ಹರಾಜಿಗೆ ಬರಲಿ/ಬಡವರಿಗೆ ಸೂರು ಸಿಗಲಿ' ಎಂಬ ಸಾಲುಗಳ ಜೊತೆಗೇ 'ಮುಗಿಲು ಮುಟ್ಟಿರುವ ನಮ್ಮ ಸಂಬಳಗಳೂ ನೆಲಕ್ಕೆ ಕುಸಿಯಲಿ' ಎಂಬ ಸಾಲನ್ನೂ ಸೇರಿಸಿದರೆ ಮಾತ್ರ ಅದು ವಿಶ್ವಾಸಾರ್ಹವೆನಿಸುವುದೇನೊ!

**-ಡಿ.ಬಿ. ಶಿವಕುಮಾರಸ್ವಾಮಿ,** ದಾವಣಗೆರೆ

ಭಾಷೆ, ಸಂಸ್ಕೃತಿ, ನೆಲ, ಜಲ ಇತ್ಯಾದಿ ವಿಷಯಗಳ ವೈವಿಧ್ಯದಿಂದ ಕೂಡಿ ಮಹಾಕುಟುಂಬದಂತಿರುದ ನಮ್ಮ ದೇಶದ ಜನರ ರಾಜಕೀಯ ಆಶೋತ್ತರಗಳನ್ನು ಹಲವು ತಪ್ಪು ನಡೆಗಳ ನಡುವೆಯೂ-ಅವಕ್ಕೆಲ್ಲ ಶಿಕ್ಷ ಅನುಭವಿಸುತ್ತಲೇ-ಬಹುಮುಖಿಯಾಗಿ ಪ್ರತಿಬಿಂಬಿಸುವ ಕಾಂಗ್ರೆಸ್‌ನ್ನು ವೀರಾವೇಶದ ಭಾಷಣಗಳ ಮೂಲಕವೇ ತಮ್ಮ 'ಕಾಂಗ್ರೆಸ್‌ಮುಕ್ತ ಭಾರತ ಘೋಷಣೆ ಹಾಕಿ ಈ ದೇಶದಿಂದಲೇ ಉಚ್ಚಾಟಸಲು ಯತ್ನಿಸುತಿರುವುದು ಹಾಸ್ಯಸ್ಪದವಾಗಿದೆ. ಈ ಸಂಬಂಧದ ತಮ್ಮ ಸಂಪಾದಕೀಯದ ಸಾಲುಗಳು ಮನನೀಯವಾಗಿವೆ. ಆದರೆ ಇಂದು ಮಾಧ್ಯಮಗಳೂ ಇಂಥವರ ಕೈವಶವಾಗುರುವುದು ನಿಜವಾಗಿಯೂ ದುರಂತದ ಸಂಗತಿ.

**-ಪ್ರೊ.ಎಚ್. ಸಿದ್ದೇಗೌಡ,** ಚನ್ನರಾಯಪಟ್ಟಣ

ಯುವಲಹರಿ

# ಹೇ ರಾಮ್!

–ಅರವಿಂದ. ಇ.



**ವಾ**ಲಿಯನ್ನು ಕೊಂದ ರಾಮ ನ್ಯಾಯವಂತನೆ?

ಶೂದ್ರ ತಪಸ್ವಿಯನ್ನು ಕೊಂದ ರಾಮ ಧರ್ಮರಕ್ಷಕನೆ?

ಸೀತೆಯನ್ನು ಅರಣ್ಯಕ್ಕಟ್ಟಿದ ರಾಮ ಪುರುಷೋತ್ತಮನೆ?

ರಾಮಭಜನೆಯಿಂದ ಮೋಕ್ಷ ದೊರೆಯುವುದೇ?

ನನ್ನ ನಾಲ್ಕನೇ ಸೆಮಿಸ್ಟರ್‌ನ ಕಿರುಪ್ರಬಂಧ ರಚಿಸಲು ಸದಾಶಿವ ಯೋಗಿ ಎಂಬುವವರ 'ಭಾರತೀಯರಿಗೆ ಭಗವಂತರೆಷ್ಟು?' ಕೃತಿಯನ್ನು ಓದುತ್ತಿದ್ದೆ. ಕಾಕತಾಳೀಯವೆಂಬಂತೆ ಅಂದು ಶ್ರೀರಾಮನವಮಿಯೂ ದಿವಸ. ಈ ಸಂದರ್ಭದಲ್ಲಿ ಈ ಪ್ರಶ್ನೆಗಳನ್ನು ನಾನು ನನ್ನ ವಾಟ್ಸಾಪ್ ಸ್ಟೇಟಸ್‌ಗೆ ಹಾಕಿಕೊಂಡಿದ್ದೆ. ಇದಕ್ಕೆ ನನ್ನ ಗೆಳೆಯನೊಬ್ಬ 'ಯಾವುದಾದರೂ ಮಸೀದಿಗೆ ಹೋಗಿ ಮುಂಜಿ ಮಾಡಿಸಿಕೊಂಡು ಜೀವನ ಮಾಡು, ನೀನು ಹಿಂದೂ ಧರ್ಮಕ್ಕೆ ನಾಲಾಯಕ್ಕು ಎಂದು ಪ್ರತಿಕ್ರಿಯಿಸಿದ್ದ. ಅಷ್ಟೇ ಅಲ್ಲದೆ, ಇನ್ನೊಂದು ಬಾರಿ ನನ್ನ ಧರ್ಮದ ಬಗ್ಗೆ ಪೋಸ್ಟ್ ಹಾಕಬೇಡ, ಹಾಕಿದ್ರೆ ಹುಡುಕಿಕೊಂಡು ಬಂದು ಹೊಡಿತಿನಿ, ನಿಮ್ಮಂತ ನನಮಕ್ಕಳು ಇರುವುದರಿಂದಲೇ ನನ್ನ ದೇಶ ಹಿಂಗೆ ಇರೋದು, ನಾನೊಬ್ಬ ಹಿಂದೂ ಧರ್ಮದಲ್ಲಿ ಹುಟ್ಟುವುದಕ್ಕೂ, ಹಿಂದೂ ಎಂದು ಹೇಳಿಕೊಳ್ಳುವುದಕ್ಕೂ ಧಮ್ ಬೇಕಲೇ ಗುಬಾಲ್ಡ್!' ಎಂದೂ ಪ್ರತಿಕ್ರಿಯಿಸುತ್ತಾ ಬೆದರಿಕೆ ಹಾಕಿದ್ದ. ಇದು ಧರ್ಮರಕ್ಷಕರು ಎಂದು ಸ್ವಯಂಘೋಷಿಸಿಕೊಂಡಿರುವವರ ಧರ್ಮರಕ್ಷಣೆಯ ವಿಧಾನ ಹಾಗೂ ಅವರ ಧರ್ಮದ ಭಾಷೆ. ಇಷ್ಟಕ್ಕೇ ಇವರ ಒಣ ಆರ್ಭಟ ನಿಲ್ಲದೇ ಇನ್ನೂ ಅಸಭ್ಯವಾಗಿ, ಅಶ್ಲೀಲವಾಗಿ ಮುಂದುವರೆಯುತ್ತದೆ. ವಾಲ್ಮೀಕಿ–ತುಳಸೀದಾಸರಿಂದ ಹಿಡಿದು ನಮ್ಮ ಕುವೆಂಪುರವರೆಗೆ ಸ್ತುತಿಸಲ್ಪಟ್ಟು ಗಾಂಧಿಜಿಯರ ಕೊನೆಯ ಕ್ಷಣದಲ್ಲಿ ಅವರ ನಾಲಿಗೆ ಮೇಲೆ ನಲಿದ ರಾಮ ಇವರ ಕಲ್ಪನೆಯ ರಾಮನೇ? ಎಂದು ಆಶ್ಚರ್ಯವಾಗುತ್ತದೆ.

ನಾನು ಕೇಳಿದ ಪ್ರಶ್ನೆಯಲ್ಲಿ ಹುಡುಕಿದರೂ ಹಿಂದೂ ಧರ್ಮಕ್ಕೆ ಅವಹೇಳನವಾಗಿರುವ ಯಾವುದೇ ಅಂಶ ಕೂಡಾ ಇಲ್ಲ. ಇಲ್ಲಿ ಧರ್ಮರಕ್ಷಕರಿಗೆ ಪ್ರಶ್ನೆ ಯಾವುದು? ಅವಹೇಳನಕಾರಿ ಸಂಗತಿ ಯಾವುದು ಎಂಬ ವ್ಯತ್ಯಾಸ ಕೂಡ ತಿಳಿಯದಷ್ಟು ಅಂಧಭಕ್ತರಾಗಿರುವ ಇವರು ಹೇಗೆ ಧರ್ಮವನ್ನು ರಕ್ಷಿಸಿಯಾರು? ಅಷ್ಟಕ್ಕೂ ಧರ್ಮ ಎಂದರೆ ಏನು? ಧರ್ಮ ರಕ್ಷಣೆ ಎಂದರೆ ಏನು? ಏತಕ್ಕಾಗಿ ಧರ್ಮರಕ್ಷಣೆ? ಎಂಬುದು ಇವರಿಗೆ ತಿಳಿದಿದೆಯೋ ಇಲ್ಲವೋ ಆ ಶ್ರೀರಾಮನೇ ಬಲ್ಲ! ಭಾರತದಲ್ಲೇನು, ಏಷ್ಯಾದ ತುಂಬ ರಾಮಾಯಣದ ಕಥೆ ಹರಡಿದ್ದು ಅದರ ಹಲವಾರು ಆವೃತ್ತಿಗಳು ಪ್ರಚಲಿತವಿದ್ದು, ಆರಂಭದಲ್ಲಿ ನಾನು ಮಂಡಿಸಿದ ಪ್ರಶ್ನೆಗಳನ್ನೂ ಮೀರಿದ ಹಲವಾರು ಪ್ರಶ್ನೆಗಳು ಈ ರಾಮಾಯಣಗಳಲ್ಲಿ ಎತ್ತಲ್ಪಟ್ಟಿವೆ ಎಂಬುದು ಇವರಿಗೆ ಗೊತ್ತಿದೆಯೇ? ನಮ್ಮ ಪುರಾತನರಿಗೆ, ನಮ್ಮ ಜನಪದರಿಗೆ ಇದ್ದ ವಿವೇಕ, ವಿಮರ್ಶಾತ್ಮಕ ಬುದ್ಧಿ ಇವರಲ್ಲಿ ಕಾಣೆಯಾಗಿರುವುದೇಕೆ?

ನನ್ನ ಗೆಳೆಯನ ಅಶ್ಲೀಲ ಪ್ರತಿಕ್ರಿಯೆಗೆ ಸಗಣಿಯ ಜೊತೆ ಸರಸವಾಡುವುದಕ್ಕಿಂತ ಗಂಧದ ಜೊತೆ ಗುದ್ದಾಡುವುದೇ ಲೇಸು ಎಂಬ ಕುವೆಂಪು ಅವರ ವಾಣಿಯಂತೆ ಕಿರುನಗೆಯನ್ನಷ್ಟೇ ಸೂಸಿ ಮತ್ತೆ ನನ್ನ ಓದಿಗೆ ಮರಳಿದೆ. ಏಕೆಂದರೆ ಇದು ನನಗೆ ಕೇವಲ ಒಬ್ಬನ ಪ್ರತಿಕ್ರಿಯೆಯಾಗಿರಲಿಲ್ಲ. ಇಲ್ಲಿ ಯಾವುದೇ ಧರ್ಮದ ಬಗ್ಗೆ ಪ್ರಶ್ನಿಸುವುದಿರಲಿ ಅದರ ಬಗ್ಗೆ ಚಕಾರವೆತ್ತುವುದೂ ಕೂಡ ಅಪಾಯಕಾರಿಯೇ ಎನ್ನಿಸಿತು. ಇದು ಧರ್ಮಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಆಳುವ ಪ್ರಭುತ್ವವನ್ನು ಪ್ರಶ್ನಿಸಿದರೂ ಕೂಡ ಇಂತಹ ಉತ್ತರಗಳೇ ನಮಗೆ ಸಿಗುವುದು.

ಭಾರತ ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶ ಎನ್ನಲಾಗುತ್ತದೆ. ಆದರೆ ಇಲ್ಲಿ ಪ್ರಜೆಗಳ ಮತಕ್ಕೆ ನೆಲೆಯೂ ಇಲ್ಲ, ಬೆಲೆಯೂ ಇಲ್ಲವಾಗಿದೆ, ವೈಚಾರಿಕವಾಗಿ ಅಥವಾ ಅನ್ಯಾಯವನ್ನು ಖಂಡಿಸುವಾಗ, ಪ್ರಭುತ್ವವನ್ನು ಪ್ರಶ್ನಿಸುವಾಗ ಬರುವ ಇಂತಹ ಉತ್ತರಗಳು ಪ್ರಶ್ನಿಸುವವರ ಧ್ವನಿಯನ್ನೇ ದಮನ ಮಾಡಬಯಸುತ್ತವೆ ಎಂದಾಗ ನನ್ನ ದೇಶ ನಿಜವಾಗಿಯೂ ಪ್ರಜಾಪ್ರಭುತ್ವ ದೇಶವಾ ಎಂಬ ಅನುಮಾನ ಮೂಡುತ್ತದೆ. ಆ ಅಭಿವ್ಯಕ್ತಿ ಸ್ವಾತಂತ್ರ್ಯವೇ ಇಲ್ಲವಾದಾಗ ಪ್ರಜಾಪ್ರಭುತ್ವಕ್ಕಿರುವ ನೆಲೆಯಾದರೂ ಯಾವುದು?

ಪ್ರಶ್ನಿಸದೇ ಏನನ್ನೂ ಒಪ್ಪಬೇಡಿ, ಯಾರೂ ಪ್ರಶ್ನಾತೀತರಲ್ಲ, ಯಾವ ಧರ್ಮ ಸಿದ್ಧಾಂತವೂ ಪ್ರಶ್ನಾತೀತವಲ್ಲ. ಇದನ್ನು ಪ್ರಾಣಿ ಬಲಿ ಪೋಷಿತವಾಗಿದ್ದ ವೈದಿಕ ಧರ್ಮವನ್ನು ಮೌಢ್ಯಗಳಿಂದ ಮುಕ್ತಗೊಳಿಸಲು ಯತ್ನಿಸಿದ 'ಬುದ್ಧನಿಂದ ಹಿಡಿದು 'ನಿರಂಕುಶಮತಿಗಳಾಗಿ; ಎಂದ ಕುವೆಂಪು ಅವರವರೆಗೂ ಎಲ್ಲ ಮಹಾಪುರುಷರೂ ಹೇಳಿದ್ದಾರೆ. ಸಾಮಾಜಿಕ ಸ್ವಾಸ್ಥ್ಯವೇ ಧರ್ಮದ ಗುರಿಯಾಗಿರುವುದಾದರೆ, ಸಮಾಜದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅಡಗಿಸಿ ಅದನ್ನು ಸಾಧಿಸಲಾಗುವುದೆ?.

ಅಷ್ಟಕ್ಕೂ ಇವರಿಗೆ ಈ ಅಧಿಕಾರ ನೀಡಿರುವುದಾದರೂ ಯಾರು? ಅಷ್ಟಕ್ಕೂ ಇವರು ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವ ಪ್ರಯತ್ನ ಮಾಡುತ್ತಿರುವುದಾದರೂ ಯಾಕೆ? ಇನ್ನೊಬ್ಬರ ಅಭಿಪ್ರಾಯವನ್ನು ಹತ್ತಿಕ್ಕುವ ಧೈರ್ಯವಾದರೂ ಇವರಿಗೆ ಎಲ್ಲಿಂದ ಬರುತ್ತದೆ ಎಂಬ ಹಲವು ಪ್ರಶ್ನೆಗಳಿಗೆ ಉತ್ತರ ನೀಡುವವರು ಯಾರು? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಸವಾಲಿನ ಕೆಲಸವೇ.

ಎಲ್ಲವನ್ನೂ ಕುರುಡು ಕುರುಡಾಗಿ ನಂಬುವುದು ಸುಲಭ. ಅಂತಹ ಸುಲಭ ನಂಬಿಕೆಯವರನ್ನು ಭಾವಾನಾತ್ಮಕ ಐಕ್ಯತೆಯ ಮಾತುಗಳಿಂದ ಸಂಘಟಿಸುವುದೂ ಸುಲಭ.. ಅಷ್ಟೇ ಅಲ್ಲದೆ ಯಾವುದೋ ಒಂದು ಮತದ ಸನ್ನಿಗೋ ಅಥವಾ ಸಿದ್ಧಾಂತದ ಕಾರ್ಯಕರ್ತರಾದಾಗ ಸಹಜವಾಗಿಯೇ ವಿರುದ್ಧವಾದ ಅಭಿಪ್ರಾಯಗಳನ್ನು ಒಪ್ಪುವುದಕ್ಕೆ ಅವರು ಸಿದ್ಧರಿರುವುದಿಲ್ಲ. ಒಂದು ಸಿದ್ಧಾಂತ, ಮತ, ರಾಜಕೀಯ ಪಂಥದ ಕಾರ್ಯಕರ್ತರಾಗಿ' ಪೂರ್ವಾಗ್ರಹಗಳಿಗೆ ಒಳಗಾದಾಗ ನಾವು ಏನು ಮಾಡುತ್ತಿದ್ದೇವೆ ಎಂಬುದು ನಮಗೆ ಅರಿವೇ ಇರುವುದಿಲ್ಲ. ಏಕೆಂದರೆ ಆಗ ಆಲೋಚನಾ ಹೀನರಾಗುತ್ತೇವೆ. ಹೀಗಿರುವಾಗ ನಾವು ಪ್ರಶ್ನಿಸುವ ಮನೋಭಾವವನ್ನೇ ಕಳೆದುಕೊಳ್ಳುತ್ತೇವೆ.

ಇವೆಲ್ಲವುಗಳಿಗಿಂತ ಮಾನವೀಯತೆಯೇ ಅಂತಿಮ ಸತ್ಯ. ಮಾನವೀಯ ಗುಣವನ್ನು ಮೈಗೂಡಿಸಿಕೊಳ್ಳದಿದ್ದರೆ ಮನಸ್ಸು ಮತ್ತು ಹೃದಯಗಳು ಸಿದ್ಧಾಂತದ ಅಥವಾ ಪಕ್ಷದ ಕಾರ್ಯಕರ್ತರಾಗಿಯೇ ಉಳಿದುಬಿಡುವ ಸಾಧ್ಯತೆಗಳು ಹೆಚ್ಚು. ಇದು ನಮ್ಮನ್ನು ಅಮಾನವೀಯರನ್ನಾಗಿ ಮಾಡುತ್ತದೆ. ಆದ್ದರಿಂದ ಪಕ್ಷವೊಂದರ, ಸಿದ್ಧಾಂತವೊಂದರ ಅಭಿಮಾನಿ ಅಥವಾ ಅನುಯಾಯಿಗಳಾಗುವುದು ತಪ್ಪಲ್ಲ. ಆದರೆ ಅದನ್ನು ವಿಮರ್ಶಿಸುವುದನ್ನೂ ಕಲಿಯದೆ ಅಲ್ಲೇ ಸ್ಥಗಿತವಾಗುವುದು ಅಪಾಯಕಾರಿ. ಅದು ನಮ್ಮನ್ನು ಅಲ್ಪಬುದ್ಧಿಯ ಕ್ರೂರಿಗಳನ್ನಾಗಿ ಮಾಡುತ್ತದೆ. ಇಂದು ಸಮಾಜದಲ್ಲಿ ಕಾಣುತ್ತಿರುವ ಅಸಹಿಷ್ಣುತೆ ಮತ್ತು ಅಶಾಂತಿಗೆ ಇದೇ ಕಾರಣವಾಗಿದೆ.

ಕಾಲ್ಪನಿಕ ಜಗತ್ತು ಹಾಗೂ ಸಂಗತಿಗಳು ಪ್ರಬಲವಾದಾಗ ವಾಸ್ತವ ಜಗತ್ತು ಹಾಗೂ ವಾಸ್ತವಿಕ ಸಂಗತಿಗಳು ನಮಗೆ ಅರಿವಿಗೆ ಬರುವುದಿಲ್ಲ. ಯಾವುದೋ ಒಂದು ವ್ಯವಸ್ಥೆ ಇಲ್ಲವೇ ಪ್ರಭುತ್ವ ಜನರನ್ನು ಯೋಚಿಸದ ಹಾಗೆ ಮಾಡಿ, ಅವರನ್ನು ತಮ್ಮ ಸಿದ್ಧಾಂತದ ಅಥವಾ ಧರ್ಮದ, ಅಭಿಪ್ರಾಯದ ಗ್ರಾಹಕರನ್ನಾಗಿ ಮಾಡಿಕೊಳ್ಳುತ್ತವೆ. ನಾವು ಗ್ರಾಹಕರಾದಾಗ ಅವರು ನೀಡಿದ್ದನ್ನಷ್ಟೇ ಸ್ವೀಕರಿಸಬೇಕು. ಕೆಡುಕಿಗೆ ರೆಕ್ಕೆಗಳಿವೆ. ಒಳಿತಿಗೆ ಇರುವೆಯ ವೇಗ. ಕೆಡುಕು ಬಹಳ ಬೇಗ ಜನರನ್ನು ತಲುಪಿ ಒಳಿತಿನ ಜಾಗವನ್ನು ಆಕ್ರಮಿಸಿಕೊಂಡಿರುತ್ತದೆ. ನಿಧಾನವಾದ ಒಳಿತಿನಿಂದ ಇಂತಹ ಸ್ಥಿತಿಗೆ ಕಾರಣವಾಗಿರಬಹುದು. ಮನುಷ್ಯ ವಾಸ್ತವಿಕ ಲೋಕವನ್ನು ಸುಳ್ಳು ಎಂದು ಭಾವಿಸಿ, ಕಾಲ್ಪನಿಕ ಲೋಕವನ್ನೇ ನಿಜವೆಂದು ಭಾವಿಸಿ ಬದುಕುತ್ತಿರುತ್ತಾನೆ. ಇದರಿಂದ ಅವನು ಮತ್ತೊಬ್ಬರ ಧ್ವನಿ ಹತ್ತಿಕ್ಕುವ ಪ್ರಯತ್ನ ನಡೆಸುತ್ತಿರಬಹುದು. ಸಾಕ್ರೆಟಿಸ್ ಹೇಳುವಂತೆ ಯಾವ ವಿಚಾರವನ್ನು ಒಬ್ಬ ವ್ಯಕ್ತಿಯಲ್ಲಿ ಹೊರಗಿನಿಂದ ತುರುಕಲು ಸಾಧ್ಯವಿಲ್ಲ. ಅದು ಅಂತರಾಳದಿಂದಲೇ ಬರಬೇಕು. ಪ್ರತಿಯೊಂದರ ಅರಿವು ಬಯಸುವುದು ಮನುಷ್ಯನ ಮೂಲಭೂತ ಗುಣವಾಗಬೇಕು.



**(ಲೇಖಕ ಅರವಿಂದ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸ್ನಾತಕೋತ್ತರ ವಿದ್ಯಾರ್ಥಿ)**

**ಹಿರಿಯ ಕವಿ ಬಿ.ಎ. ಸನದಿ, ಮತ್ತು ರಂಗಕರ್ಮಿ ಎಸ್. ಮಾಲತಿ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.–ಸಂ.**

ವಿಚಾರ–೧

# ರಾಷ್ಟ್ರೀಯತೆಯ ಅರ್ಥ-ಅಪಾರ್ಥಗಳು; ಕೆಲ ಚಿಂತನೆಗಳು

–ಪ್ರೊ. ಎಸ್. ಚಂದ್ರಶೇಖರ್



ಇತ್ತೀಚಿನ ದಿನಗಳಲ್ಲಿ ಈ ನಮ್ಮ ದೇಶದಲ್ಲಿ ರಾಷ್ಟ್ರೀಯತೆ ಕುರಿತ ಅಬ್ಬರದ ಮಾತುಗಳು ಸಾರ್ವಜನಿಕ ಜೀವನದ ಶಾಂತಿಯನ್ನು ಕದಡುತ್ತಿರುವ ಸಂದರ್ಭದಲ್ಲಿ ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಕಳೆದ ಜನವರಿ ೧೨ ಹಾಗೂ ೧೩ರಂದು ಕುಪ್ಪಳ್ಳಿಯಲ್ಲಿ ' ರಾಷ್ಟ್ರೀಯತೆ ಅರ್ಥ–ಅಪಾರ್ಥಗಳು' ಎಂಬ ವಿಷಯ ಕುರಿತು ಅಧ್ಯಯನ ಶಿಬಿರವೊಂದನ್ನು ಆಯೋಜಿಸಿತ್ತು. ಈ ಶಿಬಿರದ ಉದ್ಘಾಟನಾ ಭಾಷಣದ ಬರಹ ರೂಪ ಇಲ್ಲಿದೆ. ಮುಂದಿನ ಪುಟಗಳಲ್ಲಿ ಶಿಬಿರದ ಇನ್ನೆರಡು ಉಪನ್ಯಾಸಗಳ ಪಠ್ಯಗಳಿವೆ. ಮಿಕ್ಕ ಪಠ್ಯಗಳು ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ಪ್ರಕಟಗೊಳ್ಳಲಿವೆ. ಓದುಗಗರಿಂದ ಚರ್ಚೆಗೆ ಸ್ವಾಗತವಿದೆ–ಸಂ,

ರಾಷ್ಟ್ರೀಯತೆ – ಅದರ ಆಧುನಿಕ ಅರ್ಥದಲ್ಲಿ ವಿವಿಧ ರೀತಿಯ ವ್ಯಾಖ್ಯಾನಗಳಿಗೆ ಒಳಪಟ್ಟಿದೆ. ಹಾಗೆ ನೋಡಿದರೆ ಅದು ಮೂಲತಃ ಹತ್ತೊಂತ್ತನೇ ಶತಮಾನದ ಆಧುನಿಕ ಬಂಡವಾಳಶಾಹಿ ಪರಿಕಲ್ಪನೆ–ಸಿದ್ಧಾಂತ. ರಾಷ್ಟ್ರೀಯತೆಯನ್ನು ಹಲವು ರೀತಿಯಲ್ಲಿ ವಿವರಿಸಲಾಗಿದೆ. ಅವನ್ನು ಸಂಕ್ಷಿಪ್ತವಾಗಿ ಹೀಗೆ ಗುರುತಿಸಬಹುದು.

೧. ಒಂದು ಜನಸಮುದಾಯ, ರಾಷ್ಟ್ರೀಯ ಸಮುದಾಯವಾಗಿ, ರಾಷ್ಟ್ರೀಯ ಪ್ರಭುತ್ವವಾಗಿ, ರಾಷ್ಟ್ರೀಯ ಸಂಸ್ಕೃತಿಯಾಗಿ ರೂಪುಗೊಳ್ಳುವ ಪ್ರಕ್ರಿಯೆ.

೨. ಪರಕೀಯರ ಆಕ್ರಮಣ, ಆಳ್ವಿಕೆ, ಶೋಷಣೆ, ದಬ್ಬಾಳಿಕೆಯಿಂದ ಬಿಡುಗಡೆಯಾಗಲು ಹವಣಿಸುವ ಸಂಘಟಿತ ಪ್ರಯತ್ನ, ಹೋರಾಟ.

ಈ ಹೋರಾಟಕ್ಕೆ ಸಾಮಾನ್ಯವಾಗಿ ಒಂದು ಸೈದ್ಧಾಂತಿಕ–ತಾತ್ವಿಕ ಚೌಕಟ್ಟು, ನಾಯಕತ್ವ ಇರುತ್ತದೆ. ಮಾರ್ಕ್ಸ್ – ಎಂಗೆಲ್ಸ್ ಮತ್ತು ಲೆನಿನ್ನರು ರಾಷ್ಟ್ರೀಯತೆಯನ್ನು ವಿವರಿಸುವ ರೀತಿ ಸ್ವಲ್ಪ ಭಿನ್ನ. ಈ ಚಿಂತನಾಕ್ರಮದ ಪ್ರಕಾರ ಅದು ಮುಖ್ಯವಾಗಿ ಬಂಡವಾಳವಾದಿ ಚಾರಿತ್ರಿಕ ಘಟ್ಟದ ಕೂಸು. ರಾಷ್ಟ್ರೀಯ ಶಕ್ತಿಗಳ ಜಯವೆಂದರೆ ಊಳಿಗಮಾನ್ಯ ಶಕ್ತಿಗಳ ನಿರ್ನಾಮವೆಂದೇ ಅವರ ಅಭಿಮತ. ಅದೇನೇ ಇರಲಿ, ಭಾರತೀಯ ಸಂದರ್ಭದಲ್ಲಿ ರಾಷ್ಟ್ರೀಯತೆಯನ್ನು ಕುರಿತು ವಿವೇಚಿಸುವಾಗ ಹಲವು ಅಂಶಗಳನ್ನು ಗಂಭಿರವಾಗಿ ಪರಿಗಣಿಸಬೇಕು. ಏಕೆಂದರೆ ಭಾರತ ತನ್ನ ರಾಷ್ಟ್ರೀಯತೆಯನ್ನು ರೂಪಿಸಿಕೊಂಡದ್ದು ವಸಾಹತುಶಾಹಿ ಸನ್ನಿವೇಶದಲ್ಲಿ. ಅದು ಏಕ ರೂಪದ ರಾಜಕೀಯ, ಆರ್ಥಿಕ, ಸಾಮಾಜಿಕ–ಸಾಂಸ್ಕೃತಿಕ ವ್ಯವಸ್ಥೆಯಾಗಿರದೆ ಬಹುಮುಖೀ–ವೈವಿಧ್ಯಮಯ ಭೌಗೋಳಿಕ ಪ್ರದೇಶವಾಗಿತ್ತು. ಅದು ಈಗಲೂ ಹಾಗೆಯೇ ಇದೆ.

ಭಾರತೀಯ ನವೋದಯ – ರಾಷ್ಟ್ರೀಯತೆಗಳ ಹಿಂದಿನ ಪ್ರೇರಣೆಗಳಲ್ಲಿ ಪಾಶ್ಚಾತ್ಯ ಬಂಡವಾಳವಾದ ಮತ್ತು ಉದಾರವಾದಗಳು ಮುಖ್ಯವಾದುವು. ಜಗತ್ತೆಲ್ಲಾ ಬಂಡವಾಳಶಾಹಿಗಳ ಮಾರುಕಟ್ಟೆಯಾಗಿ ಪರಿವರ್ತಿತವಾಗುತ್ತಿದ್ದ ಕಾಲ ಅದು. 'ರಾಷ್ಟ್ರೀಯತೆ ಹುಟ್ಟಿದ್ದೇ ಮಾರುಕಟ್ಟೆಯಲ್ಲಿ' ಎನ್ನುವ ಲೆನಿನ್ನನ ಮಾತುಗಳು ಈ ಹಿನ್ನೆಲೆಯಲ್ಲಿ ಅರ್ಥಪೂರ್ಣ. ಪಾಶ್ಚಾತ್ಯ ಉದಾರವಾದದ ಜೊತೆ ಜೊತೆಗೆ ರಾಷ್ಟ್ರೀಯತೆ, ಜನತಂತ್ರ ಬೆಳೆದವು. ಕೈಗಾರಿಕಾ ಕ್ರಾಂತಿ ಮತ್ತು ಬಂಡವಾಳಶಾಹಿಯ ಹುಟ್ಟು, ಬೆಳವಣಿಗೆಗಳೇ ವಸಾಹತುವಾದದ ಬೆಳವಣಿಗೆಗೆ ಮತ್ತು ಭಾರತವೂ ಸೇರಿ ಬಹುತೇಕ ಮೂರನೇ ಜಗತ್ತಿನ ದೇಶಗಳು ವಸಾಹತುಗಳಾಗಲು ಮುಖ್ಯ ಕಾರಣಗಳು. ಬಹುಮುಖೀ ಭಾರತೀಯ ಸಮಾಜದ ಮೇಲ್‌ಸ್ತರದಲ್ಲಿದ್ದವರೇ ಆಂಗ್ಲರ ಸಂಪರ್ಕ–ವಿದ್ಯೆ ಮತ್ತು ಆಡಳಿತದಲ್ಲಿ ಇದ್ದಿರಬಹುದಾದ ಅಲ್ಪ–ಸ್ವಲ್ಪ ಅನುಕೂಲಗಳನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಈ ವರ್ಗವೇ ಭಾರತ ರಾಷ್ಟ್ರೀಯತೆಯ ಮಂದ್ರಸ್ವರವಾದ ಧಾರ್ಮಿಕ ಸಾಮಾಜಿಕ ಸುಧಾರಣೆಗಳ ನೇತೃತ್ವ ವಹಿಸಿ ನಂತರದ ಉದಾರವಾದಿ ರಾಷ್ಟ್ರೀಯ ಚಳವಳಿಯ ಹುಟ್ಟಿಗೂ ಕಾರಣವಾಯಿತು.

## ಲೋಕ ಸಂಸ್ಕೃತಿಗೆ ಪರಕೀಯವಾದ ರಾಷ್ಟ್ರೀಯತೆ

ಇಲ್ಲಿಇನ್ನೊಂದು ಮುಖ್ಯ ಅಂಶವನ್ನೂ ಗಮನಿಸಬೇಕಾಗಿದೆ. ಇವರೆಲ್ಲಾ ಹಿಂದೂ ಮೇಲ್‌ಜಾತಿಗಳವರಾದ್ದರಿಂದ, ಶೂದ್ರ–ದಲಿತರ ಲೋಕ–ಸಂಸ್ಕೃತಿಗಳಿಗೆ ಪರಕೀಯರಾಗಿ, ಅಥವಾ ನಿರ್ಲಿಪ್ತರಾಗಿ ತಮ್ಮ ಸುಧಾರಣಾ ಮತ್ತು ರಾಷ್ಟ್ರೀಮತಾ ತಾತ್ವಿಕತೆಗಳನ್ನು ರೂಪಿಸಿಕೊಂಡರು. ಬಿ.ವೆಂಕಟಾಚಾರ್ಯರಿಂದ ಬಂಗಾಳಿ ಭಾಷೆಯ ಬಂಕಿಮ ಚಂದ್ರರ 'ಆನಂದ ಮಠ' ಕಾದಂಬರಿ ಕನ್ನಡಕ್ಕೆ ಭಾಷಾಂತರಗೊಂಡು ೧೯ನೇ ಶತಮಾನದ ಕೊನೆಯ ವರ್ಷಗಳಲ್ಲಿ ಪ್ರಕಟಗೊಂಡಿತು. – ಭಾರತದ 'ರಾಷ್ಟ್ರೀಯ ಹಾಡು' ಎಂದು ಬಿಂಬಿಸಲಾಗಿರುವ 'ವಂದೇಮಾತರಂ' 'ಆನಂದ ಮಠ'ದ ಒಂದು ಭಾಗ. ಈ ಕಾದಂಬರಿ ಸ್ಪಷ್ಟವಾಗಿ 'ಆರ್ಯ–ಹಿಂದೂ ಧರ್ಮದ' ಪರ; ಅನ್ಯಮತ–ಧರ್ಮಗಳ ವಿರೋಧಿ. ಅಷ್ಟೇ ಅಲ್ಲ, ಆಂಗ್ಲರ ಆಡಳಿತ ಮುಂದುವರಿಯಬೇಕೆನ್ನುವುದು ಅದರ ಉದ್ದೇಶ. ಹಾಗೆಯೇ ಆರ್ಯೇತರರ ಬಗ್ಗೆ ಅಲ್ಲಿ ತಿರಸ್ಕಾರವಿದೆ. 'ಮೂವತ್ತು ಮೂರು ಕೋಟಿ ದೇವತೆಗಳನ್ನು ಪೂಜೆಮಾಡುವುದು ಆರ್ಯರ ಧರ್ಮವಲ್ಲ' ವೆನ್ನುವ ಅಲ್ಲಿಯ ಘೋಷಣೆ ಅದು ನಮ್ಮ ಜನಪದರ, ಶೂದ್ರರ, ದಲಿತರ – ಒಟ್ಟಾರೆ – ಶ್ರಮಣ ಪರಂಪರೆಯ ತಿರಸ್ಕಾರವೇ.

ಮೇಲ್‌ಜಾತಿಯವರ ರಾಷ್ಟ್ರೀಯ ಮಾದರಿಗಳು ಇತರರನ್ನು (ಶೂದ್ರಾದಿಗಳು ಮತ್ತು ಅನ್ಯಧರ್ಮೀಯರು) ಅವರ ಸಾಂಸ್ಕೃತಿಕ ಆಕರಗಳನ್ನು ಅಂಚಿನಲ್ಲೇ ಉಳಿಸಿದ್ದರಿಂದ ಅವರಲ್ಲಿ ಈ ಮಾದರಿಯ ರಾಷ್ಟ್ರೀಯತೆಯೊಂದಿಗೆ ತಾದಾತ್ಮ್ಯ ಹೊಂದಲು ಸಾಧ್ಯವಿಲ್ಲವಾಯಿತು. ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗಿ ಒಂದು ದಶಕ ಕಳೆಯುವ ಹೊತ್ತಿಗೆ (೧೮೮೫–೧೯೦೫) ಈ ಬೆಳವಣಿಗೆಗಳು ಆಗಿದ್ದವು. ರಾಷ್ಟ್ರೀಯ ಚಳವಳಿಯ ಒಂದು ಮುಖ್ಯ ಧಾರೆಯಾದ ತಿಲಕರ ತೀವ್ರವಾದಿ ರಾಷ್ಟ್ರೀಯತೆ ಸಾಮಾಜಿಕ ಧಾರ್ಮಿಕ ಸುಧಾರಣೆಗಳಿಗೆ ಬೆನ್ನು ತಿರುಗಿಸಿ ಅಥವಾ ವಿರೋಧಿಸಿ, ಅನ್ಯಧರ್ಮೀಯರನ್ನು ಹಿಂದೂ ವೈದಿಕೇತರರನ್ನೂ ಈ ರಾಷ್ಟ್ರೀಯ ಮಾದರಿಯಿಂದ ವಿಮುಖರನ್ನಾಗಿಸಿತು. ಇಂಥ ವಿಮುಖತೆಗೆ ಒತ್ತುಕೊಟ್ಟದ್ದು ತಿಲಕ್‌ಪಂಥ ಪ್ರಾರಂಭಿಸಿದ ಗೋರಕ್ಷಣಾ ಚಳವಳಿ, ಶಿವಾಜಿ ಮತ್ತು ಗಣೋಶೋತ್ಸವಗಳಂಥ ಹಿಂದೂ ಮತ–ಧರ್ಮಗಳ ಸಂಕೇತಗಳು. ಇವುಗಳೊಂದಿಗೆ ಹಿಂದೂ–ಮುಸ್ಲಿಂ ಗಲಭೆಗಳು ಮತ್ತು ಕೋಮುವಾದಗಳೂ ಹುಟ್ಟಿ ಗರಿಗಟ್ಟತೊಡಗಿದವು.

ಇಲ್ಲಿ ಸ್ಪಷ್ಟಾಗುವುದೆಂದರೆ ಭಾರತವನ್ನು ಒಂದು ರಾಷ್ಟ್ರವನ್ನಾಗಿಸುವ ಭರದಲ್ಲಿ, ಅಲ್ಲಿಯ ಧಾರ್ಮಿಕ – ಸಾಂಸ್ಕೃತಿಕ, ಸಾಮಾಜಿಕ ಮತ್ತು ಪ್ರಾದೇಶಿಕ ವೈವಿಧ್ಯತೆಗಳನ್ನು ಕಡೆಗಣಿಸಿ ಅವರನ್ನು ಏನಾದರೂ ಮಾಡಿ ಏಕತ್ರಗೊಳಿಸುವ ಆವೇಶ ಮತ್ತು ಆತುರಗಳನ್ನು. ಹೌದು, ಸ್ವಾಮಿ ವಿವೇಕಾನಂದರ ಒಟ್ಟಾರೆ ಹಿಂದೂ ಪುನರುತ್ಥಾನವಾದಿಯಾದರೂ, ಶೂದ್ರ, ದಲಿತಪರ ತಾತ್ವಿಕತೆಗಳು ಆ ವೇಳೆಗೆ ಪ್ರಕಟವಾಗಿದ್ದವು. ಆದರೆ ವಿವೇಕಾನಂದರ 'ಬ್ರಾಹ್ಮಣ–ಬನಿಯಾ' ಶೋಷಣಾ ವಿರೋಧಿ ಮತ್ತು ಶೂದ್ರ–ದಲಿತರನ್ನು ಒಳಗೊಳ್ಳುವ ಪರಿಕಲ್ಪನೆ ಸುಧಾರಣಾವಾದಿ ರಾಷ್ಟ್ರೀಯ ಪಂಥಕ್ಕಾಗಲಿ, ತೀವ್ರವಾದಿ ರಾಷ್ಟ್ರೀಯ ಪಂಥಕ್ಕಾಗಲಿ ಪಥ್ಯವಾಗಲಿಲ್ಲ. ಇಂಥ ಸನ್ನಿವೇಶದಲ್ಲಿ ತೀವ್ರವಾದಿ ಪಂಥದ ಹರಿಕಾರರಾದ ತಿಲಕ್ ಅನುಯಾಯಿಗಳಿಗೆ ವಿವೇಕಾನಂದರ ತಾತ್ವಿಕತೆ ಒಬ್ಬ Star Gazer ನ ತಾತ್ವಿಕತೆಯಾಗಿ ಕಂಡಿತು. ತಿಲಕ್‌ಪಂಥ ವೈದಿಕ ಪುನರುತ್ಥಾನದ ಸೌಮ್ಯ ಟೀಕೆಯನ್ನೂ ಸಹಿಸಲಾರದಷ್ಟು ತೀವ್ರತೆಯನ್ನು ಆ ವೇಳೆಗೆ ಪಡೆದುಕೊಂಡದ್ದೇ ಇದಕ್ಕೆ ಮುಖ್ಯಕಾರಣ. ಈ ಅಸಹನೆಯೇ ಒಂದು ಹಂತದವರೆಗೆ ಕ್ರಮೇಣ ಶೂದ್ರ–ದಲಿತ ಮತ್ತು ಅನ್ಯಮತಗಳ ಭಾರತೀಯರ ಬಗೆಗಿನ ನಿರೋಧವಾಗಿ, ಮತೀಯವಾದ – ಮೂಲಭೂತವಾದಗಳಾಗಿ ಬೆಳೆಯಲು ಅಡಿಪಾಯ ಹಾಕಿತು.

## ಗಾಂಧಿ ಪ್ರಣೀತ ರಾಷ್ಟ್ರೀಯತೆ

ಆದರೆ ತಿಲಕ್ ಪಂಥದ ರಾಷ್ಟ್ರೀಯತೆಯೇ ಭಾರತದ ರಾಷ್ಟ್ರೀಯತಾ ಚಳವಳಿಯಲ್ಲಿ ಏಕಧಾರೆಯಾಗಿ ಪ್ರವಹಿಸಿದೆ ಎಂದಲ್ಲ. ಗಾಂಧಿ ಯುಗದಲ್ಲಿ, ಗಾಂಧಿ ಪ್ರಣೀತ ಎಲ್ಲರನ್ನೂ ಒಳಗೊಂಡು ರಾಷ್ಟ್ರ ಕಟ್ಟುವ ಪ್ರಕ್ರಿಯೆ ಪ್ರಭಾವಶಾಲಿಯಾಯಿತು. ಗಾಂಧಿವಾದಿ ಅಂಶಗಳೆಂದರೆ ಸುಧಾರಣಾ ಮನೋಭಾವ ಮತ್ತು ಒಟ್ಟಾರೆ ಅವರ ರಚನಾತ್ಮಕ ಕಾರ್ಯಕ್ರಮ ಅಸ್ಪೃಶ್ಯರ, ಸ್ತ್ರೀಯರ, ಶೂದ್ರಾದಿಗಳ ವಿಮೋಚನೆ, ಸಮಾಜಘಾತುಕ ಮೂಢನಂಬಿಕೆಗಳಿಗೆ ವಿರೋಧ, ಅವರ ನಾಯಕತ್ವದ ಘೋಷಿತ ಚಳವಳಿಯಾಯಿತು.

ಇದೇ ವೇಳೆಯಲ್ಲಿ ರಾಷ್ಟ್ರೀಯತೆ, ಸ್ವಾತಂತ್ರ ಚಳವಳಿಗಳು ಸಾಹಿತ್ಯ–ಸಂಸ್ಕೃತಿ ಕುರಿತ ಚಿಂತಕರ ಬರಹಗಳ ಜೊತೆಗೆ ಪ್ರಭಾವಿತವಾದುದು ಚರಿತ್ರೆಯಿಂದ. ಆದರೆ ಆರಂಭಿಕ ಹಂತದಲ್ಲಿ ಈ ಚರಿತ್ರೆಯ ಬರವಣಿಗೆ ಮಾಡಿದವರು ವಸಾಹತುವಾದಿ ಚರಿತ್ರೆಕಾರರು ಮತ್ತು ಇದನ್ನು ಭಾರತೀಯರಿಗೆ ಕಲಿಸಿದವರೂ ಅವರೇ. ಈ ಚರಿತ್ರೆ ವಿಕೃತರೂಪದಲ್ಲಿತ್ತು. ಹಾಗಾಗಿ ಈ ಘಟ್ಟದಲ್ಲಿ ವ್ಯಕ್ತವಾದ ರಾಷ್ಟ್ರೀಯತಾ ಪರಿಕಲ್ಪನೆ ವಸ್ತುನಿಷ್ಠ ಇತಿಹಾಸ ಮತ್ತು ದೇಶೀ–ವಸಾಹತುಶಾಹಿ ಶೋಷಣೆಯ ಅನುಭವದ ಮೂಸೆಯಿಂದ ರೂಪುಗೊಂಡದ್ದಲ್ಲ. ಬಹುಸಂಖ್ಯಾತರ ಸ್ಥಿತಿ, ಆಶೋತ್ತರಗಳು ಅಲ್ಲಿ ಗೌಣ. ಭಾರತವನ್ನು ದಾಸ್ಯದಲ್ಲಿರುವ, ಆದರೆ ಆಗಲೇ ಏಕೀಕೃತವಾಗಿರುವ ಒಂದು ಅಖಂಡ ರಾಷ್ಟ್ರವೆಂದು ಅದು ತಿಳಿದಂತಿತ್ತು. ಒಟ್ಟಾರೆ ಈ ನಿಲುವು ಬ್ರಿಟಿಷ್ ವಿರೋಧಿ ನಿಲುವಿನೊಂದಿಗೆ, ಭಾರತೀಯರನ್ನು ಒಗ್ಗೂಡಿಸುವ ಆಶಯವನ್ನು ಹೊಂದಿತ್ತೆಂದು ಹೇಳಬಹುದು ಮತ್ತು ಭಾರತ ರಾಷ್ಟ್ರೀಯ ಚಳವಳಿಯ ಮುಂಚೂಣಿ ನಾಯಕತ್ವದ ತಾತ್ವಿಕತೆಯೂ ಬಹುತೇಕ ಅದೇ ಆಗಿತ್ತು. ತಿಲಕ್ ಪಂಥದ ತೀವ್ರವಾದಿ ರಾಷ್ಟ್ರೀಯತೆ ಭಾರತವನ್ನು ಒಂದು ರಾಷ್ಟ್ರವೆಂದು ತಿಳಿದಿತ್ತು. ಅಲ್ಲಿದ್ದ ಆಂತರಿಕ ಸಾಮಾಜಿಕ – ಆರ್ಥಿಕ ವೈರುದ್ಧ್ಯಗಳನ್ನು, ಸಾಂಸ್ಕೃತಿಕ ವೈವಿಧ್ಯತೆಗಳನ್ನು ಒಳಗೊಳ್ಳಲು, ಅವುಗಳೊಂದಿಗೆ ಅನುಸಂಧಾನ ನಡೆಸಲು ಪ್ರಯತ್ನಿಸದೆ ಅವನ್ನು ವಿರೋಧಿಸಿತು. ಈ ಪಂಥಕ್ಕೆ ಅತಿಮುಖ್ಯವಾಗಿ ಕಂಡದ್ದು ತಮ್ಮ ಪರಿಕಲ್ಪನೆಯ 'ರಾಷ್ಟ್ರ'ದ ಒಗ್ಗಟ್ಟು, ಏಕತೆ. ಗಾಂಧೀಜಿ ಕೂಡಾ ಅನಿವಾರ್ಯಕಾರಣಗಳಿಂದಲೋ ಏನೋ, ಅಂದಿನ ಚಾರಿತ್ರಿಕ ಘಟ್ಟದಲ್ಲಿ ಪರಸ್ಪರ ವಿರುದ್ಧವಾದ ಆಂತರಿಕ, ಸಾಮಾಜಿಕ ವರ್ಗಗಳ ನಡುವೆ ಹೊಂದಾಣಿಕೆ–ಸಾಮರಸ್ಯವಿರಬೇಕೆಂದು ಬಯಸಿ, ಅದಕ್ಕಾಗಿ ಪ್ರಯತ್ನ ಪಟ್ಟವರೇ.

## ಒಂದು ಮತ ಒಂದು ರಾಷ್ಟ್ರದ ಸಿದ್ಧಾಂತ

ಈ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಸೃಷ್ಟಿಯಾದ, ಭಾರತವನ್ನು ವಿಭಜಿಸಿ, ಈಗಲೂ ಅದರ ಬೇರುಗಳನ್ನು ಅಲುಗಾಡಿಸುತ್ತಿರುವ ಮತೀಯತೆ ಹೇಗೆ ಸೃಷ್ಟಿಯಾಯಿತು, ಗ್ರಹಿಸಿತು, ಅಥವಾ ನಿವಾರಿಸಿಕೊಂಡಿತು ಎನ್ನುವ ಬಗ್ಗೆ ಗಮನಹರಿಸಬಹುದು. ವಸಾಹತುಶಾಹಿ ಸಂದರ್ಭದ ಅಪಾರವಾಗಿ ಬೆಳೆದ ಬಡತನ, ಕ್ಷಾಮ, ನಿರುದ್ಯೋಗ, ಜನಾಂಗ ದ್ವೇಷ ನೀತಿ, ಒಡೆದು ಆಳುವ ಆಡಳಿತದ ಜೊತೆಗೆ ಚರಿತ್ರೆಯನ್ನು ವಿಕೃತಗೊಳಿಸಿದ್ದು, ಮತೀಯ–ಕೋಮುವಾದಿ ವಿಷವನ್ನು ಬಿತ್ತಿ–ಬೆಳೆಸಲು ಸಹಾಯಕವಾದವು. ಈ ವಿಷಕ್ಕೆ ಗೊಬ್ಬರದಂತೆ ನೇತ್ಯಾತ್ಮಕ ಬೆಂಬಲ ಕೊಟ್ಟದ್ದು ರಾಷ್ಟ್ರೀಯ ಚಳವಳಿಯ ನಾಯಕತ್ವದ ತಾತ್ವಿಕತೆಯಲ್ಲಿದ್ದ ಮಿತಿಗಳು. ಇವೆಲ್ಲ ದೌರ್ಬಲ್ಯಗಳಿಂದಾಗಿ ಮುಸ್ಲಿಂ–ಹಿಂದೂ–ಸಿಖ್ ಮತೀಯತೆಗಳು ಬೆಳೆದವು. ಸರಳವಾಗಿ ಹೇಳುವುದಾದರೆ ಕೋಮುವಾದ – ಮತೀಯವಾದ 'ಒಂದು ಮತ – ಧರ್ಮದ ಜನ, ಆ ನಿರ್ದಿಷ್ಟ ಪಂಥದ ಅನುಯಾಯಿಗಳಾದ್ದರಿಂದ ಅವರ ಆರ್ಥಿಕ–ಸಾಮಾಜಿಕ–ರಾಜಕೀಯ ಒಂದೇ ಆಗಿರುತ್ತವೆ. ವಿಭಿನ್ನ ಧರ್ಮೀಯರ ಹಿತಾಸಕ್ತಿಗಳು ಭಿನ್ನವಾಗಿ, ಪರಸ್ಪರ ವಿರುದ್ಧವಾಗಿರುತ್ತವೆ. ಧರ್ಮವೇ ಅವರ ಎಲ್ಲ ಲೌಕಿಕ ಮತ್ತು ಸಾಂಸ್ಕೃತಿಕ ಹಿತಾಸಕ್ತಿಗಳ – ಸಮಸ್ಯೆಗಳ ಮೂಲವೆಂದು ತಿಳಿದು, ಅದನ್ನೇ ಬಿತ್ತರಿಸುತ್ತದೆ.

ಸ್ವಲ್ಪ ಯೋಚಿಸಿ ನೋಡಿದರೆ ಈ ವಾದ ಹುರುಳಿಲ್ಲದ್ದೆಂದು ತಿಳಿದುಬಿಡುತ್ತದೆ. ಆದರೆ ಭಾರತ ರಾಷ್ಟ್ರೀಯ ಚಳವಳಿಯ ಹಲವು ಧಾರೆಗಳಲ್ಲಿ ಕೋಮುವಾದದಲ್ಲಿ ನಂಬಿಕೆಯಿದ್ದ ಒಂದು ಧಾರೆಯೂ ಇತ್ತು. ಈ ಪಂಥ ಮುಖ್ಯವಾಗಿ ಹಿಂದೂ ಮತ್ತು ಮುಸ್ಲಿಮರು ಎರಡು ವಿಭಿನ್ನ, ಪರಸ್ಪರ ವಿರೋಧಿ ಧಾರ್ಮಿಕ, ರಾಜಕೀಯ, ಆರ್ಥಿಕ ನೆಲೆಗಟ್ಟಿನವರೆಂದು ತಿಳಿಯಿತು. ಈ ನಂಬಿಕೆಗೆ ಐತಿಹಾಸಿಕ, ತಾತ್ವಿಕ ತಳಹದಿ ಹಾಕಿಕೊಟ್ಟವರು ಬ್ರಿಟಿಷ್ ಆಳರಸರು. ಆದರೆ ಕೋಮುವಾದಿ ತಾತ್ವಿಕತೆ, ಗ್ರಹಿಕೆಗಳು ಒಂದೇ ನೆಲೆಯವಲ್ಲ. ಅದು ಬಹುಮುಖಿ, ಅನೇಕ ನೆಲೆಗಳಲ್ಲಿ ಪ್ರಕಟವಾಗಬಲ್ಲದು. ಗಾಂಧಿಯವರ 'ರಾಮರಾಜ್ಯ', 'ದರಿದ್ರ ನಾರಾಯಣ' ಪರಿಕಲ್ಪನೆಗಳಲ್ಲೂ ಹಿಂದೂ ಕೋಮುವಾದವನ್ನು ಕಂಡವರಿದ್ದಾರೆ. ಆದರೆ ಗಾಂಧೀಜೀ, ತಿಲಕ್, ಲಾಲಾ ಲಜಪತ್‌ರಾಯ್, ಅರವಿಂದರಂತೆ ಧರ್ಮವನ್ನು, ಕೋಮಿನ ಮಟ್ಟಕ್ಕೆ ಇಳಿಸದೆ, ಜನರ ಮನಸ್ಸುಗಳನ್ನು ಬೆಸೆಯಲು ಭಾರತವನ್ನು ಒಂದು ರಾಷ್ಟ್ರವನ್ನಾಗಿ ಕಟ್ಟಲು ಬಳಸಿಕೊಂಡರು.

## ಗಾಂಧೀಜಿಯ ಧಾರ್ಮಿಕತೆಯ ಹೊಸ ಸಂಕೇತಗಳು

ಈ ಸಂಬಂಧವಾಗಿ ಗಾಂಧಿಯವರ ನೆರವಿಗೆ ಬಂದ ಇನ್ನೆರಡು ಸಂಕೇತಳೆಂದರೆ ಉಪ್ಪು ಮತ್ತು ಚರಕ. ಇವೆರಡು ಧಾರ್ಮಿಕ ಸಂಕೇತಗಳು ಹೇಗೋ ಹಾಗೆಯೇ ಅವುಗಳ ಉತ್ಪಾದನೆ ಮತ್ತು ಮಾರಾಟದಿಂದ ಜನರ ಜೀವನವನ್ನು ಹಸನಾಗಿಸಬಲ್ಲ, ಆರ್ಥಿಕ ಪ್ರಗತಿಯ, ರಾಷ್ಟ್ರೀಯ ಉನ್ನತಿಯ ಸಂಕೇತಗಳೂ ಹೌದು. ಉಪ್ಪು ಮತ್ತು ಚರಕ, ಜನರು ಯಾವುದೇ ಜಾತಿ–ಮತಗಳಿಗೆ ಸೇರಿದವರಿರಲಿ, ದೈನಂದಿನ ಜೀವನದಲ್ಲಿ ಹಾಸು ಹೊಕ್ಕಾಗಿರುವಂಥವು. ಉಪ್ಪು–ಬಟ್ಟೆಗಳಿಲ್ಲದೆ ಯಾರೇ ಆಗಲಿ, ಎಷ್ಟೇ ಶ್ರೀಮಂತರಿರಲಿ, ಬಡವರಿರಲಿ ಬದುಕುವುದು ಸಾಧ್ಯವಿಲ್ಲ. ಇಂಥ ಎರಡು ವಸ್ತುಗಳನ್ನು ಗಾಂಧೀಜಿ ಆರಿಸಿಕೊಂಡರು. ಅವರ ಪ್ರಾರಂಭಿಸಿದ ಚರಕ–ಖಾದಿಪ್ರಚಾರ–ಬಳಕೆ, ಉಪ್ಪಿನ ಸತ್ಯಾಗ್ರಹಗಳಿಗೆ ಕೇವಲ ರಾಜಕೀಯ ವಸಾಹತುಶಾಹಿ ವಿರೋಧಿ ಆಯಾಮವಿರಲಿಲ್ಲ ಅದಕ್ಕೆ ಧಾರ್ಮಿಕ – ಆಧ್ಯಾತ್ಮಿಕ ಆಯಾಮಗಳೂ ಇದ್ದವು.

ಗಾಂಧೀಜೀಯ ಈ ಆಧ್ಯಾತ್ಮಿಕ–ಧಾರ್ಮಿಕ ರಾಜಕೀಯವನ್ನು ಸಹಿಸದ, ಆದರೆ ಅದನ್ನು ವಿರೋಧಿಸಲೂ ಸಾಧ್ಯವಾಗದ, ಹಿಂದೂ–ಮುಸ್ಲಿಂ ಕೋಮುವಾದಿಗಳು ಅವರಿಂದ ದೂರವಾದರು. ಆದರೆ ಬಹುಸಂಖ್ಯಾತ ಜನತೆ ಅವರ ಜೊತೆಗುಳಿದರು. ರಾಷ್ಟ್ರೀಯ–ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ಬೃಹದಾಕಾರವಾಗಿ ಬೆಳೆಯಲು, ಮಹಾತ್ಮ ಗಾಂಧಿಯಾಗಲೂ ನೆರವಾದುದು ಅವರು ರಾಜಕೀಯವನ್ನು ಆಧ್ಯಾತ್ಮಗೊಳಿಸಿದ ಪರಿ. ಅವರ ಸತ್ಯಾಗ್ರಹ, ಅರಣ್ಯ ಚಳುವಳಿ, ಕರನಿರಾಕರಣೆ, ನಾಗರಿಕ ಕಾನೂನುಭಂಗ, ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ, ಇವೆಲ್ಲಕ್ಕೂ ಧಾರ್ಮಿಕ–ಆಧ್ಯಾತ್ಮಿಕ ಆಯಾಮವಿದ್ದೇಯಿತ್ತು. ಅದು ವಸಾಹತುಶಾಹಿ ವಿರೋಧಿಯೂ ಆಗಿತ್ತು. ಈ ಎಲ್ಲ ವಿಚಾರಗಳ ಬಗ್ಗೆಯೂ ಅವರು ಆಧ್ಯಾತ್ಮಿಕ ಅನುಸಂಧಾನಗಳಲ್ಲಿ ತೊಡಗುತ್ತಿದ್ದರು. ಟಾಗೋರರು, ಅಲಿ ಸೋದರರು, ನಾರಾಯಣಗುರು, ಮಾಳವೀಯ, ಅಂಬೇಡ್ಕರ್‌ರೊಂದಿಗೆ ಗಾಂಧೀಜೀ ನಡೆಸಿದ ಸಂವಾದಗಳು ಆಧ್ಯಾತ್ಮಿಕ–ಧಾರ್ಮಿಕ ಸಂವಾದಗಳೂ ಹೌದು. ನಿಜ ಅವರಲ್ಲಿ ಹಲವು ಭಿನ್ನಾಭಿಪ್ರಾಯಗಳಿದ್ದವು, ಆದರೆ ಅವೆಲ್ಲ ಸಾತ್ವಿಕವಾದವು. ಭಿನ್ನಾಭಿಪ್ರಾಯಗಳನ್ನು ಯಾರೂ ರಾಜಕೀಯ ಅಧಿಕಾರದ ಸ್ವಾರ್ಥಕ್ಕೆ, ಪಟ್ಟಭದ್ರರ ಹಿತರಕ್ಷಣೆಗೆ ಬಳಸಿಕೊಳ್ಳಲಿಲ್ಲವೆನ್ನುವುದು ಮುಖ್ಯ. ಗಾಂಧೀಜಿಯನ್ನು ಕಟುವಾಗಿ ಟೀಕಿಸುತ್ತಿದ್ದ ಅಂಬೇಡ್ಕರ್ ಅವರು ಕೂಡಾ, ಒಟ್ಟಾರೆ ಗಾಂಧೀಜೀಯವರ ಧಾರ್ಮಿಕ ನಿಲುವುಗಳು ತಮ್ಮ ನಿಲುವುಗಳಿಗಿಂತ ಭಿನ್ನವಲ್ಲವೆಂದೇ ಹೇಳಿದರು. 'ನನ್ನ ಮತ್ತು ಅವರ ನಡುವೆ ಎಷ್ಟೊಂದು ಸಾಮ್ಯವಿದೆ ಎಂಬುದನ್ನು ಅವರನ್ನು ಭೇಟಿಯಾದಾಗ ತಿಳಿದು, ನನಗೆ ಆಶ್ಚರ್ಯವಾಗಿದೆ, ಅತ್ಯಾಶ್ಚರ್ಯವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳಬೇಕಾಗಿದೆ' ಎಂದೇ ಅಂಬೇಡ್ಕರ್ ಹೇಳಿದ ದಾಖಲೆಗಳಿವೆ. ಆದರೆ ಗಾಂಧೀಜಿ ಬಡತನವನ್ನು ವೈಭವೀಕರಿಸುವುದು ಸರಿಯಲ್ಲ ವೆಂದೇ ಅಂಬೇಡ್ಕರ್ ಅಭಿಪ್ರಾಯವಿತ್ತು.

## ಅಧಾರ್ಮಿಕತೆ ಮತ್ತು ಮತೀಯ ರಾಜಕಾರಣ

ಸೃಜನಾತ್ಮಕವಾಗಿ ಬಳಕೆಯಾದ ಧರ್ಮ– ಆಧ್ಯಾತ್ಮಗಳು ಹಲವಾರು ಬಾರಿ ನೇತ್ಯಾತ್ಮಕವಾಗಿಯೂ ಬಳಕೆಯಾದವು;ಆಗುತ್ತಿವೆ. ಮುಸ್ಲಿಂ ಮತೀಯ ವಾದಿಗಳಾದ ಜಿನ್ನಾ, ಇಕ್ಬಾಲರಾಗಲಿ, ಹಿಂದೂ ಮತೀಯವಾದಿಗಳಾದ ಹೆಡಗೆವಾರ್, ಸಾವರ್ಕರ್, ಗೋಲ್ವಲ್ಕರ್ ಆಗಲಿ ಗಾಂಧೀಜಿಯವರೊಂದಿಗೆ ಸಂವಾದಿಸಲು ಅವರಲ್ಲಿ ಯಾವ ಧಾರ್ಮಿಕ – ಆಧ್ಯಾತ್ಮಿಕ ನೆಲೆಯೂ ಇರಲಿಲ್ಲ. ಅವರಲ್ಲಿದ್ದ ಅಸ್ತ್ರವೆಂದರೆ ಮತ–ಧರ್ಮ, ಜಾತಿಗಳನ್ನೇ ಬಂಡವಾಳಮಾಡಿಕೊಂಡು ಕೋಮುವಾದಿ ವಿಷಬಿತ್ತಿ ಜನರ ಮನಸ್ಸುಗಳನ್ನು ಒಡೆದು ದೇಶವನ್ನು ಛಿದ್ರಗೊಳಿಸುವುದೇ ಆಗಿತ್ತು. ಆದ್ದರಿಂದಲೇ ಈ ಜನ 'ಹಿಂದೂ ಧರ್ಮ ಅಪಾಯದಲ್ಲಿದೆ', 'ಇಸ್ಲಾಂ ಅಪಾಯದಲ್ಲಿದೆ' ಎಂಬ ವಿಚ್ಛಿದ್ರಕಾರಿ ಘೋಷಣೆಗಳನ್ನು ಚಲಾವಣೆಗೆ ತಂದರು. ಇಲ್ಲಿ ಆಸಕ್ತಿದಾಯಕ ವಿಷಯವೆಂದರೆ ಯಾವುದೇ ಮತಾಂಧರಿಗೆ, ಆಯಾ ಧರ್ಮದ ಬಡ ಅನುಯಾಯಿಗಳ ಒಳಿತಿಗಾಗಿ ಅಥವಾ ರಾಷ್ಟ್ರದ ಒಳಿತಿಗಾಗಿ ಯಾವ ಕಾರ್ಯಕ್ರಮಗಳೂ ಇರದಿದ್ದುದು. ಅವರ ಬೇಡಿಕೆಗಳೇನಿದ್ದರೂ ಎರಡೂ ಧರ್ಮಗಳ ಶ್ರೀಮಂತ–ಪಟ್ಟಭದ್ರರಿಗೆ ಅನುಕೂಲವಾಗಿಸುವ ಬೇಡಿಕೆಗಳು. ಹಾಗೆ ನೋಡಿದರೆ ಜಿ ಈ ಕೋಮುವಾದಿಗಳಿಗೆ ಧರ್ಮ, ದೇವರು, ಆಧ್ಯಾತ್ಮಗಳಲ್ಲಿ ನಂಬಿಕೆಯೇ ಇರಲಿಲ್ಲ. ಜಿನ್ನಾ ಇಸ್ಲಾಂ ಧರ್ಮವನ್ನು ಅನಿಸರಿಸುತ್ತಿದ್ದ ಮುಸಲ್ಮಾನನಾಗಿರಲಿಲ್ಲ. ಹಾಗೆಯೇ ಸಾವರ್ಕರ್ ನಿರೀಶ್ವರವಾದಿ. ಆದ್ದರಿಂದಲೇ ಅವರು ಧರ್ಮವನ್ನು, ಮತ ರೂಪದ ಒಂದು ಕೊಳಕು ರಾಜಕೀಯ ತಾತ್ವಿಕತೆಯ ಮಟ್ಟಕ್ಕೆ ಇಳಿಸಿ ಅದನ್ನೇ ತಮ್ಮ ಬಂಡವಾಳ ಮಾಡಿಕೊಂಡರು. ಆದರೆ ವಸಾಹತು ಸ್ಥಿತಿಯು ಭಾರತೀಯ ಸಮಾಜದ ಮೇಲೆ ಹೇರಿದ ಮಿತಿ ಮತ್ತು ರಾಷ್ಟ್ರೀಯ ಚಳವಳಿಯನ್ನು ನಿಯಂತ್ರಿಸುತ್ತಿದ್ದ ಪಟ್ಟಭದ್ರರು, ಕೋಮುವಾದಿ ಹಿಂದೂ–ಮುಸ್ಲಿಮರು ತಮ್ಮ ನೀಚ ನಿಲುವುಗಳಿಂದ ದೇಶವನ್ನು ಇಬ್ಭಾಗವಾಗುವಂತೆ ಮಾಡಿದರು. ನಾಯಕರ ಮಟ್ಟದಲ್ಲಿ ಗಾಂಧೀಜೀಯವರ ಜೊತೆ ಇದ್ದವರು ವಿರಳ. ಗಾಂಧೀಜೀಗೆ ಈ ಬಗ್ಗೆ ಸ್ಪಷ್ಟ ಅರಿವಿತ್ತು, ನೋವಿತ್ತು. ಅಪಾರ ನೋವಿಂದಲೇ ಅವರು ಹೇಳಿಕೊಂಡದ್ದು ಹೀಗೆ:

> **"ಹೆಚ್ಚು ವಿದ್ಯಾವಂತರೆಂದು ಹೇಳಿಕೊಳ್ಳುವ ಬಹು ಸಂಖ್ಯಾತ ಹಿಂದೂಗಳು ಮುಸ್ಲಿಮರ ಎಲ್ಲ ಬೇಡಿಕೆಗಳನ್ನು ವಿರೋಧಿಸುವುದರಿಂದಲೇ ಮುಸಲ್ಮಾನರು ಹಿಂದೂಗಳನ್ನು ಶತ್ರುಗಳೆಂದು ಭಾವಿಸಿ ಬ್ರಿಟಿಷರ ಜೊತೆಗೂಡುತ್ತಾರೆ. ಹೀಗಲ್ಲದೆ ಹಿಂದೂಗಳು, ಮುಸ್ಲಿಮರ ಬಗ್ಗೆ ಸಹಾನುಭೂತಿಯಿಂದಿದ್ದರೆ ಕ್ರಮೇಣವಾದರೂ ಮುಸ್ಲಿಮರು ಹಿಂದುಗಳನ್ನು ನಂಬುತ್ತಾರೆ. ಸಹೋದರಬ,ಾವವೂ ಬೆಳೆಯುತ್ತದೆ. ಮುಸ್ಲಿಮರ ಬೇಡಿಕೆಗಳನ್ನು ವಿರೋಧಿಸದಿದ್ದರೆ ಹಿಂದೂಗಳಿಗೆ ನಷ್ಟವೇನೂ ಇಲ್ಲ. ಇನ್ನೊಬ್ಬರಲ್ಲಿ ನಂಬಿಕೆ, ಸ್ಥೈರ್ಯಗಳನ್ನು ಉದ್ದೀಪಿಸುವ ಪ್ರಕ್ರಿಯೆಯಲ್ಲಿ**

( ೧೧ನೇ ಪುಟಕ್ಕೆ

ವಿಚಾರ–೨

# ರಾಷ್ಟ್ರ–ರಾಷ್ಟ್ರೀಯತೆ : ಹುಟ್ಟು ಮತ್ತು ವಿಕಾಸ

–ಡಾ. ಜೆ.ಎಸ್.ಸದಾನಂದ

ರಾಷ್ಟ್ರ, ರಾಷ್ಟ್ರೀಯತೆ ಪರಿಕಲ್ಪನೆಗಳು ಇಂಗ್ಲೀಷಿನ 'ನೇಷನ್', 'ನ್ಯಾಷನಲಿಸಮ್' ಪರಿಕಲ್ಪನೆಗಳಿಗೆ ಸಂವಾದಿಯಾಗಿ ಬಳಕೆಗೆ ಬಂದಿವೆ. ಈ ಪರಿಕಲ್ಪನೆಗಳು ಸಾಂಸ್ಕೃತಿಕ ಭಿನ್ನತೆಗಳನ್ನೂ ಮೀರಿ ಸಾರ್ವತ್ರಿಕವಾಗಿ ಅನ್ವಯವಾಗುತ್ತವೆ ಎನ್ನುವ ನಂಬಿಕೆ ದಟ್ಟವಾಗಿದೆ. ಆದರೆ 'ನೇಷನ್' ಎನ್ನುವ ಪರಿಕಲ್ಪನೆ ವಿಕಾಸಗೊಂಡಿದ್ದು ಪಾಶ್ಚಾತ್ಯ, ಅದರಲ್ಲೂ ಯುರೋಪಿನ ಸಂಸ್ಕೃತಿಯ ಹಿನ್ನೆಲೆಯಲ್ಲಿ. ನೇಷನ್ ಪರಿಕಲ್ಪನೆಯು ಉಗಮವಾಗುವ ಮೊದಲು ಒಂದು ಆಳ್ವಿಕೆಗೊಳಪಟ್ಟ ನಿರ್ದಿಷ್ಟ ಭೂಪ್ರದೇಶವನ್ನು (ಅದರಲ್ಲಿ ವಾಸಿಸುವ ಜನಸಮುದಾಯವನ್ನೂ ಒಳಗೊಂಡಂತೆ) ರಾಜಕೀಯ ಘಟಕವಾಗಿ 'ಸ್ಟೇಟ್' ಎಂದು ಗುರುತಿಸಲಾಗಿತ್ತು. ಕನ್ನಡದಲ್ಲಿ ಇದಕ್ಕೆ ಸಂವಾದಿಯಾಗಿ ಪ್ರಭುತ್ವ ಎನ್ನುವ ಪದ ಬಳಕೆಯಲ್ಲಿದೆ. ನೇಷನ್ ಎನ್ನುವುದು ಕೇವಲ ಒಂದು ನಿರ್ಧಿಷ್ಟ ಭೂಪ್ರದೇಶದ ಮೇಲೆ ನಡೆಸುವ ಆಳ್ವಿಕೆ ಮಾತ್ರವಲ್ಲ. ಅದಕ್ಕಿಂತಲೂ ವಿಶಾಲವಾದ ಅರ್ಥವನ್ನು ಅದು ಹೊಂದಿದೆ. ಒಂದು ರಾಜಕೀಯ ಘಟಕದಲ್ಲಿ ವಾಸಿಸುವ ಜನರಿಗೆ ನಾವೆಲ್ಲರೂ ಒಂದು ಎನ್ನುವ ಭಾವನೆ ಬಂದಾಗ ಮಾತ್ರ ಅದು 'ನೇಷನ್' ಎಂದು ಕರೆಸಿಕೊಳ್ಳುತ್ತದೆ. ಇದನ್ನೆ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ರಾಷ್ಟ್ರ ಎನ್ನುವುದು ಅಸ್ತಿತ್ವಕ್ಕೆ ಬರಬೇಕಾದರೆ ನಾವೆಲ್ಲ ಒಂದು ಎನ್ನುವ ಭಾವನೆಯನ್ನು ಹೊಂದಿರುವ ಜನಾಂಗ ಇರಬೇಕಾಗುತ್ತದೆ. ಭಾಷೆ, ರಿಲಿಜನ್ನು, ನಮಗೆಲ್ಲರಿಗೂ ಸಮಾನ ಇತಿಹಾಸವಿದೆ ಎಂದು ಭಾವಿಸುವ ಜನಸಮೂಹ ಮುಂತಾದವುಗಳು ಜನಾಂಗವನ್ನು ನಿರ್ಧರಿಸುವ ಅಂಶಗಳಾಗುತ್ತವೆ. ರಾಷ್ಟ್ರ ಎನ್ನುವುದು ಒಂದು ಜನಾಂಗದ ಆಳ್ವಿಕೆಯಾಗಿ ಅದಕ್ಕೆ ತನ್ನದೇ ಆದ ಸ್ವಂತಿಕೆ, ಹಿತಾಸಕ್ತಿಗಳಿವೆ. ಇಂತಹ ರಾಷ್ಟ್ರದ ಪರಿಕಲ್ಪನೆ ಎರಡನೆ ಮಹಾಯುದ್ಧದ ನಂತರ ಜಗತ್ತಿನಾದ್ಯಂತ ವ್ಯಾಪಿಸಿ ಒಂದು ರಾಜಕೀಯ ಪ್ರಭುತ್ವವೆಂದರೆ ಅದು ರಾಷ್ಟ್ರ–ಪ್ರಭುತ್ವವೇ ಆಗಿರಬೇಕು ಎನ್ನುವ ನಂಬಿಕೆ ಬಲವಾಗಿ ಬೇರೂರಿತು. ಅಷ್ಟೇ ಅಲ್ಲ, ಒಂದು ರಾಜಕೀಯ ಪ್ರಭುತ್ವ ರಾಷ್ಟ್ರವಾಗಲು ವಿಫಲವಾದರೆ ಅದು ಪ್ರಭುತ್ವದ ಒಂದು ದೊಡ್ಡ ದೌರ್ಬಲ್ಯವೆಂದು ಗುರುತಿಸಲಾಯಿತು. ಪ್ರತಿಯೊಂದು ರಾಜಕೀಯ ಪ್ರಭುತ್ವವೂ ತಾನು ಒಂದು ರಾಷ್ಟ್ರವಾಗಲು ಹೆಣಗಾಡತೊಡಗಿತು.

ರಾಷ್ಟ್ರೀಯತೆಯು ಮೊಟ್ಟ ಮೊದಲಿಗೆ ಅಭಿವ್ಯಕ್ತಗೊಂಡಿದ್ದು ಫ್ರಾನ್ಸ್‌ನಲ್ಲಿ. ಫ್ರೆಂಚ್ ಕ್ರಾಂತಿಯು ಸಾರ್ವಭೌಮತೆಯನ್ನು ರಾಜನಿಂದ ಫ್ರೆಂಚ್ ಪ್ರಜೆಗಳ ಒಂದು ಗುಂಪಿಗೆ ವರ್ಗಾಯಿಸಿತು. ಅಂದಿನಿಂದ ರಾಷ್ಟ್ರವೆಂದರೆ ಅಲ್ಲಿ ವಾಸಿಸುವ ಜನರು ಮತ್ತು ಅದರ ಭವಿಷ್ಯವನ್ನು ನಿರ್ಧರಿಸುವವರೂ ಅವರೆ ಎನ್ನುವ ನಂಬಿಕೆ ಪ್ರಬಲವಾಗಿ ಬೆಳೆಯಿತು. ಕ್ರಮೇಣ ಫ್ರಾನ್ಸ್ ನೆಪೋಲಿಯನ್ ಬೊನೊಪಾರ್ಟೆ ನೇತೃತ್ವದಲ್ಲಿ ಆಗಿನ ಇತರ ಯುರೋಪಿನ ಸಾಮ್ರಾಜ್ಯಗಳ ಹಿಡಿತದಿಂದ ಅಲ್ಲಿನ ಜನರನ್ನು ಮುಕ್ತಗೊಳಿಸುವುದು ತನ್ನ ಜವಬ್ದಾರಿ ಎಂದು ಭಾವಿಸಿತು. ಪ್ರಾರಂಬದಲ್ಲಿ ಹಲವರು ಇದನ್ನು ಸ್ವಾಗತಿಸಿದರು ಆದರೆ ಫ್ರಾನ್ಸ್‌ನ ಸರ್ವಾಧಿಕಾರ ತಮ್ಮ ಅಸ್ತಿತ್ವಕ್ಕೆ ಧಕ್ಕೆ ತರುತ್ತದೆ ಎಂದು ತಿಳಿದಾಗ ಅದನ್ನು ಪ್ರಭಲವಾಗಿ ಪ್ರತಿಭಟಿಸಿದರು.

## ರಾಷ್ಟದ್ರೀಯತೆಯ ವಿವಿಧ ಪ್ರಯೋಗಗಳು

ಹತ್ತೊಂಬತ್ತನೆಯ ಶತಮಾನದ ಆಧಿಯಲ್ಲಿ ರಾಷ್ಟ್ರೀಯತೆ ಎನ್ನುವುದು ಉದಾರವಾದಿ ರಾಜಕೀಯ ಸಿದ್ಧಾಂತಕ್ಕೆ ಪೂರಕವಾಗಿ ಬೆಳೆಯಿತು. ಕಾನೂನಿನ ಮುಂದೆ ಎಲ್ಲರೂ ಸಮಾನರು, ಜನರ ಸಹಮತದ ಆಧಾರದ ಮೇಲೆ ಆಳ್ವಿಕೆ. ಕೆಲವೇ ಅಧಿಕಾರಿಗಳು ಹಾಗು ಗಣ್ಯರಿಗಿದ್ದ ವಿಶೇಷ ಸವಲತ್ತುಗಳ ನಿಷೇಧ, ಪ್ರಾತಿನಿಧಿಕ ಆಡಳಿತ ಮೊದಲಾದ ಅಂಶಗಳನ್ನು ಒಳಗೊಂಡಿತ್ತು. ಆರ್ಥಿಕವಾಗಿ ಉದಾರವಾದವು ಮುಕ್ತ ಮಾರುಕಟ್ಟೆ ಮತ್ತು ಸರಕು ಸಾಗಾಣಿಕೆಗಳ ಮೇಲೆ ಪ್ರಭುತ್ವವು ಹೇರುತ್ತಿದ್ದ ನಿರ್ಬಂಧಗಳ ಅಂತ್ಯವನ್ನು ಪ್ರತಿನಿಧಿಸುತ್ತಿತ್ತು. ಹತ್ತೊಂಬತ್ತನೆಯ ಶತಮಾನದಲ್ಲಿ ಆದ ಮತ್ತೊಂದು ವಿಪರ್ಯಾಸಕರ ಬೆಳವಣಿಗೆಯೆಂದರೆ ರಾಷ್ಟ್ರದ ಪರಿಕಲ್ಪನೆ ಕೇವಲ ಉದಾರವಾದಿ ಚಿಂತಕರಿಗೆ ಮಾತ್ರ ಆಪ್ಯಾಯಮಾನವಾಗಿರದೆ ಸಂಪ್ರದಾಯವಾದಿ ಪ್ರಭುತ್ವಗಳೂ ಸಹ ಜನರಲ್ಲಿ ರಾಷ್ಟ್ರೀಯ ಭಾವನೆಯನ್ನು ಉದ್ದೀಪಿಸಿ ತಮ್ಮ ಆಳ್ವಿಕೆಯನ್ನು ಮುಂದುವರೆಸಲು ಸಹಾಯಕವಾಯಿತು. ಉದಾಹರಣೆಗೆ ನೆಪೋಲಿಯನ್ ನಂತರ ಒಟ್ಟಾದ ಬ್ರಿಟನ್, ರಷ್ಯಾ, ಪ್ರಷ್ಯಾ ಮತ್ತು ಆಸ್ಟ್ರಿಯಾ ದೇಶಗಳು ಒಟ್ಟಾಗಿ ೧೮೧೫ರಲ್ಲಿ ವಿಯೆನ್ನಾ ಒಪ್ಪಂದವನ್ನು ಮಾಡಿಕೊಂಡು ನೆಪೋಲಿಯನ್ ತಂದಿದ್ದ ಹಲವಾರು ಬದಲಾವಣೆಗಳನ್ನು ನಿಷ್ಕ್ರಿಯಗೊಳಿಸಿದವು. ನೆಪೋಲಿಯನ್ ಸೋಲಿಸಿದ್ದ ಬೂರ್ಬುವನ್ ವಂಶಸ್ಥರ ಆಳ್ವಿಕೆಯನ್ನು ಪುನರ್‌ಸ್ಥಾಪಿಸಲಾಯಿತು.

ಹೀಗೆ ಪ್ರಬಲವಾಗುತ್ತಾ ಹೋದ ಸಂಪ್ರದಾಯವಾದಿ ರಾಷ್ಟ್ರೀಯತೆಗೆ ಪ್ರತಿರೋಧ ಬಂದಿದ್ದು ಕ್ರಾಂತಿಕಾರಿ ರಾಷ್ಟ್ರೀಯತೆಯಿಂದಲೆ. ಇಟಲಿಯ ಕ್ರಾಂತಿ ಒಟೊಮನ್




ಸಾಮ್ರಾಜ್ಯದ ಆಳ್ವಿಕೆಗೊಳಪಟ್ಟಿದ್ದ ಗ್ರೀಸ್‌ನಲ್ಲಿ ನಡೆದ ದಂಗೆ ಇವೆಲ್ಲವೂ ಕ್ರಾಂತಿಕಾರಿ ರಾಷ್ಟ್ರೀಯತೆಯನ್ನು ಹುಟ್ಟುಹಾಕಿದವು. ಹಾಗೆ ಹುಟ್ಟಿಕೊಂಡ ಕ್ರಾಂತಿಕಾರಿ ರಾಷ್ಟ್ರೀಯತೆಯು ಜನರ ಸ್ವಾತಂತ್ರ್ಯವನ್ನು ಹರಣ ಮಾಡಲು ತೊಡಗಿದಾಗ ಅದಕ್ಕೆ ಪ್ರತಿಭಟನೆಯಾಗಿ ಮದ್ಯಮವರ್ಗದ ಜನರ ನೇತ್ರತ್ವದಲ್ಲಿ ಸಂವಿಧಾನಾತ್ಮಕ ಆಳ್ವಿಕೆ ಮತ್ತು ಜನರದ್ದೆ ಆದ ಸ್ವತಂತ್ರ ರಾಷ್ಟ್ರಕ್ಕಾಗಿ ಫ್ರಾನ್ಸ್, ಜರ್ಮನಿ, ಇಟಲಿ, ಪೋಲೆಂಡ್ ಮೊದಲಾದ ದೇಶಗಳಲ್ಲಿ ದಂಗೆ ಪ್ರಾರಂಬವಾಯಿತು.

## ರಾಷ್ಟ್ರೀಯತೆಯ ಸಮಸ್ಯಾತ್ಮಕತೆ

ಜನರದ್ದೇ ಆಳ್ವಿಕೆ ಎನ್ನುವ ಘೋಷಣೆಯಿಂದ ಪ್ರಾರಂಭವಾದ ರಾಷ್ಟ್ರೀಯತೆಯ ಕಲ್ಪನೆ ತನ್ನಲ್ಲಿಯೇ ಹಲವಾರು ವೈರುಧ್ಯವನ್ನೂ ಒಳಗೊಂಡಿತ್ತು. ಉದಾಹರಣೆಗೆ ಒಂದು ರಾಷ್ಟ್ರವಾಗಿ ಉಗಮವಾದ ಬ್ರಿಟನ್ ತಾನೊಂದು ಪ್ರಬಲ ರಾಷ್ಟ್ರವಾಗುವ ಹವಣಿಕೆಯಲ್ಲಿ ಇತರ ಹಲವಾರು ದೇಶಗಳನ್ನು ತನ್ನ ವಸಾಹತುವಾಗಿಸಿಕೊಂಡಿತು. ಇಪ್ಪತ್ತನೆಯ ಶತಮಾನದಲ್ಲಿ ಆದ ಪ್ರಮುಖ ಬೆಳವಣಿಗೆಗಳೆಂದರೆ ಪರಿಶುದ್ಧ ಆರ್ಯ ಜನಾಂಗದವರಿಗೆ ಒಂದು ರಾಷ್ಟ್ರ ನಿರ್ಮಾಣ ಮಾಡಲು ಹೊರಟ ಹಿಟ್ಲರ್‌ನಿಂದಾಗಿ ಪ್ರಾಂಭವಾದ ಮಹಾಯುದ್ಧ ಮತ್ತು ಜಗತ್ತಿನಾದ್ಯಂತ ವಸಾಹತುಶಾಹಿ ಆಳ್ವಿಕೆಯ ವಿರುದ್ಧ ನಡೆದ ರಾಷ್ಟ್ರೀಯ ಚಳುವಳಿಗಳು. ಒಟ್ಟಾರೆಯಾಗಿ ಹೇಳುವುದಾದರೆ ರಾಷ್ಟ್ರದ ಪರಿಕಲ್ಪನೆಯ ಸ್ವರೂಪ ಯಾವುದೇ ಇರಲಿ ಸಂಘರ್ಷ ಎನ್ನುವುದು ಅದರಲ್ಲಿ ಅಂತರ್ಗತವಾಗಿರುವ ಅಂಶ ಎನ್ನುವುದು ಸ್ಪಷ್ಟವಾಗುತ್ತದೆ. ಜಗತ್ತಿನಾದ್ಯಂತ ರಾಷ್ಟ್ರದ ಪರಿಕಲ್ಪನೆಯ ಪರಿಹರಿಸುತ್ತಿರುವ ಸಮಸ್ಯೆಗಳಿಗಿಂತ ಅದು ಸೃಷ್ಟಿಸುತ್ತಿರುವ ಹೊಸ ಸಮಸ್ಯೆಗಳ ಸಂಖ್ಯೆಯೇ ಹೆಚ್ಚು. ಇತ್ತೀಚಿನ ಇಸ್ಲಾಮಿಕ್ ರಾಷ್ಟ್ರ ಸ್ಥಾಪನೆಯ ಉದ್ದೇಶ ಹುಟ್ಟುಹಾಕುತ್ತಿರುವ ಭಯೋತ್ಪಾದನೆಯನ್ನು ನೋಡಿದರೆ ಇದು ನಮಗೆ ಸ್ಪಷ್ಟವಾಗುತ್ತದೆ. ಇದು ಹೀಗೇಕೆ ಆಗುತ್ತಿದೆ ಎನ್ನುವುದರ ಕುರಿತು ಚಿಂತಿಸುವ ಅಗತ್ಯವಿದೆ.

## ಯೂರೋಪ್‌ನ ರಾಷ್ಟ್ರೀಯತೆ ಭಾರತಕ್ಕೆ ಬಂದಾಗ...

ಯುರೋಪಿನ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಒಂದು ವಿದ್ಯಮಾನವಾಗಿ ರಾಷ್ಟ್ರವು ಪ್ರಕಟವಾದ ಸ್ವರೂಪಕ್ಕೂ, ಯುರೋಪೇತರ ಸಂಸ್ಕೃತಿಗಳಲ್ಲಿ ಪ್ರಕಟಗೊಳ್ಳುತ್ತಿರುವ ಅದರ ಸ್ವರೂಪಕ್ಕೂ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ಯುರೋಪೇತರ ಸಂಸ್ಕೃತಿಗಳಲ್ಲಿ ಅದರಲ್ಲೂ ಪ್ರಮುಖವಾಗಿ ಏಷಿಯಾ ಸಂಸ್ಕೃತಿಯಲ್ಲಿನ ಜನರಲ್ಲಿ ಒಂದು ಪ್ರಭುತ್ವದಲ್ಲಿ ವಾಸಿಸುವರೆಲ್ಲರೂ ಜನಾಂಗೀಯ (ಎಥ್ನಿಕ್) ಗುಂಪಾಗಬೇಕೆಂಬ ಹವಣಿಕೆ ಕಂಡುಬರುವುದಿಲ್ಲ. ಯುರೋಪೇತರ ರಾಜಕೀಯ ವ್ಯವಸ್ಥೆಗಳು ಅದರಲ್ಲೂ ವಿಶೇಷವಾಗಿ ಭಾರತದ ಪರಂಪರಾಗತ ವ್ಯವಸ್ಥೆಯು ಹತ್ತು ಹಲವು ಜನಾಂಗೀಯ ಗುಂಪುಗಳ ಅಸ್ಮಿತೆಗಳನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳುವ ಒಂದು ಯಶಸ್ವಿ ಪ್ರಯೋಗವೆಂದೇ ಹೇಳಬೇಕು. ಭಾರತದ ವೈವಿಧ್ಯತೆಯ ಮೂಲ ಇರುವುದು ಇಲ್ಲಿಯೆ. ಪ್ರತಿಯೊಂದು ಜನಾಂಗವೂ ತನ್ನದೆ ಆದ ಪ್ರಭುತ್ವವನ್ನು ಹೊಂದಿರಬೇಕು ಎನ್ನುವ ಆಧುನಿಕ ರಾಷ್ಟ್ರ–ಪ್ರಭುತ್ವಗಳ ಕಲ್ಪನೆ ಇದಕ್ಕೆ ವ್ಯತಿರಿಕ್ತವಾಗಿದೆಯಷ್ಟೇ ಅಲ್ಲ, ಒಂದೇ ಪ್ರಭುತ್ವದಲ್ಲಿ ಹಲವಾರು ಜನಾಂಗಗಳಿಗೆ ಆಶ್ರಯ ನೀಡಬೇಕಾದ ಅನಿವಾರ್ಯತೆ ಆಧುನಿಕ ರಾಷ್ಟ್ರ–ಪ್ರಭುತ್ವಗಳ ಮುಂದೆ ದೊಡ್ಡ ಸವಾಲಾಗಿ ನಿಂತಿದೆ. ಇದಕ್ಕೆ ಸಂಬಂಧಿಸಿದಂತೆ ನಮ್ಮ ದೇಶವು ಎದುರಿಸುತ್ತಿರುವ ಸಮಸ್ಯೆಗಳನ್ನೆ ಗಮನಿಸಿ.

ಇಲ್ಲಿ ರಾಷ್ಟ್ರದ ಪರಿಕಲ್ಪನೆಯನ್ನು ಕುರಿತಂತೆ ಪರಸ್ಪರ ವಿರುದ್ಧವಾದ ನಿಲುವುಗಳಿರುವುದನ್ನು ನಾವು ಕಾಣುತ್ತೇವೆ. ಎಡಪಂಥೀಯ/ಸೆಕ್ಯುಲರ್ ರಾಷ್ಟ್ರದ

ಪರಿಕಲ್ಪನೆಯು ಬಲಪಂಥೀಯರ ನಿಲುವಿಗೆ ವಿರುದ್ಧವಾಗಿದೆ. ವಿಭಿನ್ನ ಜನಾಂಗೀಯ ಗುಂಪುಗಳ ಅಸ್ಮಿತೆಯನ್ನು ಉಳಿಸಿಕೊಂಡೇ ಒಂದು ರಾಷ್ಟ್ರವಾಗಿ ಬೆಳೆಯಬೇಕೆಂಬುದು ಎಡಪಂಥೀಯ/ಸೆಕ್ಯುಲರ್‌ವಾದಿಗಳ ಆಶಯವಾಗಿದ್ದರೆ ಭಾರತವು ಒಂದು ಬಲಾಢ್ಯ ರಾಷ್ಟ್ರವಾಗಿ ಬೆಳೆಯಬೇಕಾದರೆ ಭಾರತೀಯರು ಹಿಂದೂ ಜನಾಂಗೀಯ ಗುಂಪಾಗಿ ಬದಲಾಗಬೇಕೆಂಬುದು ಹಿಂದುತ್ವವಾದಿಗಳ ನಿಲುವಾಗಿದೆ. ಆದರೆ ಈ ಎರಡು ಗುಂಪಿಗೆ ಸೇರಿದವರಲ್ಲಿರುವ ಭಿನ್ನಾಭಿಪ್ರಾಯ ಭಾರತದ ರಾಷ್ಟ್ರದ ಸ್ವರೂಪದ ಕುರಿತಾಗಿದೆಯೆ ಹೊರತು ಭಾರತ ಒಂದು ರಾಷ್ಟ್ರವಾಗಬೇಕು ಎನ್ನುವುದರಲ್ಲಿ ಇಬ್ಬರಲ್ಲೂ ಸಹಮತವಿದೆ. ಭಾರತೀಯರೆಲ್ಲರಲ್ಲೂ ರಾಷ್ಟ್ರೀಯತೆಯ ಭಾವನೆ ಬಲವಾಗಿ ಬೆಳೆದರೆ ಮಾತ್ರ ದೇಶಕ್ಕೆ ಉಜ್ವಲ ಭವಿಷ್ಯವಿದೆ ಎನ್ನುವ ಧೋರಣೆ ಎರಡೂ ಗುಂಪಿನವರಿಗಿದೆ. ರಾಷ್ಟ್ರದ ಏಕತೆಗೆ ಧಕ್ಕೆ ತರುತ್ತಿರುವ ಶಕ್ತಿಯಾಗಿ ಒಂದು ಗುಂಪು ಮತ್ತೊಂದಕ್ಕೆ ಕಾಣಿಸುತ್ತಿದೆ. ಭಾರತ ಒಂದು ರಾಷ್ಟ್ರವಾಗುವಲ್ಲಿ ಎದುರಾಗುತ್ತಿರುವ ಸಮಸ್ಯೆಯನ್ನು ಸಾಕಷ್ಟು ವಿದ್ವಾಂಸರು ಗುರುತಿಸಿದ್ದಾರೆ. ಜನರಲ್ಲಿ ನಾವೆಲ್ಲ ಒಂದು ಎನ್ನುವ ಭಾವನೆ ಬರದಿರುವುದಕ್ಕೆ ಹಲವಾರು ವಿಚ್ಛಿದ್ರಕಾರಿ ಪಟ್ಟಭದ್ರ ಹಿತಾಸಕ್ತಿಗಳು ಕಾರಣ ಎಂದು ಕೆಲವರಿಗನಿಸಿದರೆ, ಮತ್ತೆ ಕೆಲವರಿಗೆ ರಾಜಕೀಯ ನೇತಾರರಲ್ಲಿರುವ ಸಂಕುಚಿತ ಮನೋಭಾವ ಭಾರತ ಒಂದಾಗದಂತೆ ತಡೆಯುತ್ತಿದ್ದು, ನಾವೆಲ್ಲ ಒಂದು ರಾಷ್ಟ್ರವಾಗಬೇಕೆಂಬ ಹಂಬಲ ಭಾರತೀಯರಲ್ಲಿ ಇಲ್ಲವೆನ್ನುವ ವಾಸ್ತವವನ್ನೂ ಸಹ ಕೆಲವರು ಗುರುತಿಸುತ್ತಾರೆ.

## ರಾಷ್ಟ್ರೀಯತೆ ಮತ್ತು ಕ್ರಿಶ್ಚಿಯನ್ ದೈವಶಾಸ್ತ್ರ

ಭಾರತದಂತೆಯೇ ರೋಮ್ ಕೂಡ ಕ್ರಿಶ್ಚಿಯನ್ ಆಳ್ವಿಕಗೊಳಪಡುವ ಮತ್ತು ಅದರ ಪರಿಣಾಮವಾಗಿ ತಾನೆ ಒಂದು ಕ್ರಿಶ್ಚಿಯನ್ ದೇಶವಾಗಿ ಮತಾಂತರಗೊಳ್ಳುವ ಮುನ್ನ ವೈವಿಧ್ಯಮಯ ಬದುಕಿನ ಕ್ರಮಗಳನ್ನು ಅನುಸರಿಸುತ್ತಿದ್ದ ನೂರಾರು ಸಮುದಾಯಗಳನ್ನು ಒಳಗೊಂಡ ಒಂದು ವಿಶಿಷ್ಟ ಸಂಸ್ಕೃತಿಯಾಗಿತ್ತು. ಪ್ರತಿಯೊಂದು ಸಮುದಾಯವೂ ತನ್ನದೇ ಆದ ಬದುಕಿನ ರೀತಿನೀತಿಗಳನ್ನು, ಸಂಪ್ರದಾಯಗಳನ್ನು, ಕಟ್ಟುಪಾಡುಗಳನ್ನು ಹೊಂದಿತ್ತು. ತನ್ನ ಸಮುದಾಯದವರ ಬದುಕಿಗೆ ಅಗತ್ಯವಾದ ನಿಯಮಗಳನ್ನು ತಾನೇ ರೂಪಿಸಿಕೊಳ್ಳುತ್ತಿತ್ತು. ಎಲ್ಲ ಸಮುದಾಯಗಳನ್ನು ಒಟ್ಟಿಗೆ ತಂದು ಅವುಗಳೆಲ್ಲವಕ್ಕೂ ಸಮಾನವಾದ ಶಾಸನಗಳನ್ನು ಮಾಡುವ ರಾಜಕೀಯ ವ್ಯವಸ್ಥೆಯ ಪರಿಚಯವೇ ಅದಕ್ಕಿರಲಿಲ್ಲ. ಆದರೆ ರೋಮ್‌ನ ಸಮಾಜ ಕ್ರಮೇಣ ಕ್ರಿಶ್ಚಿಯನ್ ಚರ್ಚುಗಳ ಪ್ರಭಾವಕ್ಕೊಳಗಾಗುತ್ತಾ ಹೋದಂತೆ ಅದೂವರೆಗೂ ಆಚರಿಸಿಕೊಂಡು ಬರುತ್ತಿದ್ದ ವೈವಿಧ್ಯಮಯ ಸಂಪ್ರದಾಯಗಳು ಕಣ್ಮರೆಯಾಗುತ್ತಾ ಬಂದವು.

ಎಸ್.ಎನ್. ಬಾಲಗಂಗಾಧರ ಅವರಂತಹ ವಿದ್ವಾಂಸರ ಪ್ರಕಾರ ಹೀಗಾಗಲು ಕಾರಣವೆಂದರೆ ಕ್ರಿಶ್ಚಿಯನ್ ಮತದ ಪ್ರಕಾರ ಬೇರೆ ಬೇರೆ ಜನರಿಗೆ ಬೇರೆ ಬದುಕಿನ ನಿಯಮಗಳಿರುವುದು ಸಾಧ್ಯವಿಲ್ಲ. ಇಡಿ ವಿಶ್ವವನ್ನು ಹಾಗೂ ಮಾನವರನ್ನು ಸೃಷ್ಟಿಸಿದ ಗಾಡ್ ಎಲ್ಲರಿಗೂ ಸಮಾನವಾದ ನಿಯಮಗಳನ್ನು ರೂಪಿಸಿದ್ದಾನೆ ಮತ್ತು ಆ ಮಾರ್ಗ ಯಾವುದು ಎನ್ನುವುದು ದೈವವಾಣಿಯಾದ ಪವಿತ್ರ ಗ್ರಂಥದಲ್ಲಿ ಸ್ಪಷ್ಟವಾಗಿದೆ. ಆದ್ದರಿಂದ ಕ್ರಿಶ್ಚಿಯನ್ನರ ಪ್ರಕಾರ ತಮ್ಮದೇ ಆದ ವಿವಿಧ ಮಾರ್ಗಗಳನ್ನು ಅನುಸರಿಸುತ್ತಿರುವ ರೋಮನ್ನರಿಗೆ ಸರಿಯಾದ ಮಾರ್ಗ ಯಾವುದು ಎನ್ನುವ ತಿಳುವಳಿಕೆ ಇಲ್ಲ. ಸೈತಾನನ್ನೆ (ಡೆವಿಲ್) ಸತ್ಯದೇವನೆಂದು ನಂಬಿಸಿ ಸರಿಯಾದ ಧರ್ಮ ಮಾರ್ಗದಿಂದ ಅವರನ್ನು ವಿಚಲಿತಗೊಳಿಸಿ ತಪ್ಪು ಮಾರ್ಗವನ್ನು ಹಿಡಿಯುವಂತೆ ಮಾಡಲಾಗಿದೆ. ಹೀಗೆ ಮಾಡಿರುವುದು ಸೈತಾನನ ಆರಾಧಕರಾದ ಸ್ಥಳೀಯ ಪುರೋಹಿತಶಾಹಿ ವರ್ಗ. ರೋಮ್‌ನ ಜನರು ಅನುಸರಿಸುತ್ತಿರುವ ವಿವಿಧ ಬದುಕಿನ ಕ್ರಮಗಳು ವಿವಿಧ ಸತ್ಯಗಳನ್ನು ಆದರಿಸಿರುತ್ತವೆ. ಹಾಗಿರುವುದು ಸಾಧ್ಯವಿಲ್ಲ. ಏಕೆಂದರೆ ಸತ್ಯ ಒಂದೇ ಆಗಿದೆ. ಪವಿತ್ರ ಗ್ರಂಥದಲ್ಲಿ ಏನನ್ನು ಹೇಳಲಾಗಿದೆಯೋ ಅದು ಮಾತ್ರ ಸತ್ಯವಾಗಿರಲು ಸಾಧ್ಯ. ಅದನ್ನು ಆಧರಿಸಿ ಜನರ ಬದುಕು ರೂಪಿತವಾಗಬೇಕು. ಆ ಮಾರ್ಗವನ್ನು ಗಾಡ್ ಸೂಚಿಸಿರುವುದರಿಂದ ಅದರಲ್ಲಿ ಯಾವುದೇ ವಿರೋದಾಭಾಸಗಳು ಇರಲು ಸಾಧ್ಯವಿಲ್ಲ ಮತ್ತು ಗಾಡ್ ಸಾರ್ವಭೌಮನಾಗಿರುವುದರಿಂದ ಅವನು ಸೂಚಿಸಿರುವ ಮಾರ್ಗ ಪ್ರಶ್ನಾತೀತ. ಈ ಹಿನ್ನೆಲೆಯಲ್ಲಿ ನೋಡಿದಾಗ ಮಾತ್ರ ಶಾಸನ ಮಾಡುವ ಅಧಿಕಾರವನ್ನೂ ಒಳಗೊಂಡಂತೆ ಇನ್ನಿತರ ಹಲವಾರು ವಿಷಯಗಳಲ್ಲಿ ರಾಷ್ಟ್ರದ ಸಾರ್ವಭೌಮತೆ ಏಕೆ ಪ್ರಶ್ನಾತೀತವಾಗಿರುತ್ತದೆ ಎನ್ನುವುದನ್ನು ನಾವು ಗ್ರಹಿಸಬಹುದಾಗಿದೆ. ಕ್ರಿಶ್ಚಿಯನ್ ಆಳ್ವಿಕೆ ರೋಮ್‌ನಲ್ಲಿ ವಿಸ್ತಾರವಾಗುತ್ತಾ ಹೋದಂತೆ ಸ್ಥಳೀಯ ರೂಢಿ ಸಂಪ್ರದಾಯಗಳಿಗೆ ಬದಲಾಗಿ ಎಲ್ಲರಿಗೂ ಅನ್ವಯವಾಗುವ ಸಮಾನ ಕಾನೂನ್ನು ತರಲಾಯಿತು. ಸಾಂಪ್ರದಾಯಿಕ ರೋಮ್ ಸಾಮ್ರಾಜ್ಯದ ಪತನದ ನಂತರ ಸುಮಾರು ಸಾವಿರ ವರ್ಷಗಳಷ್ಟು ಕಾಲ (೪ನೆ ಶತಮಾನದಿಂದ ೧೪ನೆ ಶತಮಾನದವರೆಗೆ) ಯುರೋಪಿನಲ್ಲಿ ನಡೆದ ನಿರಂತರ ಕ್ರಿಶ್ಚಿಯನ್ ಆಳ್ವಿಕೆಯ ಪರಿಣಾಮವಾಗಿ ಕ್ರಿಶ್ಚಿಯನ್ ದೈವಶಾಸ್ತ್ರದ ಚಿಂತನೆಗಳು ಆಳವಾಗಿ ಬೇರೂರಿದ್ದು ಮಾತ್ರವಲ್ಲ, ಅವು ಕ್ರಮೇಣ ಸೆಕ್ಯುಲರ್ ಅವತಾರವನ್ನು ಧರಿಸಿ ಕ್ರಿಶ್ಚಿಯನ್ ಮತದ ಮಿತಿಯನ್ನು ದಾಟಿ ಸಾರ್ವತ್ರಿಕವಾಗಿ ಅನ್ವಯವಾಗುವ ಚಿಂತನೆಗಳು ಎನ್ನುವ ಭ್ರಮೆಯನ್ನು ಹುಟ್ಟಿಸಿತು.

**ಅಮೇರಿಕಾ ಸಂಯುಕ್ತ ಸಂಸ್ಥಾನವು ಆಧುನಿಕ ರಾಷ್ಟ್ರವಾಗುವ ನಿಟ್ಟಿನಿಲ್ಲಿ ರೆಡ್ ಇಂಡಿಯನ್ ಸಮುದಾಯ ಕಣ್ಮರೆಯಾಯಿತು. ಅಮೇರಿಕಾ ರಾಷ್ಟ್ರವಾದ ಹೊಸತರಲ್ಲಿ ಹೊಸದಾಗಿ ಪರಿಚಯಸಲ್ಪಟ್ಟ ಕಾನೂನಿನಂತೆ ಕೆಲವರು ನಿಮ್ಮ ಭೂಮಿಯನ್ನು ಖರೀದಿಸುತ್ತೇವೆ ಎಂದಾಗ, ಭೂಮಿ ಎಲ್ಲರಿಗೂ ಸೇರಿದ್ದು ಅದು ಯಾರೊಬ್ಬರ ಸ್ವತ್ತಲ್ಲ ಎಂದು ನಂಬಿದ್ದ ರೆಡ್ ಇಂಡಿಯನ್ನರಿಗೆ ಅವರು ಏನು ಹೇಳುತ್ತಿದ್ದಾರೆಂಬುದೆ ಅರ್ಥವಾಗಲಿಲ್ಲ. ಅದಕ್ಕೆ ಅವರು ಪ್ರತಿಕ್ರಿಯಿಸಿದ ರೀತಿ ಮಾರ್ಮಿಕವಾಗಿತ್ತು: “ನಮ್ಮದಲ್ಲದ ವಸ್ತುವನ್ನು ಖರೀದಿಸುವುದಾಗಲಿ ಅಥವಾ ವಿಕ್ರಯಿಸುವುದಾಗಲಿ ಹೇಗೆ ಸಾಧ್ಯ? ಚಿರತೆಯ ಬಣ್ಣವನ್ನಾಗಲಿ ಅಥವಾ ಅದರ ವೇಗವನ್ನಾಗಲಿ ಖರೀದಿಸುವುದು ಸಾಧ್ಯವೆ?” ಇಂತಹ ನ್ಯಾಯ, ನೀತಿ, ನಂಬಿಕೆಗಳನ್ನು ಹೊಂದಿದ್ದ ಸಮುದಾಯವನ್ನು ಆಧುನಿಕ ರಾಷ್ಟ-ಪ್ರಭುತ್ವ ಬಲಿತೆಗೆದುಕೊಂಡಿತು.**

## ರಾಷ್ಟ್ರೀಯತೆಯ ಬಲಿಗಳು

ರಾಷ್ಟ್ರ–ಪ್ರಭುತ್ವದ ಅಸ್ತಿತ್ವಕ್ಕೆ ತನ್ನ ವಲಯದೊಳಗೆ ಬರುವವರೆಲ್ಲರೂ ಒಂದೇ ಕಾನೂನಿನ ಆಳ್ವಿಕೆಗೊಳಪಡುವುದು ಅತ್ಯಂತ ಅಗತ್ಯ. ನಮಗೆಲ್ಲರಿಗೂ ತಿಳಿದಿರುವಂತೆ ಯಾವುದೇ ಕಾನೂನಿಗೆ ನಿರ್ದಿಷ್ಟವಾದ ನೈತಿಕ ಮತ್ತು ನ್ಯಾಯಿಕ ತಳಹದಿ ಇರುತ್ತದೆ. ಹಾಗಾಗಿ ತಮ್ಮದೆ ಆದ ವಿಭಿನ್ನ ನೈತಿಕ, ನ್ಯಾಯಿಕ ಹಾಗೂ ಸಾಂಸ್ಕೃತಿಕ ತಳಹದಿಯನ್ನು ಹೊಂದಿರುವ ವಿಭಿನ್ನ ಸಮುದಾಯಗಳನ್ನು ಅವುಗಳ ಮೂಲ ಅಸ್ತಿತ್ವಕ್ಕೆ ಧಕ್ಕೆ ಬರದಂತೆ ಸಮಾನವಾದ ಕಾನೂನಿನ ಆಳ್ವಿಕೆಗೊಳಪಡಿಸುವುದು ಒಂದು ವಿಧದಲ್ಲಿ ದುಸ್ತರವೇ ಸರಿ. ಇದು ಎರಡು ವಿಧದ ಪರಿಣಾಮಗಳಿಗೆ ಎಡೆಮಾಡಿಕೊಡುತ್ತದೆ. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಮುದಾಯಗಳು ಸಂಘರ್ಷದ ಹಾದಿಯನ್ನು ಹಿಡಿಯಬೇಕು. ಇಲ್ಲವೆ ಸಂಘರ್ಷವವನ್ನು ಹತ್ತಿಕ್ಕಲು ರಾಷ್ಟ್ರವು ಯಶಸ್ವಿಯಾದರೆ (ಹೀಗಾಗುವ ಸಾಧ್ಯತೆಯೇ ಹೆಚ್ಚು) ಸಮುದಾಯವು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಬೇಕಾಗುತ್ತದೆ. ರೋಮ್‌ನಲ್ಲಿ ಅದದ್ದು ಅದೇ. ಹಾಗೆಯೆ **ಅಮೇರಿಕಾ ಸಂಯುಕ್ತ ಸಂಸ್ಥಾನವು ಆಧುನಿಕ ರಾಷ್ಟ್ರವಾಗುವ ನಿಟ್ಟಿನಿಲ್ಲಿ ರೆಡ್ ಇಂಡಿಯನ್ ಸಮುದಾಯ ಕಣ್ಮರೆಯಾಯಿತು. ಅಮೇರಿಕಾ ರಾಷ್ಟ್ರವಾದ ಹೊಸತರಲ್ಲಿ ಹೊಸದಾಗಿ ಪರಿಚಯಸಲ್ಪಟ್ಟ ಕಾನೂನಿನಂತೆ ಕೆಲವರು ನಿಮ್ಮ ಭೂಮಿಯನ್ನು ಖರೀದಿಸುತ್ತೇವೆ ಎಂದಾಗ, ಭೂಮಿ ಎಲ್ಲರಿಗೂ ಸೇರಿದ್ದು ಅದು ಯಾರೊಬ್ಬರ ಸ್ವತ್ತಲ್ಲ ಎಂದು ನಂಬಿದ್ದ ರೆಡ್ ಇಂಡಿಯನ್ನರಿಗೆ ಅವರು ಏನು ಹೇಳುತ್ತಿದ್ದಾರೆಂಬುದೆ ಅರ್ಥವಾಗಲಿಲ್ಲ. ಅದಕ್ಕೆ ಅವರು ಪ್ರತಿಕ್ರಿಯಿಸಿದ ರೀತಿ ಮಾರ್ಮಿಕವಾಗಿತ್ತು: “ನಮ್ಮದಲ್ಲದ ವಸ್ತುವನ್ನು ಖರೀದಿಸುವುದಾಗಲಿ ಅಥವಾ ವಿಕ್ರಯಿಸುವುದಾಗಲಿ ಹೇಗೆ ಸಾಧ್ಯ? ಚಿರತೆಯ ಬಣ್ಣವನ್ನಾಗಲಿ ಅಥವಾ ಅದರ ವೇಗವನ್ನಾಗಲಿ ಖರೀದಿಸುವುದು ಸಾಧ್ಯವೆ?” ಇಂತಹ ನ್ಯಾಯ, ನೀತಿ, ನಂಬಿಕೆಗಳನ್ನು ಹೊಂದಿದ್ದ ಸಮುದಾಯವನ್ನು ಆಧುನಿಕ ರಾಷ್ಟ್ರ–ಪ್ರಭುತ್ವ ಬಲಿತೆಗೆದುಕೊಂಡಿತು.**

## ರಾಷ್ಟ್ರೀಯತೆಯ ಮುಂದಿರುವ ಸವಾಲು

ರಾಷ್ಟ್ರ–ಪ್ರಭುತ್ವವಾಗಬಯಸುವ ಒಂದು ರಾಜಕೀಯ ಪ್ರಭುತ್ವವು ತನ್ನೊಳಗೆ ಇತರ ಜನಾಂಗಗಳನ್ನೂ ಒಳಗೊಳಗೊಳ್ಳುವ ಒತ್ತಡಕ್ಕೆ ಸಿಲುಕಿಕೊಳ್ಳುತ್ತಾ ಹೋದಂತೆಲ್ಲ ತನ್ನ ಪ್ರಜೆಗಳಲ್ಲಿ ರಾಷ್ಟ್ರ ಹಾಗೂ ರಾಷ್ಟ್ರೀಯತೆಯ ಭಾವನೆಗಳನ್ನು ಹುಟ್ಟುಹಾಕುವ ನಿಟ್ಟಿನಲ್ಲಿ ಒಂದಲ್ಲ ಒಂದು ಸಮಸ್ಯೆಯನ್ನು ಎದುರಿಸುತ್ತಲೇ ಇದೆ. ವಿವಿಧ ಚಿಂತನಾ ಮತ್ತು ಬದುಕಿನ ಕ್ರಮಗಳನ್ನು ಒಳಗೊಳ್ಳುತ್ತಲೆ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸುವುದು ಹೇಗೆ? ತಮ್ಮ ಸಂಸ್ಕೃತಿಯ ಅಸ್ತಿತ್ವಕ್ಕೆ ಧಕ್ಕೆ ತಂದಾಗಲೂ ರಾಷ್ಟ್ರದ ಪರಮಾಧಿಕಾರವನ್ನು ಯಾರಾದರೂ ಏಕೆ ಸೈರಿಸಿಕೊಳ್ಳಬೇಕು? ರಾಷ್ಟ್ರೀಯ ಸ್ವ– ನಿರ್ಧಾರ ಎಂದರೇನು? ರಾಷ್ಟ್ರೀಯ ಐಕ್ಯತೆಯ ಸರಿಯಾದ ವ್ಯಾಖ್ಯಾನ ಯಾವುದು? ಇವೇ ಮುಂತಾದ ಪ್ರಶ್ನೆಗಳಿಂದ ಯಾವುದೇ ರಾಷ್ಟ್ರವೂ ಮುಕ್ತವಾಗಿಲ್ಲ. ಭಾರತದ ಉದಾಹರಣೆಯನ್ನೆ ತೆಗೆದುಕೊಳ್ಳಿ. ವಿವಿಧತೆ ಭಾರತದ ವಿಶಿಷ್ಟ ಲಕ್ಷಣವೆಂದು ಗುರುತಿಸುತ್ತೇವೆ. ಆದರೆ ಏಕತೆಯ ಸ್ವರೂಪ ಹೇಗಿರಬೇಕು ಎನ್ನುವುದರ ಕುರಿತು ಇನ್ನೂ ನಮ್ಮಲ್ಲಿ ಸಹಮತ ಒಡಮೂಡಿಲ್ಲ. ಭಾರತವನ್ನು ಒಂದು ರಾಷ್ಟ್ರವಾಗಿ ಮಾಡಲು ಅಗತ್ಯವಾದ ಅಂಶಗಳಾವುವು ಎನ್ನುವುದರ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯಗಳಿವೆ.

ಮೇಲ್ನೋಟಕ್ಕೆ ಇದು ಕೇವಲ ಎರಡು ವಿಭಿನ್ನ ಪರಿಕಲ್ಪನೆಗಳ, ಅಂದರ ಇತರರನ್ನು ಒಳಗೊಳ್ಳದ ಹಿಂದುತ್ವ ಹಾಗೂ ಇತರರನ್ನು ಒಳಗೊಳ್ಳುವ ಸೆಕ್ಯುಲರ್

**(೧೧ನೇ ಪುಟಕ್ಕೆ**

ವಿಚಾರ-೩

# ಹಿಂದೂ ರಾಷ್ಟ್ರವಾದದ ಚರಿತ್ರೆ ಮತ್ತು ವರ್ತಮಾನ

-ನಿತ್ಯಾನಂದ ಬಿ ಶೆಟ್ಟಿ

ಹಿಂದೂ ರಾಷ್ಟ್ರವಾದದ ಬೇರುಗಳನ್ನು ಚರಿತ್ರೆಯಲ್ಲಿ ಗುರುತಿಸುವುದು ಮತ್ತು ಅದು ಪಡೆದ ವಿವಿಧ ರೂಪಗಳು-ಅವುಗಳಿಗೆ ಕಾರಣಗಳು-ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಿಂದೂ ರಾಷ್ಟ್ರಿಯತೆಯ ಪಾತ್ರ-ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಅದು ಬೆಳೆದ ಬಗೆ ಮತ್ತು ಇಂದಿನ ಅದರ ಪ್ರಾಬಲ್ಯಕ್ಕೆ ಕಾರಣಗಳು ಮತ್ತು ಪರಿಣಾಮಗಳನ್ನು ಇಂದಿನ ಉಪನ್ಯಾಸದಲ್ಲಿ ಒಳಗೊಳ್ಳಬೇಕು ಎಂದು ಶಿಬಿರ ನಿರ್ದೇಶಕರಾದ ಡಿ. ಎಸ್. ನಾಗಭೂಷಣರವರು ನನಗೆ ಸೂಚಿಸಿದ್ದಾರೆ. ಈ ವಿಷಯದ ಕುರಿತಂತೆ ಇಲ್ಲಿ ನಾನಾಡುವ ಮಾತುಗಳು ನನ್ನ ಮಾತುಗಳೇನೂ ಅಲ್ಲ. ಹಿಂದೂ ರಾಷ್ಟ್ರೀಯತೆಯ ಕುರಿತು ಬಹಳ ಆಳವಾಗಿ ಅಧ್ಯಯನ ಮಾಡಿ ಅನೇಕ ವಿದ್ವಾಂಸರ ಚಿಂತನೆಗಳು ನನ್ನ ಮಾತುಗಳಲ್ಲಿ ಅಡಕಗೊಂಡಿವೆ.

ಹಿಂದೂ ರಾಷ್ಟ್ರವಾದದ ಇತಿಹಾಸ ಮತ್ತು ಅದರ ಈಗಿನ ಪ್ರಾಬಲ್ಯದ ಕುರಿತು ಮಾತಾಡುವುದಕ್ಕಿಂತ ಮೊದಲು ದೇಶಭಕ್ತಿಗೂ ರಾಷ್ಟ್ರೀಯತೆಗೂ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು. ದೇಶಭಕ್ತಿ ಮತ್ತು ರಾಷ್ಟ್ರವಾದ ಇವುಗಳ ನಡುವೆ ನಿಖರವಾದ ಮತ್ತು ಸೂಕ್ಷ್ಮವಾದ ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳು ಸೂಕ್ಷ್ಮವಾದರೂ ಅವುಗಳ ರಾಜಕೀಯ ಪರಿಣಾಮಗಳು ಬೃಹತ್ತಾದವುಗಳು.

## ದೇಶಪ್ರೇಮ-ರಾಷ್ಟ್ರವಾದ ಬೇರೆ ಬೇರೆ

ರಾಷ್ಟ್ರವಾದದಲ್ಲಿ ಒಂದು ಬಗೆಯ ಅಧಿಕಾರಶಾಹಿ ದರ್ಪ ಇರುತ್ತದೆ. ಆದರೆ ದೇಶಭಕ್ತಿಯಲ್ಲಿ ತೀವ್ರ ಭಾವನಾತ್ಮಕತೆ ಇರುತ್ತದೆ. . ಇದನ್ನು ತತ್ತ್ವಜ್ಞಾನಿ ರಸೆಲ್ ಹೀಗೆ ಹೇಳುತ್ತಾನೆ. "ದೇಶಭಕ್ತರು ನಾಡಿಗಾಗಿ ಬಲಿದಾನದ ಮಾತನಾಡುತ್ತಾರೆ. ಆದರೆ ಕೊಲ್ಲುವ ಮಾತನ್ನಲ್ಲ." ಇನ್ನೂ ಸ್ವಲ್ಪ ಸರಳವಾಗಿ ಇದನ್ನು ಹೀಗೆ ಹೇಳಬಹುದು. ದೇಶಪ್ರೇಮವೆಂದರೆ ದೇಶವನ್ನು ಪ್ರೀತಿಸುವುದು ಮತ್ತು ಅದಕ್ಕಾಗಿ ತನ್ನನ್ನು ತಾನು ಅರ್ಪಿಸಿಕೊಳ್ಳುವುದು. ಆದರೆ ರಾಷ್ಟ್ರೀಯತೆ ಎಂದರೆ ತನ್ನ ರಾಷ್ಟ್ರಕ್ಕಾಗಿ ತನ್ನದೇ ರಾಷ್ಟ್ರದ ಇನ್ನೊಬ್ಬನನ್ನು ಕೊಂದು ಮುಗಿಸುವುದು.

ಪ್ರಾದೇಶಿಕವಾದ ಅಥವಾ ಸ್ಥಳೀಯವಾದ ಸಾಂಸ್ಕೃತಿಕ ಸಂಗತಿಗಳ ಜೊತೆಗಿನ ನಿಕಟ ಒಡನಾಟದಿಂದ ಮತ್ತು ಒಲುಮೆಯಿಂದ ದೇಶಪ್ರೇಮ ಹುಟ್ಟಿದರೆ; ಕಿರು ಅಸ್ಮಿತೆಗಳನ್ನು ಹೊಸಕಿ, ಹಿರಿ ಅಸ್ಮಿತೆಗಳನ್ನು ಸೃಷ್ಟಿಸಿ ಮತ್ತು ಬೆಳೆಸಿ ರಾಷ್ಟ್ರೀಯತೆ ಅಬ್ಬರಿಸುತ್ತದೆ. ದೇಶಪ್ರೇಮವೆಂದರೆ ಒಂದು ನಿರ್ದಿಷ್ಟ ನೆಲೆ, ಒಂದು ನಿರ್ದಿಷ್ಟ ಜೀವನಕ್ರಮದ ಮೇಲೆ ನನಗಿರುವ ಅನನ್ಯ ಅವಿನಾಭಾವ ಸಂಬಂಧ ಮತ್ತು ಇಂತಹ ಅತ್ಯುತ್ತಮವಾದುದು ಜಗತ್ತಿನಲ್ಲೇ ಇಲ್ಲವೆಂಬ ಭಾವಪೂರ್ಣ ಹೆಮ್ಮೆ. ಆದರೆ ಯಾರ ಮೇಲೂ ನನಗೀ ಈ ಭಾವನೆಯನ್ನು ಹೇರುವ ಮನಸ್ಸಿರುವುದಿಲ್ಲ. ಆದರೆ ರಾಷ್ಟ್ರೀಯತೆಯನ್ನು ಅಧಿಕಾರದ ಹಂಬಲದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಪ್ರತಿಯೊಬ್ಬ ರಾಷ್ಟ್ರೀಯವಾದಿಯಲ್ಲೂ ಹೆಚ್ಚಿನ ಅಧಿಕಾರ ಮತ್ತು ಪ್ರತಿಷ್ಠೆಯನ್ನು ಆರ್ಜಿಸಿಕೊಳ್ಳಬೇಕೆಂಬ ಅಂತರ್ಗತ ಉದ್ದೇಶವಿರುತ್ತದೆ. ರಾಷ್ಟ್ರೀಯತೆ ಅದರ ಉಗ್ರ ರೂಪದಲ್ಲಿ ಅತ್ಯಂತ ಹಾನಿಕರ. ದೇಶಪ್ರೇಮ ಎನ್ನುವುದು ವಿಶಾಲಾರ್ಥದಲ್ಲಿ ಒಂದು ಬಗೆಯ ಸಹಜೀವನ. ಆದರೆ ರಾಷ್ಟ್ರೀಯತೆ ಎನ್ನುವುದು ಒಂದು ನಿರ್ದಿಷ್ಟವಾದ ರಾಜಕಾರಣ. ಇವಿಷ್ಟು ಆರಂಭದಲ್ಲಿ ಸ್ಪಷ್ಟವಾದರೆ ಇನ್ನು ಮುಂದೆ ನಾನು ಮಂಡಿಸುವ ಹಿಂದೂ ರಾಷ್ಟ್ರದ ಕಥೆ ಅಥವಾ ಹಿಂದೂ ರಾಷ್ಟ್ರೀಯತೆಯ ಅನೇಕ ಮಗ್ಗುಲುಗಳ ಪರಿಚಯ ಸುಲಭಸಾಧ್ಯವಾಗುತ್ತದೆ.

## ಭಾರತದ ರಾಷ್ಟ್ರೀಯತೆಯ ವೈಶಿಷ್ಟ್ಯ

ರಾಷ್ಟ್ರ ಎನ್ನುವ ಪರಿಕಲ್ಪನೆ ಆಧುನಿಕತೆ ಮತ್ತು ಬಂಡವಾಳಶಾಹಿಯ ಉಗಮದೊಂದಿಗೆ ಯುರೋಪಿನಲ್ಲಿ ಪ್ರಾರಂಭವಾದದ್ದು ನಿಮಗೆಲ್ಲ ತಿಳಿದೇ ಇರುವಂತಹ ಸಂಗತಿ. ಯುರೋಪಿನಲ್ಲಿ ಭಾಷೆಗಳು ಹರಳುಗಟ್ಟಿ ಸ್ಟ್ಯಾಂಡರ್ಡ್ಸ್ ಆಗುವುದರ ಮೂಲಕ ಆ ಭಾಷೆ ಒಂದು, ಆ ಭಾಷೆಯನ್ನು ಆಡುವ ಜನರೆಲ್ಲ ಒಂದು ಮತ್ತು ಆ ಭಾಷೆಯನ್ನು ಆಡುವ ಜನರುಗಳು ವಾಸಿಸುವ ಪ್ರದೇಶ, ತನ್ನದೇ ಆದ ಸ್ವಾಯತ್ತತೆಯನ್ನು ಹೊಂದಿರಬೇಕು ಮತ್ತು ಅದಕ್ಕೊಂದು ಗಡಿ ಇರಬೇಕು, ಆ ಗಡಿಗೊಂದು ತನ್ನದೇ ಆದ ಪ್ರಭುತ್ವ ಇರಬೇಕು ಎನ್ನುವ ತಿಳುವಳಿಕೆಯೊಂದಿಗೆ ರಾಷ್ಟ್ರೀಯತೆ ಕಾಣಿಸಿಕೊಂಡಿತು. ಆದರೆ ಭಾರತದ ಸಂದರ್ಭದಲ್ಲಿ ಈ ರಾಷ್ಟ್ರ ಪ್ರಭುತ್ವದ ಪರಿಕಲ್ಪನೆ ಪ್ರಾರಂಭಗೊಂಡಿದ್ದು ೧೯ನೇ ಶತಮಾನದ



ಬಂಕಿಂ ಚಂದ್ರ ಚಟರ್ಜಿ ವಿ.ಡಿ. ಸಾವರ್ಕರ್ ಎಂ.ಎಸ್. ಗೋಲ್ವಾಲ್ಕರ್

ಮಧ್ಯಭಾಗದಿಂದ. ಆದರೆ ಯುರೋಪಿನಲ್ಲಿರುವ ರಾಷ್ಟ್ರೀಯತೆಯ ಉಗಮಕ್ಕೂ, ಭಾರತದಲ್ಲಿರುವ ರಾಷ್ಟ್ರೀಯತೆಯ ಉಗಮಕ್ಕೂ ಇರುವ ವ್ಯತ್ಯಾಸ ಏನಪ್ಪಾ ಅಂದರೆ ಯುರೋಪಿನಲ್ಲಿ ಅದು ಭಾಷಾಧಾರಿತ ರಾಷ್ಟ್ರವಾಗಿ ರೂಪುಗೊಂಡಿತು. ಆದರೆ ಭಾರತದ ರಾಷ್ಟ್ರೀಯತೆ ವಸಾಹತುಶಾಹಿಯನ್ನು ವಿರೋಧಿಸುವ ನೆಲೆಯಲ್ಲಿ ಹುಟ್ಟಿಕೊಂಡಿತು ಎಂದು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ.

ರಾಷ್ಟ್ರವಾದಕ್ಕೆ ನಿರ್ದಿಷ್ಟ ತಾತ್ತ್ವಿಕತೆ ಇದೆ. ನಿರ್ದಿಷ್ಟ ಚರಿತ್ರೆ ಇದೆ. ಹಾಗಾಗಿ ರಾಷ್ಟ್ರದ ಕಲ್ಪನೆಯ ಹಿಂದೆ ಮೂಡಿಬರೋದು ರಾಷ್ಟ್ರವಾದ. ಮನುಷ್ಯ ಸಮಾಜದ ಬಹುಮುಖೀ ವ್ಯಕ್ತಿತ್ವಗಳಲ್ಲಿ ರಾಷ್ಟ್ರೀಯತೆ ತನಗೆ ಬೇಕಾದುದನ್ನು ಮಾತ್ರ ಆಯ್ದುಕೊಳ್ಳುತ್ತದೆ. ಭಾಷೆ, ಧರ್ಮ, ಸಂಸ್ಕೃತಿಗಳ ನೆಲೆಗಳಲ್ಲಿ ಜನಾಂಗವೊಂದರ ನೆನಪುಗಳನ್ನು ಆಯುವ ಮತ್ತು ಪುನರ್ ಸಂಘಟಿಸುವ ಒಂದು ಮಹಾನ್ ಪ್ರಕ್ರಿಯೆ ಆರಂಭವಾಗುವುದೇ ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ. ಹೀಗಾಗಿ ಆಧುನಿಕ ಸಮಾಜಗಳ ಎಲ್ಲ ಸಾಂಸ್ಕೃತಿಕ ಐಡೆಂಟಿಟಿಗಳೂ ನೆನಪುಗಳ ಪುನರ್ ಸಂಘಟನೆಯೇ ಹೌದು. ಭಾರತ ರಾಷ್ಟ್ರಿಯತೆಯ ಉಗಮವಾದದ್ದು ಹೀಗೆ. ಅಂದರೆ ವರ್ತಮಾನದ ಹೋರಾಟಕ್ಕೆ ಗತದ ನೆನಪುಗಳಿಂದ ಸೃಷ್ಟಿಯಾದ ವ್ಯಕ್ತಿತ್ವ ಬೇಕು. ಆದ್ದರಿಂದ ಇತಿಹಾಸ ಇಲ್ಲದವರಿಗೆ ರಾಷ್ಟ್ರತ್ವ ಇಲ್ಲ. ನೇಷನ್ಸ್ ವೇರ್ ಡೀಪ್ಲಿ ರೂಟೆಡ್ ಇನ್ ಹಿಸ್ಟರಿ. ಅಂದರೆ ಇತಿಹಾಸ ಇಲ್ಲದಿದ್ದರೆ ನಿಮಗೆ ದೇಶವೇ ಇಲ್ಲ. ಹಿಂದಿನ ಕಾಲದಲ್ಲಿ ಹೆಣ್ಣು ಕೊಡುವಾಗ ಗಂಡಿನ ಮನೆಯವರ 'ಮನೆತನ' ಎಂತಹುದು ಎಂದು ನೋಡಿ; ಅವನಿಗೊಂದು ಪರಂಪರೆ ಇದೆಯಾ ಎಂಬುದನ್ನು ಖಚಿತಪಡಿಸಿಕೊಂಡು ಹುಡುಗಿ ಕೊಡುತ್ತಿದ್ದರಲ್ಲ ಹಾಗೇನೇ ಇತಿಹಾಸದ ವಜನು ಇಲ್ಲದ ದೇಶಕ್ಕೆ ದೇಶವಾಗುವ ಯೋಗ್ಯತೆಯೇ ಇರಲಿಲ್ಲ.

## ರಾಷ್ಟ್ರ-ಇತಿಹಾಸ-ನಾಗರೀಕತೆ

ಪಶ್ಚಿಮದ ವಿದ್ವಜ್ಜನರ ಪ್ರಕಾರ; ಭಾರತೀಯರಾದ ನಮಗೆ ಇತಿಹಾಸವೂ ಇಲ್ಲ ನಾಗರಿಕತೆನೂ ಇಲ್ಲ. ಹಾಗಾಗಿ ಸಹಜವಾಗಿ ನಮಗೊಂದು ರಾಷ್ಟ್ರ ಇರೋದಕ್ಕೂ ಸಾಧ್ಯವಿಲ್ಲ. ನಮಗೆ ರಾಷ್ಟ್ರ ಬೇಕು ಅಂತ ಆದರೆ; ನಮಗೆ ಇತಿಹಾಸ ಬೇಕು. ಇದು ನಮ್ಮ ಒಳಗಿನಿಂದ ಹುಟ್ಟಿಕೊಂಡ ಸಂಗತಿಯಲ್ಲ. ಹೊರಗಿನಿಂದ ಒತ್ತಾಯದಿಂದ ಹೇರಲ್ಪಟ್ಟ ಸಂಗತಿ. ಈ ಒತ್ತಡಕ್ಕೊಳಗಾದ ನಾವು ನಮ್ಮ ಇತಿಹಾಸವನ್ನು ಉತ್ಖನನಗೊಳಿಸುತ್ತ ನಮ್ಮ ರಾಷ್ಟ್ರವನ್ನು ಕಟ್ಟಿಕೊಂಡೆವು. ಕಟ್ಟಿಕೊಳ್ತಾ ನಮ್ಮ ಇತಿಹಾಸ-ನಾಗರಿಕತೆಗಳನ್ನು ಪಶ್ಚಿಮದ ರಾಷ್ಟ್ರಗಳಿಗಿಂತಲೂ ಮಿಗಿಲಾದ ಬೃಹತ್ ಕಥನವಾಗಿ ಕಟ್ಟಿಕೊಂಡೆವು. ವಿವೇಕಾನಂದರು ಹೇಳುವುದನ್ನು ಇಲ್ಲಿ ನೆನಪಿಸಿಕೊಳ್ಳುವುದಾದರೆ, 'ಪಶ್ಚಿಮದ ಇಡೀ ಸಮಾಜ ಇನ್ನೂ ಅರಣ್ಯವಾಸಿಯಾಗಿದ್ದು, ಕಾಡಿನಲ್ಲಿ ಗೆಡ್ಡೆ ಗೆಣಸುಗಳನ್ನು ತಿಂದುಕೊಂಡು, ಮೈಗೆ ಸೊಪ್ಪು ಸುತ್ತಿಕೊಂಡು ಅಲೆದಾಡುತ್ತಿದ್ದಾಗ, ಈ ಪುಣ್ಯಭೂಮಿಯಲ್ಲಿ ಅನೇಕಾನೇಕ ಮೇಧಾವಿಗಳು ಜಗತ್ತಿನ ಸೃಷ್ಟಿ ರಹಸ್ಯದ ಬಗ್ಗೆ ಚಿಂತನೆ ನಡೆಸುತ್ತಿದ್ದರು. ಜಗತ್ತಿನ ನಾಗರಿಕತೆಯ ಮೊದಲ ತೊಟ್ಟಿಲು ತೂಗಿದ್ದೇ ಈ ಭರತವರ್ಷದಲ್ಲಿ.' ಈ ಮಾತನ್ನು ನಾವು ನೋಡಬೇಕಾದುದು, ಭಾರತವನ್ನು ಪಶ್ಚಿಮದ ರಾಷ್ಟ್ರಗಳ ಮುಂದೆ ಒಂದು ರಾಷ್ಟ್ರವಾಗಿ ಕಟ್ಟಿ ನಿಲ್ಲಿಸುವ ವಿವೇಕಾನಂದರ ಅತ್ಯುತ್ಸಾಹದ ಪರಿಪ್ರೇಕ್ಷ್ಯದಲ್ಲಿ.

ಬ್ರಿಟಿಷ್ ಚಿಂತಕ ಮತ್ತು ಇತಿಹಾಸಕಾರ ಎರಿಕ್ ಜೆ ಹಾಬ್ಸಬಾಮ್, *'೧೭೮೦ರಿಂದ ಈ ತನಕದ ರಾಷ್ಟ್ರಗಳು ಮತ್ತು ರಾಷ್ಟ್ರೀಯತೆ'* ಎಂಬ ತನ್ನ ಕೃತಿಯಲ್ಲಿ (ನೇಷನ್ಸ್

ಆಂಡ್ ನಾಶನಲಿಸಮ್ ಸಿನ್ಸ್ ೧೭೮೦) ಇತಿಹಾಸ ಮತ್ತು ರಾಷ್ಟ್ರೀಯತೆಗಿರುವ ಜಟಿಲ ಸಂಬಂಧವನ್ನು ಚರ್ಚಿಸುತ್ತಾನೆ. ರಾಷ್ಟ್ರೀಯತೆ ಎಂಬ ಅದೃಶ್ಯ ಶರೀರದ ಅಳತೆಗೆ ಸರಿಹೋಗುವಂತೆ ಇತಿಹಾಸ ಎಂಬ ಇನ್ನೊಂದು ಅದೃಶ್ಯದ ಬಟ್ಟೆಯನ್ನು ಕತ್ತರಿಸಿ ರಾಷ್ಟ್ರ ಎಂಬ ಸಾದೃಶ್ಯವನ್ನು ಹೇಗೆ ಹೊಲಿಯಲಾಯಿತು ಎಂಬುದನ್ನು ಆತ ಆಮೂಲಾಗ್ರವಾಗಿ ವಿವರಿಸಿದ್ದಾನೆ. ಇದು ಎರಡು ಮೈನಸ್‌ಗಳು ಸೇರಿ ಒಂದು ಪ್ಲಸ್ ಆದ ಕಥೆ. ಆಧುನಿಕ ರಾಷ್ಟ್ರ ಹೀಗೆ ರೂಪುಗೊಳ್ಳುವಾಗ ಅದರ ಪೂರ್ತಿ ಜಾಗವನ್ನು ಕುಲೀನ ವರ್ಗದವರೇ ಆಕ್ರಮಿಸಿಕೊಂಡಿದ್ದರೂ ಚೂರುಪಾರು ಸಂದಿಗೊಂದಿಗಳಲ್ಲಿ ದೀನ-ದಲಿತ-ನಿರ್ಭಾಗ್ಯರಿಗೂ ಸಣ್ಣಪುಟ್ಟ ಅವಕಾಶ ಇತ್ತು. (ಸಾವರ್ಕರ್ ಅವರ 'ಹಿಂದುತ್ವ' ಪುಸ್ತಕವನ್ನು ನಾವು ಹೀಗೆ ಓದಿದರೆ ಅದು ಸ್ವಲ್ಪ ಬೇರೆ ಅರ್ಥ ಕೊಡಬಹುದೋ ಏನೋ..?). ಅಂದರೆ ಸಮಾಜದ ಹತ್ತೂ ಸಮಸ್ತರ ಪಾಲುದಾರಿಕೆಯಿಲ್ಲದೆ ರಾಷ್ಟ್ರೀಯತೆಯ ಪ್ರಸರಣ ಅಸಾಧ್ಯ.

## ಹಿಂದೂ ಗುರುತಿನ ಉದಯ-ಮುಸ್ಲಿಮರ ಪ್ರತ್ಯೇಕೀಕರಣ

ಭಾರತದ ಇತಿಹಾಸವನ್ನು ಕಟ್ಟುವುದಕ್ಕೆ ಆ ಕಾಲದ ಇತಿಹಾಸಕಾರರು ಸಂಗ್ರಹಿಸಿದ ಮಾಹಿತಿಗಳನ್ನು ಅನುಲಕ್ಷಿಸಿ ಆ ಕಾಲದಲ್ಲಿ ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ಕರ್ಜನ್ ಇವೆಲ್ಲವೂ ಸಾಮ್ರಾಜ್ಯ ನಿರ್ಮಾಣದ ಅಗತ್ಯ ಪರಿಕರ ಸಾಮಗ್ರಿಗಳು ಎಂದು ಕರೆಯುತ್ತಾನೆ ಎನ್ನುವುದನ್ನು ನಾವಿಲ್ಲಿ ನೆನಪಿಗೆ ತಂದುಕೊಳ್ಳಬೇಕು.

ಬ್ರಿಟಿಷ್ ಇತಿಹಾಸಕಾರರು ಆಯ್ದ ಈ ಸಾಮಗ್ರಿಗಳ ಮೂಲಕ ಭಾರತೀಯ ಇತಿಹಾಸದ 'ನಿರ್ಮಾಣ' ಆಯಿತು. ಆದರೆ ಈ ಭಾರತಿಯ ಇತಿಹಾಸ ನಿರ್ಮಾಣ ಅ-ಪೊಲಿಟಿಕಲ್ ಆಗಿ ನಡೆಯಲಿಲ್ಲ. ಅದು ಭಾರತೀಯ ಜೀವನಕ್ರಮದಲ್ಲಿ ಸಹಜಭಾಗವಾಗಿದ್ದ ಮುಸ್ಲಿಮರನ್ನು ಉದ್ದೇಶಪೂರ್ವಕವಾಗಿಯೇ ಹೊರಗಿಟ್ಟಿತು. ಅದರಲ್ಲಿ ಬಹಳ ಪ್ರಮುಖವಾದುದು. ಚರಿತ್ರೆಯ ಅವಧೀಕರಣ. ೧೮೧೭-೧೮೨೬ರಲ್ಲಿ ಜೇಮ್ಸ್ ಮಿಲ್ ತನ್ನ *'ಬ್ರಿಟಿಷ್ ಭಾರತದ ಚರಿತ್ರೆ'* ಎಂಬ ಕೃತಿಯಲ್ಲಿ ಈ ದೇಶದ ಚರಿತ್ರೆಯನ್ನು ಹಿಂದೂ ನಾಗರಿಕತೆ(ಸ್ವರ್ಣಯುಗ) ಮುಸಲ್ಮಾನರ ನಾಗರಿಕತೆ(ಅಂಧಕಾರದ ಯುಗ) ಮತ್ತು ಬ್ರಿಟಿಷರ ಅವಧಿ(ಆಧುನಿಕ ಯುಗ) ಎಂದು ಗುರುತಿಸಿದ್ದಾನೆ. ಆ ಮೂಲಕ ಅವನಾಗಲೇ ಪಾಕಿಸ್ತಾನವನ್ನು ಮತ್ತು ಹಿಂದೂಸ್ತಾನವನ್ನು ಸೃಷ್ಟಿಸಿದ್ದ. ಆಮೇಲೆ ನಡೆದ ದೇಶವಿಭಜನೆ ಅನ್ನೋದು ಜೇಮ್ಸ್ ಮಿಲ್ ರೂಪಿಸಿದ ತಾತ್ತ್ವಿಕತೆಯ ವಾಸ್ತವಿಕ ಅಭಿನಯವಷ್ಟೇ. ಅಂದರೆ ಭಾರತೀಯ ಇತಿಹಾಸವನ್ನು'ಸಾಹತುಶಾಹಿಯು ವಿಂಗಡಿಸಿ ನಿರೂಪಿಸಿದ ಈ ಕ್ರಮದಲ್ಲಿ ದೇಶ ವಿಭಜನೆಗೆ ಕಾರಣವಾಗಬಹುದಾದ ಧಾರ್ಮಿಕ ರಾಷ್ಟ್ರೀಯತೆಗಳ ಬೀಜ ಬಿತ್ತನೆ ಮಾಡಲಾಗಿತ್ತು.

ಇತಿಹಾಸ ರಚನೆಯ ಜೊತೆಜೊತೆಗೇ ಬ್ರಿಟಿಷರು ತಮ್ಮ ಒಡೆದು ಆಳುವ ರಾಜಕಾರಣದ ಯಶಸ್ವೀ ಕಾರ್ಯಾಚರಣೆಗೆ 'ಸರ್ವೇ' ಎಂಬ ಬ್ರಹ್ಮಾಸ್ತ್ರವನ್ನು ಮತ್ತೆ ಮತ್ತೆ ಬಳಸಿದರು. ಭಾರತೀಯ ಉಪಖಂಡದ ಭೂವಲಯವನ್ನೂ, ನದಿ-ನದ-ಸಾಗರಗಳನ್ನೂ, ಕಾಡು-ಮೇಡುಗಳನ್ನೂ, ಮರ-ಗಿಡಗಳನ್ನೂ, ಪಶು-ಪಕ್ಷಿಗಳನ್ನು ಸರ್ವೇ ಮಾಡುತ್ತ ಬಂದ ಬ್ರಿಟಿಷರು ೧೮೭೨ರಲ್ಲಿ ಮೊದಲ ಜನಗಣತಿಯನ್ನೂ ನಡೆಸುತ್ತಾರೆ. ಈ ಸರ್ವೇಯ ಪರಿಣಾಮವಾಗಿಯೇ ಹಿಂದೂ ಎಂಬ ಧರ್ಮಾವಲಂಬೀ ಸಮುದಾಯವೊಂದು ರೂಪುಗೊಂಡಿತು. ಈ ಸರ್ವೇ ಹಿಂದೂಗಳನ್ನು ಬಹುಸಂಖ್ಯಾತ ಸಮುದಾಯವೆಂದೂ ಮತ್ತು ಮುಸಲ್ಮಾನರು ಹಾಗೂ ಇನ್ನಿತರ ಮತೀಯರನ್ನು ಅಲ್ಪಸಂಖ್ಯಾತ ಸಮುದಾಯರಂಐಜಂದೂ ವರ್ಗೀಕರಿಸಿತು. ಹೀಗೆ ಚರಿತ್ರೆಯ ಅವಧೀಕರಣಕ್ಕೆ ಸಂಖ್ಯಾಶಾಸ್ತ್ರದ ಮೂಲಕ ದತ್ತಾಂಶಗಳ ಬೆನ್ನುಮೂಳೆಯನ್ನು ಒದಗಿಸಲಾಯಿತು. ಇದರಿಂದ ಬ್ರಿಟಿಷರು ಕಟ್ಟಿದ ಭಾರತದ ಇತಿಹಾಸಕ್ಕೆ ಸರ್ವಸಮ್ಮತಿಯೂ, ಅಧಿಕೃತತೆಯೂ ಪ್ರಾಪ್ತವಾಯಿತು.

## ಹಿಂದೂ-ಹಿಂದೂ ಜನಾಂಗ-ಹಿಂದುತ್ವ-ಹಿಂದೂ ರಾಷ್ಟ್ರ

ಈ ಎಲ್ಲ ಬೆಳವಣಿಗೆಗಳ ನಂತರದ ಭಾರತದ ರಾಜಕೀಯ ಚರಿತ್ರೆ; ಬ್ರಿಟಿಷ್ ಆಳ್ವಿಕೆಯ ವಿರುದ್ಧದ ಹೋರಾಟವನ್ನು ಮತ್ತು ಕೆಲ ನಿರ್ದಿಷ್ಟ ಸಾಂಸ್ಕೃತಿಕ ಬದಲಾವಣೆಗಳಿಗಾಗಿ ನಡೆದ ಹೋರಾಟವನ್ನೂ ಒಳಗೊಂಡಿದೆ. ಆದರೆ ಅದು ಅಷ್ಟೇ ಅಲ್ಲ. ಈ ಕಾಲಘಟ್ಟದಲ್ಲಿಯೇ ಹಿಂದೂ ಜನಾಂಗ, ಹಿಂದೂ ರಾಷ್ಟ್ರ, ಹಿಂದೂ ಸಂಸ್ಕೃತಿ, ಹಿಂದುತ್ವ ಎಂಬ ಪರಿಕಲ್ಪನೆಗಳು ಚಾಲ್ತಿಗೆ ಬಂದು ಪ್ರವರ್ಧಮಾನಗೊಂಡವು.

ಹಿಂದೂತನ 'ಹಿಂದುತ್ವ'ವಾಗಿ ರೂಪುಗೊಳ್ಳುವ ಮೂಲಬೇರುಗಳನ್ನು ಗುರುತಿಸಿದ ನಂತರ ಹಿಂದೂತನದ ವಾಗ್ರೂಪಗಳನ್ನು ನಾನು ೧೯ನೆಯ ಶತಮಾನದಲ್ಲಿ ಬಾಲಗಂಗಾಧರ ತಿಲಕರ ಮಾತು-ಕತೆಗಳಲ್ಲಿ ಗುರುತಿಸಬಯಸುತ್ತೇನೆ. ಭಾರತೀಯ ಇತಿಹಾಸದ ಕುರಿತು ತಿಲಕರು ಅರಿವು ಪಡೆದುಕೊಂಡದ್ದು ವಸಾಹತುವಾದೀ ಚರಿತ್ರೆಕಾರರ ಓದಿನ ಮೂಲಕವೇ. ತಿಲಕರು ವೈಭವೋಪೇತ ಪ್ರಾಚೀನ ಭಾರತದ ಗತಕಾಲವನ್ನು ತಮ್ಮ ಬರವಣಿಗೆಗಳ ಮೂಲಕ ಮರುನಿರೂಪಿಸಿದರು. ಒಂದು ವಿಧದಲ್ಲಿ ಇದು ವಸಾಹತು ಆಳ್ವಿಕೆಯ ವಿರುದ್ಧ ಹೋರಾಡಲು ಒಂದು ತಂತ್ರವೂ ಆಗಿತ್ತು. ವೈಭವಯುತ ಗತವನ್ನು ಪುರಾಣ, ಐತಿಹ್ಯ, ಐತಿಹಾಸಿಕ ಸಂಗತಿಗಳ ಮೂಲಕ ತಿಲಕರು ರೂಪಿಸಿದ ಸಂಕಥನ ವಸಾಹತೀಕೃತ ಹಿಂದೂವಿಗೆ ಒಂದು ಸುವರ್ಣದ ಚೌಕಟ್ಟನ್ನು ಕೊಡುವುದಕ್ಕೆ ಶಕ್ತವಾಯಿತು.

## ಹಿಂದೂ ಸುಧಾರಣಾವಾದ ಮತ್ತು ಶುದ್ಧೀಕರಣ

ಇದರ ಜೊತೆಗೆ ಹಿಂದೂತನವನ್ನು ಪರಿಷ್ಕರಿಸುವ ಇನ್ನೊಂದು ಮಜಲಲ್ಲಿ ಕಂಡುಬರುವವರು ರಾಜಾರಾಮ ಮೋಹನ್ ರಾಯ್ ಮೊದಲಾದವರು. ೧೯ನೇ ಶತಮಾನದ ಪ್ರಾರಂಭಿಕ ದಶಕಗಳಲ್ಲಿ ಕಾಣಿಸಿಕೊಂಡ ಈ ಸುಧಾರಣಾವಾದಿಗಳು ಹಿಂದೂ ಎಂಬ ಅನೇಕ ಸಂಪ್ರದಾಯಗಳ ಒಕ್ಕೂಟದ ಕೆಲವು ಬೇರುಗಳಿಗೆ ತಗುಲಿರುವ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಟ ನಡೆಸಿದರು. ಇದು ಆಧುನಿಕ ಹಿಂದೂತನವನ್ನು ಪರಿಷ್ಕಾರಗೊಳಿಸುತ್ತ ಸ್ವ-ಪ್ರಜ್ಞೆ ಇರುವ ಆಧುನಿಕ ಹಿಂದೂ ಸಶರೀರನಾಗಿ ಪ್ರತ್ಯಕ್ಷಗೊಳ್ಳುವುದಕ್ಕೆ ತಕ್ಕುದಾದ ಭೂಮಿಕೆಯನ್ನು ಹದಗೊಳಿಸಿತು. ಇದರ ಜೊತೆಗೆ ಸ್ವಾಮಿ ದಯಾನಂದ ಸರಸ್ವತಿಯವರು ಆರ್ಯ ಸಮಾಜದ ಮೂಲಕ ಹಿಂದೂ ಧರ್ಮದ ಸುಧಾರಣೆ ಹಾಗೂ ಅನ್ಯ ಧರ್ಮಗಳ ಕಾರಣದಿಂದ ಹಿಂದೂ ಧರ್ಮಕ್ಕಾಗಬಹುದಾದ ಹಾನಿಗಳಿಗೆ ಪುಣ್ಯಾಹ-ಪುನರುತ್ಥಾನದಂತಹ ಸಂಸ್ಕಾರಗಳ ಮೂಲಕ ಸಂರಕ್ಷಣೆಯ ಭದ್ರ ತಡೆಯೊಡ್ಡಬೇಕೆಂದು ಕರೆ ನೀಡಿದರು. ಇವತ್ತಿನ ಘರ್‌ವಾಪ್ಸೀ ಕಾರ್ಯಕ್ರಮದ ಮೂಲನೆಲೆಗಳು ಇಲ್ಲಿವೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು.

## ವಂಗ ಮಾತೆಯ ಸ್ಫೂರ್ತಿಯಲ್ಲಿ ಭಾರತಮಾತೆಯ ಉದಯ

ಹಿಂದೂತನದ ರೂಪೀಕರಣದ ಮೂರನೇ ಹಂತವನ್ನು ೧೯ನೇ ಶತಮಾನದ ಕೊನೆಗೆ ಅಂದರೆ ೧೮೮೨ರಲ್ಲಿ ಬಂಕಿಮ್ ಚಂದ್ರ ಚಟರ್ಜಿಯವರ *'ಆನಂದಮಠ'* ಕಾದಂಬರಿಯಲ್ಲಿ ಕಾಣಬಹುದು. ಪ್ರತ್ಯೇಕತಾ ರಾಷ್ಟ್ರೀಯತೆಯನ್ನು ಬಂಕಿಮ್ ಅವರು ಬಲವಾಗಿ ಪ್ರತಿಪಾದಿಸಿ ಹಿಂದೂ ರಾಷ್ಟ್ರೀಯತೆಯ ಪ್ರಣಾಳಿಕೆಗೆ ತಮ್ಮ ರಾಷ್ಟ್ರಗೀತೆಯನ್ನು ಬರೆದು ಕೊಟ್ಟರು. ಇದರ ನಂತರದ ಹಂತದಲ್ಲಿ, ಅಂದರೆ ೧೯೦೫ರಲ್ಲಿ ಬಂಗಾಳದ ವಿಭಜನೆ ಆಗುತ್ತದೆ. ಇದನ್ನು ತೀವ್ರವಾಗಿ ಪರಿಭಾವಿಸಿದ ಕಲಾವಿದ ಅವನೀಂದ್ರನಾಥ ಟಾಗೋರ್ ಅವರು 'ಬಂಗ ಮಾತೆ'ಯ ವರ್ಣಚಿತ್ರವೊಂದನ್ನು ರಚಿಸುತ್ತಾರೆ. ಈ ಚಿತ್ರ ಜನಪ್ರಿಯವಾದ ಮೇಲೆ, ಅಂದರೆ ನಮ್ಮ ಈಗಿನ ಕಾರುಗಳಲ್ಲಿ, ಆಟೋಗಳಲ್ಲಿ ಬಜರಂಗದಳದ ಉಗ್ರರೂಪೀ ಹನೂಮಂತನ ಚಿತ್ರ ಜನಪ್ರಿಯವಾಯಿತಲ್ಲ; ಹಾಗೆಯೇ ಆ ಚಿತ್ರವನ್ನು ಇದು ಕೇವಲ *ಬಂಗ ಮಾತೆ* ಅಲ್ಲ, ಇದುವೇ ನಿಜವಾದ *ಭಾರತಮಾತೆ* ಎಂದು ಮರುನಾಮಕರಣ ಮಾಡಲಾಯಿತು. ರಾಷ್ಟ್ರವನ್ನು ಧರ್ಮರೂಪೀ ಮಾತಾ ಎಂದು ಸಮೀಕರಿಸಲು ಮಾಡಿದ ಮೊದಲ ಪ್ರಯತ್ನವಿದು. ಅವನೀಂದ್ರರ ಬಂಗಮಾತೆ ಕರುಣಾಮೂರ್ತಿಯಾಗಿದ್ದರೆ, ಭಾರತಮಾತೆಯ ದಯಾಮಯಿ ಚಿತ್ರ ಉಗ್ರರೂಪ ತಾಳಿತು. ಸಿಂಹವಾಹಿನಿಯಾಗಿ ಬದಲಾದ ಈ ಭಾರತಮಾತೆಯನ್ನು ಹಿಂದುತ್ವವನ್ನು ಪ್ರತಿಪಾದಿಸುವ ಸಂಘಟನೆಗಳು ಇಂದು ತಮ್ಮ ಮುಖಪುಟವನ್ನಾಗಿಸಿವೆ.

## ರಾಜಕೀಯ ರೂಪ ಪಡೆದ ಹಿಂದುತ್ವ

ಈ ಎಲ್ಲ ಬೆಳವಣಿಗೆಗಳ ತಾರ್ಕಿಕ ಅಂತ್ಯದಲ್ಲಿ ವಿ.ಡಿ. ಸಾವರ್ಕರ್, ೧೯೨೩ರಲ್ಲಿ 'ಹಿಂದುತ್ವ' ಎಂಬ ಪುಸ್ತಕವನ್ನು ಬರೆಯುತ್ತಾರೆ. ಅದುವರೆಗೆ ಅಸ್ಪಷ್ಟವಾಗಿದ್ದ ಹಿಂದೂ, ಹಿಂದೂತನ ಎಂಬಿತ್ಯಾದಿ ವಿದ್ಯಮಾನಗಳು ಚರಿತ್ರೆಯ ನಿರ್ದಿಷ್ಟ ಬಿಂದುವಿನಲ್ಲಿ ಇದನ್ನು ಆರಂಭಿಸಿದವರಿಗಿದ್ದ ಅನ್ಯಾನ್ಯ ಉದ್ದೇಶಗಳನ್ನು ಹಿಂದಕ್ಕೆ ತಳ್ಳಿ ತನಗಿರುವ ಆಧ್ಯಾತ್ಮಿಕ ಪ್ರಭಾವಳಿಯನ್ನೂ ಕಿತ್ತು ಹಿಂದುತ್ವ ಎಂಬ ಒಂದು ರಾಜಕೀಯ ಇಲ್ಲಿ ಬಹಳ ಸ್ಪಷ್ಟವಾಗಿ ಮೂಡಿಬಂತು. ಧರ್ಮ-ರಾಷ್ಟ್ರ ಇತ್ಯಾದಿ ವಿದ್ಯಮಾನಗಳು ಸ್ಪಷ್ಟಗೊಂಡಷ್ಟೂ ಅಪಾಯಕಾರಿಯಾಗುತ್ತವೆ. ಅಸ್ಪಷ್ಟತೆಯಲ್ಲೇ ಲೋಕಹಿತವಿದೆ ಎಂಬುದು ನಮಗನ್ನಿಸಿದ್ದೇ ಆಧುನಿಕವಾದ ಈ ಹಿಂದುತ್ವ ಎಂಬ ವಿದ್ಯಮಾನದಿಂದ.

ಸಾವರ್ಕರ್ ತನ್ನ ಪುಸ್ತಕದ ೧೮ನೆಯ ಅಧ್ಯಾಯದಲ್ಲಿ ಹೀಗೆ ಹೇಳುತ್ತಾರೆ:

> **" ಹಿಂದು ಹಿಂದಿ ಪದಗಳಲ್ಲಿ ವ್ಯತ್ಯಾಸವಿದೆ. ಏಕೆಂದರೆ ಹಿಂದೂ ಪದಕ್ಕೆ ಸಮೀಪವಾದ ಹಿಂದಿ ಎಂದರೆ ಕೇವಲ ಭರತವಾಸಿ ಎಂದಾಗಿಬಿಡುತ್ತದೆ. ಈ ಹಿಂದಿ ಪದವನ್ನು ಅತಿವ್ಯಾಪ್ತಿಯಲ್ಲಿ ಬಳಸಿದರೆ, ಮುಸಲ್ಮಾನನೊಬ್ಬ ಭಾರತದಲ್ಲಿ ವಾಸಿಸುತ್ತಿದ್ದಾನೆ ಎಂಬ ಒಂದೇ ಕಾರಣದಿಂದ ಹಿಂದೂ ಎನಿಸಿಕೊಳ್ಳಬಹುದು. ಭವಿಷ್ಯದಲ್ಲಿ ಹಿಂದೂ ಎಂದರೆ ಹಿಂದೂಸ್ಥಾನದ ನಾಗರಿಕ ಅಷ್ಟೇ ಎಂಬ ಅರ್ಥವೇ ಬಂದುಬಿಡಬಹುದು. ಎಲ್ಲ ಬಗೆಯ ಸಾಂಸ್ಕೃತಿಕ, ಧಾರ್ಮಿಕ ದ್ವಂದ್ವಗಳ ಶಕ್ತಿ ಉಡುಗಿದಾಗ, ಉಗ್ರ ಅಹಂಕಾರವಾದಗಳು ಅಡಗಿದಾಗ, ಧರ್ಮವು ಯಾವುದೇ 'ಇಸಮ್' ಎಂದು ಕರೆಸಿಕೊಳ್ಳುವ ಸ್ಥಿತಿ ಅಳಿಸಿಹೋದಾಗ, ಧರ್ಮವು ಇಡೀ ಮಾನವ ಕುಲವು ಘನತೆಯಿಂದ ದೃಢವಾಗಿ**

ಆಶ್ರಯಿಸಬಹುದಾದ ಶಾಶ್ವತ ತತ್ತ್ವಗಳ ಕೇವಲ ಬುನಾದಿ ಮಾತ್ರ ಆದಾಗ ಇದನ್ನು ಒಪ್ಪಬಹುದು. ಆದರೆ ದೂರದಿಗಂತದಲ್ಲಿ ಇದರ ಸಾಧ್ಯತೆ ಕಾಣುತ್ತಿಲ್ಲ. ಆದ್ದರಿಂದ ಉಳಿದ ಎಲ್ಲ ಇಸಂಗಳು ತಮ್ಮ ವಿಶಿಷ್ಟ ತತ್ತ್ವವಾದ, ನಂಬಿಕೆಗಳನ್ನು ಕೈಬಿಡದೇ ಇರುವ ತನಕ, ರಾಷ್ಟ್ರೀಯ ಅಥವಾ ಸಾಂಸ್ಕೃತಿಕ ಐಕ್ಯತೆಯ ತಂತುಗಳನ್ನು ಕೈಬಿಡುವ ಪ್ರಶ್ನೆ ಇಲ್ಲ. ಈಗಿರುವಂತೆ, ರಾಷ್ಟ್ರೀಯ–ಸಾಂಸ್ಕೃತಿಕ ಐಕ್ಯತೆ, ಒಂದು ಸಾಮಾನ್ಯ ಹೆಸರು, ಸಾಮಾನ್ಯ ಧ್ವಜ,–ಇವು ಗಾಢ ಬೆಸುಗೆ, ಶಕ್ತಿಯ ದೊಡ್ಡ ಆಕರಗಳಾಗಿವೆ. ಒಬ್ಬ ಅಮೇರಿಕನ್, ಭಾರತದ ಪ್ರಜೆಯಾಗಬಹುದು. ಅವನನ್ನು ನಾವು ಭಾರತೀಯನೆಂದು, ಹಿಂದಿ ಎಂದು, ನಮ್ಮ ದೇಶದವನೆಂದು, ನಮ್ಮ ಸಹ ಪ್ರಜೆ ಎಂದುಕೊಳ್ಳಬಹುದು. ಆದರೆ ಎಲ್ಲಿಯ ತನಕ ಅವನು ನಮ್ಮ ದೇಶವನ್ನು ಮಾತ್ರ ಸ್ವೀಕರಿಸಿ ನಮ್ಮ ಸಂಸ್ಕೃತಿ, ನಮ್ಮ ಇತಿಹಾಸವನ್ನು ಸ್ವೀಕರಿಸಿಲ್ಲವೋ, ನಮ್ಮ ರಕ್ತವನ್ನು ಹಂಚಿಕೊಂಡಿಲ್ಲವೋ, ನಮ್ಮ ಈ ಭೂಮಿಯನ್ನು ತನ್ನ ಪೂಜಾವಸ್ತು ಎಂದು ಭಾವಿಸದೇ ಕೇವಲ ಪ್ರೇಮಿಸುತ್ತಾನೋ, ಅಲ್ಲಿಯವರೆಗೆ ಅವನನ್ನು ಹಿಂದೂ ತೆಕ್ಕೆಗೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಹಿಂದುತ್ವದ ಮೊದಲ ನಿಯಮ ಅವನಾಗಲೀ, ಅವನ ಪೂರ್ವಿಕರಾಗಲೀ ಹಿಂದೂಸ್ಥಾನದ ನಾಗರಿಕರಾಗಬೇಕು ಎಂಬುದಾದರೂ ಅದೊಂದೇ ಅರ್ಹತೆ ಸಾಲುವುದಿಲ್ಲ.......

ಈ ದಿಸೆಯಿಂದಾಗಿ, ನಮ್ಮ ಮಹಮ್ಮದೀಯ ಅಥವಾ ಕ್ರೈಸ್ತ ಪಂಥೀಯ ದೇಶಬಂಧುಗಳು ಮೂಲದಲ್ಲಿ ಹಿಂದೂ ಧರ್ಮೀಯರಾಗಿದ್ದು, ಅನಂತರ ಹಿಂದೂವಲ್ಲದ ಧರ್ಮಕ್ಕೆ ಬಲವಂತವಾಗಿ ಮತಾಂತರಗೊಂಡವರು. ಇದರ ಪರಿಣಾಮವಾಗಿ, ಹಿಂದೂಗಳೊಡನೆ, ಒಂದು ಸಮಾನ ಪಿತೃಭೂಮಿಯನ್ನು ಹಾಗೂ ಸಾಮಾನ್ಯ ಸಂಸ್ಕೃತಿಯ ಬಹುಮುಖ್ಯ ಭಾಗಗಳಾದ ಭಾಷೆ, ಕಾನೂನು, ಸಂಪ್ರದಾಯ, ಜನಪದ ಸಂಸ್ಕೃತಿ ಮತ್ತು ಇತಿಹಾಸ ಇತ್ಯಾದಿ–ಸ್ವಾಭಾವಿಕವಾಗಿ ಹಂಚಿಕೊಂಡಿದ್ದರೂ ಅವರನ್ನು ಹಿಂದೂಗಳೆಂದು ಗುರುತಿಸಲಾಗುವುದಿಲ್ಲ. ಹಿಂದೂ ಒಬ್ಬನಿಗೆ ಇದು ಪಿತೃಭೂಮಿಯಾಗಿರುವಂತೆ, ಹಿಂದೂಸ್ಥಾನ ಅವರಿಗೂ ಪಿತೃಭೂಮಿ, ಹೀಗಿದ್ದೂ ಅವರ ಪಾಲಿಗೆ ಪುಣ್ಯಭೂಮಿ ಅಲ್ಲ. ಅವರ ಪುಣ್ಯಭೂಮಿ ದೂರದಲ್ಲೆಲ್ಲೋ ಅರೆಬಿಯಾ ಅಥವಾ ಪಾಲೆಸ್ಟೈನ್ ದೇಶಗಳಲ್ಲಿ ಇದೆ. ಅವರ ಪುರಾಣ ಮತ್ತು ಅವಧೂತರು, ವಿಚಾರಶೀಲತೆ ಮತ್ತು ಆದರ್ಶ ನಾಯಕರು ಯಾರೂ ಈ ನೆಲದ ಮಣ್ಣಿನ ಮಕ್ಕಳಲ್ಲ. ಪರಿಣಾಮವಾಗಿ, ಅವರ ಹೆಸರು ಮತ್ತು ಅವರ ಹೊರನೋಟ ಎಲ್ಲವೂ ವಿದೇಶೀ ಮೂಲಕ ಛಾಯೆಯನ್ನು ಹೊದ್ದಂತೆ ಕಾಣಿಸುತ್ತದೆ. ಜನಾಂಗ, ರಕ್ತ, ಸಂಸ್ಕೃತಿ, ರಾಷ್ಟ್ರೀಯತೆ ಇತ್ಯಾದಿ ಬಹುತೇಕ ಹಿಂದುತ್ವದ ಎಲ್ಲ ಅಂತಃಸ್ಸತ್ವಗಳನ್ನು ನೀವು ಹೊಂದಿದ್ದರೂ, ಯಾವುದೋ ಪಾಶವೀ ಕೈಗಳು ನಮ್ಮ ಪೂರ್ವಿಕರ ಮಡಿಲಿನಿಂದ ನಿಮ್ಮನ್ನು ಕಿತ್ತುಕೊಂಡು ಹೊತ್ತೊಯ್ದವು. ನೀವಿಂದು ಹೃದಯಾಂತರಾಳದಿಂದ ನಮ್ಮೆಲ್ಲರ ಒಬ್ಬಳೇ ಜನನಿಗೆ ನಿಮ್ಮನ್ನು ಒಪ್ಪಿಸಿಕೊಂಡು, ಅವಳನ್ನು ನಿಮ್ಮ ಪಿತೃಭೂಮಿಯೆಂದಷ್ಟೇ ಗುರುತಿಸುವುದಲ್ಲದೆ, ಪುಣ್ಯಭೂಮಿಯೆಂದು ಒಪ್ಪಿ ಬರುವುದಾದರೆ, ನಿಮ್ಮನ್ನು ಹಿಂದೂ ಧರ್ಮ ತನ್ನ ಮಡಿಲಿಗೆ ತುಂಬಿಸಿಕೊಂಡು ಪೊರೆಯುತ್ತದೆ"

## ಸಾವರ್ಕರ್ ತಾತ್ವಿಕತೆಗೆ ಗೋಲ್ವಾಲ್ಕರ್ ಸಂಘಟನೆ

ಸಾವರ್ಕರ್ ವಿಚಾರಗಳನ್ನೇ ಆರ್‌ಎಸ್‌ಎಸ್ ತನ್ನ ಸೈದ್ಧಾಂತಿಕ ತಳಹದಿಯನ್ನಾಗಿ ಮಾಡಿಕೊಂಡಿತು. ಸಾವರ್ಕರ್ ಅವರ ಹಿಂದೂ ರಾಷ್ಟ್ರದ ಪರಿಕಲ್ಪನೆಯನ್ನು ಅನಾಮತ್ತಾಗಿ ಎತ್ತಿಕೊಂಡು ಅದಕ್ಕೆ ಒಂದು ಸಂಘಟನೆಯ ಸ್ವರೂಪ ಕೊಟ್ಟದ್ದು ಅರ್‌ಎಸ್‌ಎಸ್‌ನ ಎರಡನೇ ಸರಸಂಘಚಾಲಕರಾದ ಎಮ್. ಎಸ್. ಗೋಲ್ವಾಲ್ಕರ್. ಅವರ ಪ್ರಕಾರ ರಾಷ್ಟ್ರದ ಸೀಮೆಯನ್ನು ನಿರ್ಧರಿಸುವುದು ಸಂಸ್ಕೃತಿಯೇ ಹೊರತು ಭೌಗೋಳಿಕ ಗಡಿಗಳಲ್ಲ. ಒಂದು ಸಮುದಾಯದ ಬದುಕು, ಧಾರ್ಮಿಕ ನಂಬಿಕೆ ಮತ್ತು ಅಚರಣೆಗಳನ್ನು ಆಧರಿಸಿರುತ್ತದೆ. ನೂರಾರು ವರ್ಷಗಳ ಇಂತಹ ಬದುಕು ಒಂದು ವಿಶಿಷ್ಟವಾದ ಸಂಸ್ಕೃತಿಯನ್ನೂ ರೂಪಿಸುತ್ತದೆ. ಅಖಂಡ ಭಾರತದ ಸಾವಿರಾರು ವರ್ಷಗಳ 'ಹಿಂದೂ ಜೀವನ ಕ್ರಮ; ಒಂದು ವಿಶಿಷ್ಟವಾದ ಹಿಂದು ಸಂಸ್ಕೃತಿಯನ್ನು ರೂಪಿಸಿದೆ. ಇದನ್ನು ಅಡಿಪಾಯವಾಗಿಟ್ಟುಕೊಂಡು ಕಟ್ಟುವ ರಾಷ್ಟ್ರೀಯತೆಯೇ, 'ಸಾಂಸ್ಕೃತಿಕ ರಾಷ್ಟ್ರೀಯತೆ'. ಈ ರಾಷ್ಟ್ರೀಯತೆ, ರಾಷ್ಟ್ರದ ಕುರಿತು ಬೇರೆಲ್ಲ ಪರಿಕಲ್ಪನೆಗಳಿಗಿಂತಲೂ ಶ್ರೇಷ್ಠವಾದುದು. ಒಂದು ರಾಷ್ಟ್ರದ ಉನ್ನತಿ ಸಾಂಸ್ಕೃತಿಕ ರಾಷ್ಟ್ರೀಯತೆಯಿಂದ ಮಾತ್ರ ಸಾಧಿಸಲು ಶಕ್ಯವಾಗುವಂತಹುದು. ಇದುವೇ ಭಾರತಕ್ಕೆ ಸೂಕ್ತವಾಗುವಂತಹುದು ಮತ್ತು ಇಲ್ಲಿ ಪ್ರಾಶಸ್ತ್ಯ ಸಿಗಬೇಕಾದದ್ದು ಹಿಂದೂ ಸಂಸ್ಕೃತಿ ಮತ್ತು ಇದನ್ನು ಆಧರಿಸಿದ ರಾಷ್ಟ್ರೀಯತೆಗೆ. ಹಿಂದೂಗಳು ಹುಟ್ಟಿನಿಂದಲೇ ಇದರ ವಾರೀಸುದಾರರು. ಮಿಕ್ಕುಳಿದವರಿಗೆ ಈ ಹಕ್ಕು ಇಲ್ಲ. ಇದು ಗೋಲ್ವಾಲ್ಕರ್ ಅವರ ಸ್ಪಷ್ಟ ನಿಲುವು.

ಹಿಂದುತ್ವಕ್ಕೂ ಹಿಂದೂಧರ್ಮಕ್ಕೂ ಯಾವುದೇ ಬಗೆಯ ಸಂಬಂಧವೂ ಇಲ್ಲ, ಸಾಮ್ಯತೆಯೂ ಇಲ್ಲ. ಹಿಂದುತ್ವವೆಂಬುದು ರಾಜಕೀಯ ಲಾಭಕ್ಕಾಗಿ ಬಳಸಿರುವ ಮತ್ತು ಬೆಳೆಸಿರುವ ಒಂದು ತತ್ತ್ವ. ಹಿಂದುತ್ವಕ್ಕೆ ರಾಜಕೀಯ ಕಾರ್ಯಗಳೇ ಪ್ರಧಾನ. ಧರ್ಮ ಮತ್ತು ಸಂಸ್ಕೃತಿಯ ಕಾಳಜಿಗಳು ಅದರ ರಾಜಕೀಯ ಕ್ರಿಯಾಚರಣೆಗೆ ಅತ್ಯವಶ್ಯಕವಾದ ಗುರಾಣಿಗಳಷ್ಟೇ.

## ಕಾಂಗ್ರೆಸ್‌ನಲ್ಲಿ ಕೆರಳಿದ ಸುಪ್ತ ಹಿಂದುತ್ವ

ಹಿಂದುತ್ವವಾದೀ ಸಿದ್ಧಾಂತಗಳನ್ನು ನಂಬಿದವರು, ಒಪ್ಪಿದವರು ಇಂದಿನ ಭಾರತದಲ್ಲಿ ಕೇವಲ ಬಿಜೆಪಿಯಲ್ಲಿ ಮಾತ್ರವಲ್ಲ; ಪ್ರಾಯಃ ಎಡಪಕ್ಷಗಳನ್ನು ಹೊರತುಪಡಿಸಿ ಭಾರತದ ಎಲ್ಲ ಪಕ್ಷಗಳಲ್ಲೂ ಇದ್ದಾರೆ. ಸ್ವಾತಂತ್ರ್ಯಪೂರ್ವದಿಂದಲೂ ಹಿಂದುತ್ವವಾದಿಗಳು ಕಾಂಗ್ರೆಸ್‌ನಲ್ಲಿದ್ದರು. ಅವರಾರೆಂದು ಈಗ ಎಲ್ಲರಿಗೋ ಗೊತ್ತಾಗಿದೆ. ಅವರನ್ನೆಲ್ಲ ಈಗ ಬಿಜೆಪಿ ಮರಣೋತ್ತರವಾಗಿ ಪುರಸ್ಕರಿಸಿ ತನ್ನವರನ್ನಾಗಿ ಮಾಡಿಕೊಂಡು ತನಗಿಲ್ಲದ ರಾಷ್ಟ್ರೀಯ ಇತಿಹಾಸವೊಂದನ್ನು ನಿರ್ಮಿಸಿಕೊಳ್ಳುವ ಹವಣಿಕೆಯಲ್ಲಿದೆ. ಈಗಲೂ ಕಾಂಗ್ರೆಸ್‌ನಲ್ಲಿ ಇಂಥವರು ಇದ್ದಾರೆ. ಅವರ ರಾಜಕಾರಣವನ್ನೀಗ 'ಮೃದುಹಿಂದುತ್ವ' ಎಂದು ಗುರುತಿಸಲಾಗುತ್ತಿದೆಯಷ್ಟೆ

. ಸೆಕ್ಯುಲರ್ ವಿಚಾರಗಳನ್ನು ತನ್ನ ಚಿಂತನೆಯ ಕೇಂದ್ರವನ್ನಾಗಿಸಿದ ಅಂದಿನ ಕಾಂಗ್ರೆಸ್; ಪ್ರಜಾಪ್ರಭುತ್ವ ಎಂದರೆ ಬಹುಸಂಖ್ಯಾತರ ಇಚ್ಛೆಗೆ ಅನುಗುಣವಾದ ಪ್ರಭುತ್ವವಲ್ಲ; ಅದು ಅಲ್ಪಸಂಖ್ಯಾತರು ಮತ್ತು ಭಿನ್ನಮತೀಯರು ತಮ್ಮ ನಂಬಿಕೆಗಳಿಗೆ ಬದ್ಧವಾಗಿದ್ದೂ ಸಮಾನ ಹಕ್ಕು ಮತ್ತು ಅಧಿಕಾರಗಳನ್ನು ಹೊಂದುವುದು ಎಂದು ನೆಹರೂ ಪ್ರತಿಪಾದಿಸುತ್ತಿದ್ದ ಕಾಂಗ್ರೆಸ್ ಆಗಿತ್ತು. ನೆಹರೂ ಇರುವವರೆಗೂ ಕಾಂಗ್ರೆಸ್‌ನಲ್ಲಿ ಹಿಂದುತ್ವವಾದಿಗಳು ಮೇಲುಗೈಯಾಗಿರಲಿಲ್ಲ. ಆದರೆ ಇಂದಿರಾಗಾಂಧಿ ಕಾಂಗ್ರೆಸ್‌ನ ಧರ್ಮವಾಗಿದ್ದ ಸೆಕ್ಯುಲರ್ ನೀತಿಯನ್ನು ತಮ್ಮ ಕಾಲದಲ್ಲಿ ಕೈಬಿಟ್ಟರು. ಹೆಚ್ಚೂ–ಕಡಿಮೆ ಇದೇ ಅವಧಿಯಲ್ಲಿ ಕಾಂಗ್ರೆಸ್ ನಾಯಕ ಕರಣ್ ಸಿಂಗ್ ಅವರು ವಿರಾಟ್ ಹಿಂದೂ ಸಮಾಜ ಎಂಬ ಸಂಘಟನೆಯನ್ನು ಕಟ್ಟಿದರು. ಇದರಲ್ಲಿ ವಿಹಿಂಪದ ವಿಷ್ಣುಹರಿ ದಾಲ್ಮಿಯಾ ಮತ್ತು ಅಶೋಕ ಸಿಂಘಾಲ್ ಮೊದಲಾದವರು ಇದ್ದರು. ರಾಮ ಮಂದಿರದ ಪ್ರಸ್ತಾವ ಆಗಿದ್ದೇ ಕಾಂಗ್ರೆಸ್ ನಾಯಕರ ಉಪಸ್ಥಿತಿಯಲ್ಲಿ ಎಂಬುದಿಲ್ಲಿ ಗಮನಾರ್ಹ. (ಗುಲ್ಜಾರಿ ಲಾಲ್ ನಂದಾ) ಮುಂದಕ್ಕೆ ರಾಜೀವ್ ಗಾಂಧಿಯವರ ಕಾಲದಲ್ಲಿ ಅಯೋಧ್ಯೆಯ ಬಾಬರಿ ಮಸೀದಿಯ ಬಾಗಿಲುಗಳನ್ನು ತೆಗೆಸಲಾಯಿತು. ೧೯೮೯ರಲ್ಲಿ ರಾಮಮಂದಿರದ ಶಿಲಾನ್ಯಾಸಕ್ಕೂ ರಾಜೀವ್ ಅನುಮತಿ ನೀಡಿದರು. ಬಾಬರಿ ಮಸೀದಿ ಕೆಡವಿದಾಗ ಇದ್ದ ಪ್ರಧಾನಿ ಕಾಂಗ್ರೆಸ್‌ನವರೇ ಆಗಿದ್ದರು. ಇದರ ನಂತರದ ಹಿಂದೂ ರಾಷ್ಟ್ರೀಯತೆಯ ಕತೆಯನ್ನು ನಾನು ವಿವರಿಸುವ ಅಗತ್ಯವೇ ಈ ದೇಶದ ಎಡಪಕ್ಷಗಳನ್ನು ಹೊರತುಪಡಿಸಿ ಉಳಿದೆಲ್ಲ ಪಕ್ಷಗಳೂ ಹಿಂದೂ ರಾಷ್ಟ್ರೀಯತೆಯನ್ನು ಪ್ರತಿಪಾದಿಸುವ ಪಕ್ಷದೊಂದಿಗೆ ಕೂಡಿಕೆ ಮಾಡಿಕೊಂಡಿವೆ. ಇದಕ್ಕೆ ಮಾಯಾವತಿಯವರ ಬಿಎಸ್‌ಪಿಯೂ ಹೊರತಾಗಿಲ್ಲ.

## ಹಿಂದೂ ಧರ್ಮ-ಹಿಂದುತ್ವ ಮತ್ತು ಗಾಂಧೀಜಿ

ಎಲ್ಲ ರಾಜಕೀಯ ಪಕ್ಷಗಳೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿದ್ದ ಹಿಂದುತ್ವ; ನೈಜ ಹಿಂದೂ ಧರ್ಮಾನುಯಾಯಿಯಾಗಿದ್ದ ಗಾಂಧೀಜಿಯವರನ್ನು ಮಾತ್ರ ಆಮೂಲಾಗ್ರವಾಗಿ ದ್ವೇಷಿಸುತ್ತಿತ್ತು. ಯಾಕೆಂದರೆ ಇದುವರೆಗೆ ತಾನೇ ಒರಿಜಿನಲ್ ಎಂದು ನಟಿಸಿದ ಮುಖವಾಡ, ನಿಜವಾದ ಒರಿಜಿನಲ್ ಮುಖದ ಜೊತೆ ಮುಖಾಮುಖಿಯಾದಾಗ ಯಾವ ಪ್ರಮಾಣದ ಗಾಬರಿ–ಮೈ ನಡುಕ ಉಂಟಾಗಬಹುದೋ ಅಂತಹುದೇ ಭಯ ಗಾಂಧೀಜಿಯವರನ್ನು ಕಂಡಾಗ ಹಿಂದುತ್ವವಾದೀ ತತ್ತ್ವಕ್ಕೂ ಉಂಟಾಯಿತು. ಹಾಗಾದರೆ ಹಿಂದುತ್ವಕ್ಕೂ ಗಾಂಧೀಜಿಯವರ ಹಿಂದೂ ಧರ್ಮಕ್ಕೂ ಇದ್ದ ವ್ಯತ್ಯಾಸ ಏನು.? ಇದನ್ನು ಪ್ರಸ್ತಾವಿಸಿ ನನ್ನ ಉಪನ್ಯಾಸವನ್ನು ಕೊನೆಗೊಳಿಸುತ್ತೇನೆ. ಈ ಘಟನೆ ನಮ್ಮಲ್ಲಿ ಬಹಳ ಜನರಿಗೆ ಗೊತ್ತಿಲ್ಲ. ಇದನ್ನು ಇತ್ತೀಚೆಗಷ್ಟೇ ಮಂಗಳೂರಿಗೆ ಭೇಟಿ ನೀಡಿದ್ದ ಗಾಂಧಿಯವರ ಮೊಮ್ಮಗ ರಾಜ್ ಮೋಹನ್ ಗಾಂಧಿ ನೆನಪಿಸಿಕೊಂಡಿದ್ದರು. ಆ ಪ್ರಕರಣ ಹೀಗಿದೆ:

ನಿಮಗೆಲ್ಲರಿಗೂ ಜಲಿಯನ್‌ವಾಲಾ ಬಾಗ್ ದುರಂತ ಗೊತ್ತಿದೆ. ಜಲಿಯನ್‌ವಾಲಾಬಾಗ್ ದುರಂತ ಆಗುವುದಕ್ಕಿಂತ ಮೂರು ದಿನ ಮೊದಲು ಅಮೃತಸರದಲ್ಲಿ ರೌಲತ್ ಕಾಯ್ದೆಯ ವಿರುದ್ಧ ಒಂದು ಪ್ರತಿಭಟನೆ ನಡೆಯುತ್ತದೆ. ಈ ಪ್ರತಿಭಟನೆಯ ಸಂದರ್ಭದಲ್ಲಿ ಹಿಂಸಾಚಾರ ಸಂಭವಿಸಿ ಐದು ಮಂದಿ ಬ್ರಿಟಿಷ್

(೧೫ನೇ ಪುಟಕ್ಕೆ

*೫ನೇ ಪುಟದಿಂದ)*

**ನಷ್ಟ ಹೊಂದಿದ ವ್ಯಕ್ತಿ ಈ ಜಗತ್ತಿನಲ್ಲಿ ಯಾರೂ ಇಲ್ಲ. ಅಲ್ಪಸಂಖ್ಯಾತರು ನಿಜವಾಗಿಯೂ ಬಲಹೀನರಾಗಿದ್ದಾಗ ಅವರಿಗೆ ಸೋಲುವುದೇ ಅಹಿಂಸೆಯಲ್ಲಿನ ನನ್ನ ನಂಬಿಕೆಯ ಒಳ ಅರ್ಥ. ವಿರೋಧ ಅವರಲ್ಲಿ ಸಂಶಯ ಹೆಚ್ಚಿಸಿ, ಅವರ ವಿರೋಧವನ್ನು ಬಲಗೊಳಿಸುತ್ತದೆ. ಈ ವಿಷಯದಲ್ಲಿ ಕಾಂಗ್ರೆಸ್ಸಿಗರು ನನ್ನ ಜೊತೆಯಲ್ಲಿಲ್ಲವೆನ್ನುವುದೂ ನನಗೆ ಗೊತ್ತಿದೆ."**

ಧರ್ಮ–ಆಧ್ಯಾತ್ಮಗಳಿಗೆ ಬೆಲೆಕೊಡದ ಇಂಥ ಮತಾಂಧರೇ ಭಾರತದ ಇಬ್ಭಾಗಕ್ಕೆ ನಾಂದಿಹಾಡಿ ಅದನ್ನು ಹಂಚಿಕೊಂಡರು. ನೀಚ ಹಿಂದೂ ಕೋಮುವಾದಿಯೊಬ್ಬ ಗಾಂಧೀಜೀಯನ್ನು ಬಲಿ ತೆಗೆದುಕೊಂಡದ್ದು ಇತಿಹಾಸ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಧರ್ಮ ಸಂವಾದ, ಆಧ್ಯಾತ್ಮಿಕ ಅನುಸಂಧಾನಗಳು – ವಿಶೇಷವಾಗಿ ರಾಜಕೀಯಸ್ಥರಲ್ಲಿ– ತೆರೆಯ ಹಿಂದಕ್ಕೆ ಸರಿಸಲ್ಪಟ್ಟವು. ವಿಜೃಂಭಿಸಿದ್ದೆಲ್ಲಾ ಪಾಶ್ಚಾತ್ಯೀಕರಣ, ಆಧುನೀಕರಣ, ತುರ್ತಾಗಿ ಶ್ರೀಮಂತರಾಗಬೇಕೆಂಬ ಹಠ, ಎಗ್ಗಿಲ್ಲದೆ ಅಪ್ಪಿಕೊಂಡ ಯಂತ್ರನಾಗರೀಕತೆ, ಇವು ನಮ್ಮನ್ನು ನಿಜ ಧರ್ಮ–ಆಧ್ಯಾತ್ಮಗಳಿಂದ ವಿಮುಖವಾಗಿಸಿದವು. ನಡೆದ ಸಂವಾದವೇನಿದ್ದರೂ ಪೂರ್ಣ ಭೌತಿಕ ಪ್ರಗತಿಯ ಬಗ್ಗೆ. ಹೀಗಾಗಿ ಒಣ ವೈಚಾರಿಕತೆ, ವಿಚಾರವಾದಗಳು, ಸೆಕ್ಯುಲರಿಸಂ, ಸಾಂಸ್ಕೃತಿಕ ರಾಷ್ಟ್ರೀಯತೆಗಳು ನಮ್ಮ ಯುವ ಪೀಳಿಗೆಯನ್ನು ಆಕ್ರಮಿಸಿದವು. ನಿಜವಾದ ಧರ್ಮ, ಆಧ್ಯಾತ್ಮಗಳು, ಅವನ್ನು ಪ್ರತಿಪಾದಿಸಿ, ಅನುಸರಿಸಿದ ಗಾಂಧಿ, ಅಬ್ದುಲ್ ಕಲಾಂ ಅಜಾದ್‌ರು ಗೇಲಿಯ ವಸ್ತುಗಳಾದಂತಿದೆ. ಆದರೆ ಯಾವುದೋ ಒಂದು ಮಾನಸಿಕವಾಗಿ, ಬಲಹೀನವಾದ ಸಂದರ್ಭದಲ್ಲಿ ಧರ್ಮ, ದೇವರು, ಸಂಪ್ರದಾಯಗಳು ನಮ್ಮನ್ನು ಕಾಡುತ್ತವೆ. ನಮ್ಮ ಹುಟ್ಟು, ಪೂರ್ವೋತ್ತರಗಳ ಬಗ್ಗೆ ಅನಾಥ ಪ್ರಜ್ಞೆಯೂ ಕಾಡುತ್ತದೆ. ಅದರ ನಿವಾರಣೆಗೆ ಹೋಗುವುದೆಲ್ಲಿಗೆ?.

## ಧರ್ಮ-ಅಧ್ಯಾತ್ಮಗಳ ಕಲ್ಪನೆಯೇ ಇಲ್ಲದ ಹೊಸ ವರ್ಗ

ನಮ್ಮ ಶಿಕ್ಷಣ ವ್ಯವಸ್ಥೆ ಈ ಮೂಲಭೂತ ತಿಳಿವಳಿಕೆ ಕೊಡುವಲ್ಲಿ ವಿಫಲವಾಗಿದೆ. ಗ್ರಾಹಕನಾಗಿ ಪರಿವರ್ತಿವಾಗಿರುವ ಭಾರತೀಯ ಮಧ್ಯಮ ಮತ್ತು ಮೇಲ್‌ಮಧ್ಯಮವರ್ಗಗಳು ದೈನಂದಿನ ಜಂಜಡದಲ್ಲೇ ಹೊತು ಹೋಗಿ ಎಲ್ಲವನ್ನೂ ಕಳಕೊಂಡಂತಿದೆ. ಧರ್ಮ, ಆಧ್ಯಾತ್ಮಗಳ ಕಲ್ಪನೆಯೇ ಇಲ್ಲದ ಇವರು ತಮ್ಮ ಅನಾಥ ಪ್ರಜ್ಞೆಯಿಂದ, ಕೀಳರಿಮೆಯಿಂದ, ನೆಲೆರಹಿತ ಸ್ಥಿತಿಯಿಂದ ಹೊರಬರಲು, ಯಾವ ಯಾವುದೋ ಧರ್ಮ ದೇವರುಗಳ ಹೆಸರಿಗೆ ಜೋತು ಬೀಳಲು ಹಾತೊರೆಯುತ್ತಿವೆ. ಈ ರಿಕ್ತತೆಯನ್ನು ದುರುಪಯೋಗ ಪಡಿಸಿಕೊಳ್ಳುವ ಕೋಮುವಾದಿ ಪಟ್ಟಭದ್ರರು, ಧರ್ಮಲಂಡರು, ಧರ್ಮ, ದೇವರುಗಳನ್ನು ರಾಜಕೀಯ ಅಸ್ತ್ರಗಳನ್ನಾಗಿ ಬಳಸಿಕೊಂಡು ಕೋಮುದಳ್ಳುರಿ– ಹಚ್ಚಿ, ದೇಶವನ್ನು, ಜನರನ್ನು ಛಿದ್ರಮಾಡಲು ಹೊರಟಾಗಿದೆ.

ಗಾಂಧಿಜೀಯ 'ರಾಮರಾಜ್ಯ' ಪರಿಕಲ್ಪನೆಗೂ, ಇಂದಿನ ಕೋಮುವಾದಿಗಳ 'ರಾಮರಾಜ್ಯ'ಕ್ಕೂ ಇರುವ ಅಂತರ ಕುರಿತು ಪ್ರಜ್ಞಾವಂತರೆಲ್ಲಾ ಯೋಚಿಸಬೇಕಾದ ತುರ್ತು ಎಂದಿಗಿಂತಲೂ ಈಗ ಜಾಸ್ತಿಯಿದೆ. ನಮ್ಮ ಪುರಾತನರೇ ಏಕೆ, ಆಧುನಿಕರು ನಡೆಸಿದ 'ಧರ್ಮ ಸಂವಾದ' ಎಂಥದು? ಇಂದಿನ ಕೋಮುವಾದಿಗಳು ಏಕಪಕ್ಷೀಯವಾಗಿ 'ಸ್ಥಾಪಿಸಿರುವ' ಧರ್ಮ ಸಂಸತ್ ಎಂಥದು? ವಚನಕಾರರ ಅನುಭವ ಮಂಟಪ', ಗೌತಮ ಬುದ್ಧನ 'ಸಂಘರಾಮ'ಗಳೆಂಥವು? ಇಂದಿನ 'ಸಂತಸಮ್ಮೇಳನ' ಎಂಥದು? ಮಾನವ ಸಮಾಜ, ರಾಷ್ಟ್ರಗಳನ್ನು ಛಿದ್ರಮಾಡಲು ಹೊರಟಿರುವ ಧರ್ಮವೆಂಥದು?

ಈ ಪ್ರಶ್ನೆಗಳು ನಮ್ಮನ್ನು ಇಂದು ಗಾಂಧಿ ನಂತರದಲ್ಲಿ ಸ್ಥಗಿತಗೊಳಿಸಲ್ಪಟ್ಟಿರುವ 'ಧರ್ಮಸಂವಾದವನ್ನು', ರಾಷ್ಟ್ರೀಯತೆಯನ್ನು ನವೀಕರಿಸುವ ರೀತಿಯಲ್ಲಿ ಪ್ರೇರೇಪಿಸಬೇಕು. ಧರ್ಮ–ದೇವರುಗಳನ್ನು ಸ್ವಾರ್ಥ ರಾಜಕೀಯ ಲಾಭಕ್ಕಾಗಿ, ದುರುಪಯೋಗ ಪಡಿಸಿಕೊಳ್ಳುವವರನ್ನು – ಗಾಂಧೀಜೀ ಅಂದು 'ಭಾರತ ಬಿಟ್ಟುತೊಲಗಿ' ಚಳವಳಿ ಪ್ರಾರಂಭಿಸಿ ಭಾರತವನ್ನು ಒಡೆದು ಆಳುತ್ತಿದ್ದ ಬ್ರಿಟಿಷರನ್ನು ಹೊರಗಟ್ಟಿದಂತೆ, ದೇಶಬಿಟ್ಟು ತೊಲಗುವಂತೆ ಮಾಡಲು ಜಾಗೃತಗೊಳ್ಳಬೇಕಿದೆ. ಧರ್ಮ, ದೇವರು, ದೇಶಭಕ್ತಿ, ರಾಷ್ಟ್ರಪ್ರೇಮಗಳನ್ನು ದುರುಪಯೋಗ ಪಡಿಸಿಕೊಳ್ಳುವವರೆಲ್ಲಾರನ್ನೂ ಅಧರ್ಮಿಗಳೆಂದೂ, ಧರ್ಮಲಂಡರೆಂದೂ ಪರಿಗಣಿಸಬೇಕು. ಅಂಥ ಶಕ್ತಿಗಳ ವಿರುದ್ಧ ಸತತ ಎಚ್ಚರ, ಹೋರಾಟ ಅತ್ಯಗತ್ಯ. ಇಲ್ಲವಾದಲ್ಲಿ ನಮ್ಮ ಪೂರ್ವಜರು ತಮ್ಮ ಸಾರಸರ್ವಸ್ವವನ್ನು ತ್ಯಾಗಮಾಡಿ ಗಳಿಸಿಕೊಟ್ಟ ರಾಷ್ಟ್ರ ಮತ್ತು ಸ್ವಾತಂತ್ರ್ಯ ನಮ್ಮಗಿಲ್ಲವಾಗಿಬಿಡುವ ಅಪಾಯವಿದೆ.



**(ಬೆಂಗಳೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಸ್. ಚಂದ್ರಶೇಖರ್ ನಮ್ಮ ಮಧ್ಯದ ಖ್ಯಾತ ಇತಿಹಾಸ ತಜ್ಞರೂ ಹೌದು)**

**೭ನೇ ಪುಟದಿಂದ)**

'ರಾಷ್ಟ್ರೀಯತೆಯ ನಡುವಿನ ಸಂಘರ್ಷದಂತೆ ಕಾಣುತ್ತದೆ. ಆದರೆ ಸಮಸ್ಯೆ ಅಷ್ಟು ಸರಳವಾಗೇನೂ ಇಲ್ಲ. ಭಾರತೀಯರು ಒಂದು ರಾಷ್ಟ್ರ ಎನ್ನುವುದನ್ನು ನೀವು ಹಿಂದುತ್ವದ ನೆಲೆಯಿಂದಾದರೂ ವ್ಯಾಖ್ಯಾನಿಸಿ ಅಥವಾ ಸೆಕ್ಯುಲರ್ ನೆಲೆಯಿಂದಾದರೂ ವ್ಯಾಖ್ಯಾನಿಸಿ. (ಇಲ್ಲಿ ಸೆಕ್ಯುಲರ್ ಪರಿಕಲ್ಪನೆಯನ್ನು ಅದರೊಳಗಿರುವ ಸೂಕ್ಷ್ಮ ಅಭಿಪ್ರಾಯಭೇಧಗಳನ್ನು ಕಡೆಗಣಿಸಿ ಅತ್ಯಂತ ವಿಶಾಲವಾದ ಅರ್ಥದಲ್ಲಿ ಬಳಸಲಾಗಿದೆ.) ಹೇಗೆ ಮಾಡಿದರೂ ನಮ್ಮ ಸಂಸ್ಕೃತಿಯಲ್ಲಿ ಅನಾದಿಕಾಲದಿಂದಲೂ ಅಂತರ್ಗತವಾಗಿರುವ ವೈವಿಧ್ಯತೆಯನ್ನು ಬಲಿಕೊಡಬೇಕಾಗಿರುವುದು ಅನಿವಾರ್ಯ. ಹಿಂದುತ್ವದ ನಿಲುವು ಭಾರತದ ಭವ್ಯ ಪರಂಪರೆಯನ್ನು ಏಕೀಭವಿಸಿ ಅದನ್ನು ಪುನರುತ್ಥಾನಗೊಳಿಸುವ ಹೆಸರಿನಲ್ಲಿ, ವೈವಿಧ್ಯತೆಯ್ನನ್ನು ನಾಶಪಡಿಸಿದರೆ ಸೆಕ್ಯುಲರ್ ನಿಲುವು 'ವೈಜ್ಞಾನಿಕ' ಸೆಕ್ಯುಲರ್ ಪ್ರಭುತ್ವವನ್ನು ಸ್ಥಾಪಿಸುವ ಹೆಸರಿನಲ್ಲಿ ಸಾವಿರಾರು ವರ್ಷಗಳಿಂದ ಉಳಿದುಕೊಂಡು ಬಂದಿರುವ ಸಾಂಸ್ಕೃತಿಕ, ಸಾಮಾಜಿಕ ವೈವಿಧ್ಯತೆಯನ್ನು ನಾಶಪಡಿಸುತ್ತಿದೆ.

## ಗಾಂಧೀಜಿಯ 'ಗ್ರಾಮ ಸ್ವರಾಜ್ಯ' ಒಂದು ಪರ್ಯಾಯವೇ?

ಇದಕ್ಕಿರುವ ಪರಿಹಾರೋಪಾಯವೆಂದರೆ ರಾಷ್ಟ್ರದ ಪರಿಕಲ್ಪನೆಗೆ ಪರ್ಯಾಯವಾದ ರಾಜಕೀಯ ಪ್ರಭುತ್ವವನ್ನು ಹುಡುಕುವುದು. ಅದೂ ಸಹ ಸುಲಭದ ಮಾರ್ಗವೇನಲ್ಲ. ಪರ್ಯಾಯವನ್ನು ಹುಡುಕುವುದೆಂದರೆ ಕ್ರಿಶ್ಚಿಯನ್ ಅಥವಾ ಮತ್ತಾವುದೇ ಧೈವಶಾಸ್ತ್ರದ ಲೋಕದೃಷ್ಟಿಯಿಂದ ಮುಕ್ತವಾದ ಪ್ರಭುತ್ವದ ಕಲ್ಪನೆ ಹೇಗಿದ್ದರಬಹುದು ಎನ್ನುವ ಹುಡುಕಾಟವನ್ನು ನಾವು ಪ್ರಾರಂಭಿಸಬೇಕಾಗುತ್ತದೆ. ಅಂತಹ ಕೆಲಸ ಈಗಾಗಲೇ ಸಾಕಷ್ಟು ನಡೆದಿದೆ ಎಂದು ಕೆಲವರು ವಾದಿಸಬಹುದು. ಭಾರತದ ಉದಾಹರಣೆಯನ್ನೇ ತೆಗೆದುಕೊಂಡರೆ ಪ್ರಾಚೀನ ಭಾರತದ ರಾಜಕೀಯ ಪ್ರಭುತ್ವದ ಸ್ವರೂಪವನ್ನು ಕುರಿತು ಸಾಕಷ್ಟು ಅಧ್ಯಯನಗಳು ಬಂದಿವೆ. ಆದರೆ ಅಂತಹ ಅಧ್ಯಯನಗಳು ರಾಜಕೀಯ ಪ್ರಭುತ್ವವನ್ನು ಕುರಿತಾಗಿ ಇರುವ ಪಶ್ಚಿಮದ ಲೋಕದೃಷ್ಟಿಗಿಂತ ಭಿನ್ನವಾಗಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ತೋರಿಸಬಹುದು. ಉದಾಹರಣೆಗೆ ನಮ್ಮ ಸಂಸ್ಕೃತಿಯಲ್ಲಿ 'ಸ್ಟೇಟ್', 'ನೇಶನ್', 'ಪರಮಾಧಿಕಾರ', 'ಹಕ್ಕು', 'ಸಮಾನತೆ', 'ಸ್ವಾತಂತ್ರ್ಯ' ಮುಂತಾದ ಪರಿಕಲ್ಪನೆಗಳು ಇದ್ದವೆ ಅಥವಾ ಇಲ್ಲವೆ ಎನ್ನುವ ಮೂಲಭೂತ ಪ್ರಶ್ನೆಗಳನ್ನೇ ಕೇಳಿಕೊಳ್ಳದೆ ಪ್ರಾಚೀನ ಭಾರತದಲ್ಲಿ ರಾಷ್ಟ್ರದ ಪರಿಕಲ್ಪನೆ, ಪ್ರಾಚೀನ ಭಾರತದ ರಾಜ್ಯಗಳಲ್ಲಿ ಪರಮಾಧಿಕಾರ, ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ಸ್ಟೇಟ್' ಮೊದಲಾದ ಹಲವಾರು ಅಧ್ಯಯನಗಳು ನಡೆದಿವೆ. ಅಂದರೆ ಪಶ್ಚಿಮದ ಸಂಸ್ಕೃತಿಗೆ ನಿರ್ದಿಷ್ಟವಾದ ಪರಿಕಲ್ಪನೆಗಳು ಸಾರ್ವತ್ರಿಕವಾಗಿ ಅನ್ವಯವಾಗುವಂತಹವು ಎನ್ನುವ ನಂಬಿಕೆಯಿಂದ ನಡೆದ ಅಧ್ಯಯನಗಳಿವು. ಇಂತಹ ಪಾಶ್ಚಿಮಾತ್ಯ ಚೌಕಟ್ಟಿನಿಂದ ಮುಕ್ತವಾದ ಅಧ್ಯಯನಗಳ ಅಗತ್ಯ ಇಂದು ಖಂಡಿತಾ ಇದೆ.ಈ ನಿಟ್ಟಿನಲ್ಲಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆ ಪರಿಣಾಮಕಾರಿಯಾದ ಪರ್ಯಾಯ ವ್ಯವಸ್ಥೆಯಾಗಬಲ್ಲದು. ಈಗಿನ ವಿಕೇಂದ್ರೀಕರಣದ ಪ್ರಯತ್ನಗಳು ಆಧುನಿಕ ರಾಷ್ಟ್ರೀಯತೆಯ ಚೌಕಟಿನೊಳಗೆ ನಡೆಯುತ್ತಿರುವ ಕಾರಣದಿಂದಾಗಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಗಾಂಧೀಜಿಯವರ ಗ್ರಾಮಸ್ವರಾಜ್ಯದ ಒಳನೋಟಗಳನ್ನೊಳಗೊಂಡ ವಿಕೇಂದ್ರೀಕರಣ ವ್ಯವಸ್ಥೆಯತ್ತ ಸಾಗುವಲ್ಲಿ ನಾವು ಯಶಸ್ವಿಯಾದರೆ ಅಂತಹ ರಾಜಕೀಯ ಪ್ರಭುತ್ವ ವಿಶ್ವಕ್ಕೆ ಮಾದರಿಯಾಗಬಲ್ಲದು.

ಆದರೆ ಪರ್ಯಾಯ ಪ್ರಭುತ್ವದ ಹುಡುಕಾಡ ಅತ್ಯಂತ ಎಚ್ಚರಿಕೆಯಿಂದ ನಡೆಯಬೇಕು. ನಮ್ಮ ಪ್ರಾಚೀನ ಪರಂಪರೆಯ ವಿಮರ್ಶಾತ್ಮಕ ವಿಶ್ಲೇಷಣೆಗೆ ತೊಡಗದೆ ಇಂದಿನ ಸಮಸ್ಯೆಗಳಿಗೆ ಪರಿಹಾರ ಸೂಚಿಸಬಲ್ಲ ಪರಿಪೂರ್ಣವಾದ ಪ್ರಭುತ್ವದ ಪರಿಕಲ್ಪನೆ ನಮ್ಮ ಪ್ರಾಚೀನರಲ್ಲಿತ್ತು ಮತ್ತು ಅದು ಎಲ್ಲ ರೀತಿಯಿಂದಲೂ ಪಶ್ಚಿಮದ ಕಾಣ್ಕೆಗಳಿಗಿಂತ ಉತ್ತಮವಾಗಿತ್ತು ಎನ್ನುವ ಪೂರ್ವನಂಬಿಕೆಯಿಂದ ಹೊರಟರೆ ಹಿಂದುತ್ವದ ಹಾದಿಯನ್ನು ಹಿಡಿಯುತ್ತೇವೆ. ಹಾಗೆಯೇ ಆಧುನಿಕ ಶಿಕ್ಷಣದ ಮೂಲಕ ನಮಗೆ ಬಂದ ಪಶ್ಚಿಮಸಂಸ್ಕೃತಿಜನ್ಯ ಮೌಲ್ಯಗಳ ಮಿತಿಗಳನ್ನು ವಿಮರ್ಶಾತ್ಮಕವಾಗಿ ನೋಡದೆ ಅವುಗಳನ್ನೇ ಮಾನದಂಡಗಳನ್ನಾಗಿ ಮಾಡಿಕೊಂಡು ನಮ್ಮ ಸಂಸ್ಕೃತಿಯ ಮೌಲ್ಯಮಾಪನಕ್ಕೆ ತೊಡಗಿದರೆ ಭಾರತದ ಜನಸಾಮಾನ್ಯರ ಅನುಭವಗಳಿಗೆ ಪರಕೀಯವಾದ 'ಸೆಕ್ಯುಲರ್' ಪ್ರಭುತ್ವವನ್ನು ಸ್ಥಾಪಿಸುವ ಪ್ರಕ್ರಿಯೆಯಲ್ಲಿ ತೊಡಗುತ್ತವೆ. ಈಗಾಗುತ್ತಿರುವುದು ಅದೇ ಎನ್ನುವುದು ನನ್ನ ಬಲವಾದ ಅನುಮಾನ. ಸಿದ್ಧ ಬೌದ್ಧಿಕ ಚೌಕಟ್ಟುಗಳ ಮಿತಿಗಳನ್ನು ಮೀರಿ ಯೋಚಿಸಲು ತೊಡಗಬಾಕಾದ ಅನಿವಾರ್ಯತೆ ನಮ್ಮ ಮುಂದಿದೆ.



**(ಕುವೆಂಪು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಜೆ.ಎಸ್. ಸದಾನಂದ ಹಲವು ಮುಖ್ಯ ಸಮಾಜಶಾಸ್ತ್ರೀಯ ಅಧ್ಯಯನಗಳಲ್ಲೂ ತೊಡಗಿಕೊಂಡವರು)**

ಒಂದು ವಿಶ್ಲೇಷಣೆ

# ಭಾಷೆ-ಸಾಹಿತ್ಯಗಳ ಅಧ್ಯಯನ: ಹಳೆಗನ್ನಡದತ್ತ ತಾತ್ಸಾರ : ಏಕೆ? ಹೇಗೆ?

-ಡಾ. ಹನೂರು ಕೃಷ್ಣಮೂರ್ತಿ

**ನಮ್ಮ ವಿಶ್ವವಿದ್ಯಾಲಯಗಳಲ್ಲಿನ ವಿದ್ವತ್ತಿನ ಮತ್ತು ಸಂಶೋಧನೆಯ ಗುಣಮಟ್ಟ ಪತನ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇದಕ್ಕೆ ಹಲವಾರು ಕಾರಣಗಳನ್ನು ಹೇಳಲಾಗುತ್ತದೆಯಾದರೂ, ಭಾಷೆ ಕಲಿಕೆ ಕುರಿತ ನಮ್ಮ ಬದಲಾದ ನಿಲುವುಗಳು ಮತ್ತು ಅದನ್ನು ಒತ್ತಾಯಿಸಿದ ಸಾಮಾಜಿಕ-ರಾಜಕೀಯ ಕಾರಣಗಳ ಕಡೆ ಯಾರೂ ಅಷ್ಟು ಗಮನ ಹರಿಸಿದಂತಿಲ್ಲ. ಉದಾಹರಣೆಗೆ, ಹಳೆಗನ್ನಡ ಅಧ್ಯಯನ ಕುರಿತು ಹಲ ವರ್ಷಗಳಿಂದ ಬೆಳೆದು ಬಂದ ತಾತ್ಸಾರದ ಮೂಲಗಳು ಎಲ್ಲಿವೆ? ಅದರ ಪರಿಣಾಮಗಳೇನು ಎಂಬುದರ ಒಂದು ಸಮೀಕ್ಷೆ ಕುತೂಹಲ ಹುಟ್ಟಿಸುವಂತಹದ್ದು. ಅಂತಹದೊಂದು ಸಮೀಕ್ಷೆ ಇಲ್ಲಿದೆ.**-ಸಂ.

ಪದನಱಿದು ನುಡಿಯಲುಂ ನುಡಿದುದ
ನಱಿಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋದದೆಯುಂ
ಕಾವ್ಯಪ್ರಯೋಗ ಪರಿಣತಮತಿಗಳ್

**ಕ**ನ್ನಡ ಕಲಿಕೆಯ ಸಮಸ್ಯೆ ಪ್ರಾಥಮಿಕ ಹಂತದಲ್ಲಿ ಮಾತ್ರವಲ್ಲ, ವಿಶ್ವವಿದ್ಯಾನಿಲಯ, ಪದವಿ ತರಗತಿಗಳ ಮಟ್ಟದಲ್ಲಿಯೂ ಇದೆ. ಕಲೆ ಮತ್ತು ಮೂಲವಿಜ್ಞಾನದ ಎಲ್ಲಾ ವಿಷಯಗಳಿಗೂ ಉದ್ಯೋಗಸಂಗತಿ ತಳಕು ಹಾಕಿಕೊಂಡು ಪದವಿಯಲ್ಲೂ, ಸ್ನಾತಕೋತ್ತರ ಹಂತದಲ್ಲಿಯೂ ಇವನ್ನು ಓದಿದರೆ ಏನು ಲಾಭ ಎಂಬ ಮುಖ್ಯಪ್ರಶ್ನೆ ಎದುರಾಗಿದೆ. ನಿರುದ್ಯೋಗ ತಾಂಡವವಾಡುತ್ತಿರುವ ಈ ಹೊತ್ತಿನಲ್ಲಿ ಯುವಕರು ಈ ಪ್ರಶ್ನೆಯನ್ನು ಕೇಳುವುದು ಅಸಹಜವೇನಲ್ಲ. ಬೆಂಗಳೂರಿನ ಒಂದೆರಡು ಖಾಸಗಿ ಕಾಲೇಜುಗಳಲ್ಲಿ ಕನ್ನಡ ಎಂ.ಎ. ತರಗತಿಗಳು ಮುಚ್ಚಿಯೇ ಹೋಗಿವೆ.

೧೯ನೇ ಶತಮಾನದಲ್ಲಿ ಕರ್ನಾಟಕಕ್ಕೆ ಬಂದ ಕ್ರೈಸ್ತ ಮಿಷನರಿಗಳು ಮತ್ತು ಅಧಿಕಾರಿಗಳಾದ ಬಿ.ಎಲ್.ರೈಸ್ ಅವರ ಶಾಸನ ಸಂಪುಟಗಳ ಸಂಪಾದನೆ, ಕಿಟಲ್ ಅವರ ನಿಘಂಟು ಕಾರ್ಯ, ಕರ್ನಲ್ ಮೆಕೆಂಜಿ ಅವರ ಕೈಫಿಯತ್ತು ಸಂಗ್ರಹ, ಜೆ.ಎಫ್.ಫ್ಲೀಟ್ ಅವರ ಜಾನಪದ ಗೀತೆಗಳ ಸಂಗ್ರಹ ಮಾಡಿದ ಇವರೆಲ್ಲರ ಕನ್ನಡ ಸೇವೆಯ ಅಗಾಧತೆಯನ್ನು ಮತ್ತೊಮ್ಮೆ ನೋಡುವ, ಪರಿಶೀಲಿಸುವ, ಅರಿಯುವ ತಾಳ್ಮೆ ಈ ಹೊತ್ತು ನಮಗಿದೆಯೇ ಎಂದು ಕೇಳಿಕೊಳ್ಳಬೇಕಾಗಿದೆ. ೧೯ನೇ ಶತಮಾನದ ಪಾಶ್ಚಾತ್ಯ ಮಿಷನರಿಗಳ ಕನ್ನಡ ಸೇವೆಯ ಕಥೆ ಹಾಗಿರಲಿ; ೨೦ನೇ ಶತಮಾನದ ಆರಂಭದ ಕಾಲಕ್ಕೆ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಪ್ರಾಧ್ಯಾಪಕರ ಉಪಸ್ಥಿತಿಯೇ ಒಂದು ಗೌರವದ, ನಾಡಿನ ಕೀರ್ತಿಯ ಸಂಗತಿಯಾಗಿತ್ತು.

ಮೈಸೂರು, ಧಾರವಾಡ ವಿಶ್ವವಿದ್ಯಾನಿಲಯಗಳು ಪ್ರಸಿದ್ಧಿಯಾಗಿದ್ದುದು ಅಲ್ಲಿಯ ಕನ್ನಡ ಪ್ರಾಧ್ಯಾಪಕರು ನಿರಂತರ ಕೈಗೊಂಡಿದ್ದ ಸಂಶೋಧನೆ, ಅಧ್ಯಯನ ಮತ್ತು ಸೃಜನಶೀಲ ಬರವಣಿಗೆಗಳಿಂದ. ಹಳಗನ್ನಡ ಬರದವನು ಅಧ್ಯಾಪಕನಾಗಲು ಅರ್ಹನಲ್ಲ ಎನ್ನುವಂತಾಗಿತ್ತು. ಏಳೆಂಟು ದಶಕಗಳ ಹಿಂದೆ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರ ನಡುವೆ ನಡೆಯುತ್ತಿದ್ದ ಅಧ್ಯಯನ, ಪಾಠಗಳೆಲ್ಲವೂ ಹಳಗನ್ನಡ ಸಂಬಂಧದಲ್ಲಿಯೇ ಇದ್ದಿತು ಎಂಬುದನ್ನು ಗಮನಿಸಬೇಕು.

ಸಂಸ್ಕೃತ, ಹಳಗನ್ನಡ ಜೊತೆಗೆ ಇಂಗ್ಲಿಷನ್ನು ವ್ಯಾಪಕವಾಗಿ ಓದಿಕೊಂಡ ಕುವೆಂಪು ಅವರಿಗೆ ತರಗತಿಯಲ್ಲಿ ಕಾವ್ಯ ಮೀಮಾಂಸೆ ಪಾಠ ಮಾಡುವುದು, ಹಳಗನ್ನಡದಲ್ಲಿ ಖಂಡಕಾವ್ಯ, ನಾಟಕ, ಮಹಾಕಾವ್ಯ ರಚಿಸುವುದು ಒಂದೇ ಆಗಿದ್ದು, ಅದರೊಂದಿಗೆ ಬರೆದ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಕೂಡ ಗದ್ಯ, ಪದ್ಯ ಮಾದರಿಗಳೇ ಆಗಿದ್ದವು. ಕುವೆಂಪು, ಹಳಗನ್ನಡವಲ್ಲದೆ ಪ್ರಾಚೀನ ಅಲಂಕಾರಿಕರ ಅಧ್ಯಯನ ಎಂದೆಲ್ಲ ಮರು ಪರಿಶೀಲನೆ ನಡೆಸುವ ಹೊತ್ತಿನಲ್ಲಿ ಅವರಿಗೆ ಸಮಕಾಲೀನರು, ಗುರುಗಳು ಆಗಿದ್ದ ಎ.ಆರ್.ಕೃಷ್ಣಶಾಸ್ತ್ರಿಗಳು ಮಾಡಿದ ಕೆಲಸವೇ ಬೇರೆ. ಸಂಸ್ಕೃತ ಮಹಾಭಾರತ ಕಥನವನ್ನು ಒಂದು ಕಾದಂಬರಿಯಂತೆ ಕನ್ನಡಕ್ಕೆ ತಂದರು. ಅದು ಯಾವೊತ್ತಿನ ಕನ್ನಡ ಓದಗರಿಗೆಲ್ಲ ನಿರಂತರ ಅವಗಾಹನೆಯ ಕೃತಿಯಾಗಿದೆ.

ಅಲಂಕಾರಿಕರ ಗ್ರಂಥಗಳನ್ನೆಲ್ಲ ಕುರಿತು ಸಾವಧಾನದಿಂದ ಅಧ್ಯಯನ ಮಾಡಿದ ತೀ.ನಂ.ಶ್ರೀ ಅವರು ಕಾಲೇಜಿನ ವಿದ್ಯಾರ್ಥಿಗಳು, ಅಧ್ಯಾಪಕರಿಗೆಲ್ಲ ಅರ್ಥವಾಗುವಂತೆ ಭಾರತೀಯ ಮೀಮಾಂಸೆಯ ಸಂಗತಿಗಳನ್ನು ಕನ್ನಡದಲ್ಲಿ ಮರು ನಿರೂಪಿಸಿದರು. ಅದು ಇಂದಿಗೂ ತನ್ನ ಮಹತ್ವವನ್ನು ಕಳೆದುಕೊಂಡಿಲ್ಲ. ಆದರೆ ಇತ್ತೀಚಿನ ಅಧ್ಯಾಪಕರು, ವಿದ್ಯಾರ್ಥಿಗಳು ಅದರ ಪ್ರಾಮುಖ್ಯತೆಯನ್ನು ಮರೆತಂತಿದ್ದಾರೆ. ಅದೇ ಕಾಲದಲ್ಲಿ ಎಲ್ಲಕ್ಕಿಂತಲೂ ಮುಖ್ಯವಾಗಿ ನಡೆಯುತ್ತಿದ್ದ ಕೆಲಸವೆಂದರೆ ಮೈಸೂರು ಮತ್ತು ಧಾರವಾಡ ವಿಶ್ವವಿದ್ಯಾನಿಲಯಗಳಲ್ಲಿ ಹಳಗನ್ನಡ ಹಸ್ತಪ್ರತಿಗಳ ಓದು, ಪಾಠ ಪರಿಷ್ಕರಣೆ ಮತ್ತು ಮುದ್ರಣ. ಇದು ಯಾವ ಲಾಭವನ್ನು, ಕೀರ್ತಿಯನ್ನು ತರದ ಕೆಲಸವಾಗಿದ್ದರೂ ಇಂತಹ ಕೈಂಕರ್ಯದಲ್ಲಿ ತೊಡಗಿಕೊಂಡಿದ್ದವರು ಒಬ್ಬಿಬ್ಬರು ವಿದ್ವಾಂಸರಲ್ಲ. ಬಿಜಾಪುರದಲ್ಲಿ ವಕೀಲಿ ವೃತ್ತಿಯಲ್ಲಿದ್ದ ಫ.ಗು.ಹಳಕಟ್ಟಿ ಅವರು ವಚನಕಟ್ಟುಗಳ ಹುಡುಕಾಟ ಮತ್ತು ಅದರ ಶ್ರಮಪೂರ್ಣ ಓದು, ಪ್ರಕಟಣೆಯ ಕಾಯಕದಲ್ಲಿ ತೊಡಗಿದ್ದರು.

೧೯೭೦ರ ಸುಮಾರಿನಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಹಳಗನ್ನಡ ಹಸ್ತಪ್ರತಿ ಭಂಡಾರವನ್ನು ನೋಡಿಕೊಳ್ಳುವ ಸಾಮಾನ್ಯ ಹುದ್ದೆಯಲ್ಲಿದ್ದ ಶಿವಣ್ಣನವರ ಕೈ ಬೆರಳ ತುದಿಯಲ್ಲಿ ನೂರಾರು ಹಸ್ತಪ್ರತಿಗಳ ಸಕಲ ಮಾಹಿತಿ, ಇರುತ್ತಿದ್ದವು. ವಿಶ್ವವಿದ್ಯಾನಿಲಯಗಳಲ್ಲಿ ಹಳಗನ್ನಡ ಅಧ್ಯಯನ ಸಂಬಂಧಿ ಚರ್ಚೆಗಾಗಿ ಮೈಸೂರು ವಿವಿಯಿಂದ ಪ್ರಬುದ್ಧ ಕರ್ನಾಟಕ, ಬೆಂಗಳೂರು ವಿವಿಯಿಂದ ಸಾಧನೆ, ಕರ್ನಾಟಕ ವಿವಿಯಿಂದ ಕರ್ನಾಟಕ ಭಾರತೀ ಇವು ಪ್ರಕಟಗೊಳ್ಳುತ್ತಿದ್ದವು. ಇವುಗಳಲ್ಲಿ ಲೇಖನ ಪ್ರಕಟವಾಗುವುದೇ ವಿದ್ವಾಂಸರ ಪಾಂಡಿತ್ಯದ ಸಂಕೇತವಾಗಿರುತ್ತಿತ್ತು.

ಮೇಲಿನಂತಹ ಅಧ್ಯಯನದೊಂದಿಗೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಿರಂತರವಾಗಿ ಇದೇ ವಿದ್ವಾಂಸರ ಸಮೂಹದಿಂದ ಪ್ರೊ.ಜಿ.ವೆಂಕಟಸುಬ್ಬಯ್ಯ ಅವರ ನೇತೃತ್ವದಲ್ಲಿ ಕನ್ನಡ ನಿಘಂಟು ಕಾರ್ಯ ನಿರಂತರವಾಗಿ ನಡೆಯುತ್ತಾ ಬಂದು ಪ್ರಕಟವಾಗಿರುವ ಏಳು ಸಂಪುಟಗಳು ಈ ಹೊತ್ತು ಎಷ್ಟು ಪ್ರಯೋಜನಕ್ಕೆ ಬರುತ್ತಿದೆ ಎಂದು ಹೇಳಲಾಗದು.

ಹೀಗೆ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರೆನಿಸಿಕೊಂಡವರು ನಾನಾ ಪ್ರಕಾರದ ಹಳಗನ್ನಡ ಅಧ್ಯಯನದಲ್ಲಿ ತೊಡಗಿರಬೇಕಾದರೆ, ಅತ್ತ ಕರ್ನಾಟಕದಾದ್ಯಂತ ಗಮಕಿಗಳು ಹಳಗನ್ನಡ ಕಾವ್ಯಗಳನ್ನು ಸುಶ್ರಾವ್ಯವಾಗಿ ಓದಿ, ಸಾಮಾನ್ಯರಿಗೆ ಅದರ ಕಥನ ಸ್ವಾರಸ್ಯವನ್ನು ತಿಳಿಸುವವರಾಗಿದ್ದರು. ಇವರನ್ನು ಬಯಲು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೆಂದೇ ಕರೆಯಬೇಕಾಗಿದೆ. ಇವರಲ್ಲಿ ಮೇಲ್ವರ್ಗದವರಂತೆ ಅನೇಕಾನೇಕ ತಳವರ್ಗದವರು ಇದ್ದರೆಂಬುದನ್ನು ಮುಖ್ಯವಾಗಿ ನೆನೆಯಬೇಕು.

ಐವತ್ತು ವರ್ಷಗಳ ಹಿಂದೆ ನಾನು ಓದಿದ ಶಾಲೆಯಲ್ಲಿಯೇ ಇದ್ದ ಕನ್ನಡ ಮೇಷ್ಟ್ರು ಬಿಳಿಗಿರಿರಂಗ ಶೆಟ್ಟರ ಪಾಠಗಳು ನಮ್ಮ ಅಂತರಂಗವನ್ನು ನೇರ ಮುಟ್ಟಬಲ್ಲವಾಗಿದ್ದವು. ಬಿಳಿಗಿರಿಯವರು ಅದೆಲ್ಲಿ ಅಷ್ಟೊಂದು ಹಳಗನ್ನಡ, ಸಂಸ್ಕೃತ ಓದಿಕೊಂಡಿದ್ದರೋ ಅದು ಆಶ್ಚರ್ಯದ ಮಾತಾಗಿತ್ತು. ಕರ್ನಾಟಕದಾದ್ಯಂತ ಇದ್ದ ಅಂಥ ಅಧ್ಯಾಪಕರಿಗೆ ಯಾವ ಪದವಿಗಳು, ಹೆಚ್ಚಿನ ವೇತನವು ಇರಲಿಲ್ಲ. ಹಳಗನ್ನಡ ಕಾವ್ಯಕಥನಗಳನ್ನು ಇನ್ನಿತರರಿಗೆ ಓದಿ ಹೇಳುವುದೇ ಅವರ ಪುಣ್ಯದ ಕಾಯಕವಾಗಿದ್ದಿತು.

ಲೇಖನದ ಆರಂಭಕ್ಕೆ ಹೇಳಿದಂತೆ ಕನ್ನಡ ಕಲಿಯುವುದಕ್ಕೂ ಉದ್ಯೋಗಕ್ಕೂ ಸಂಬಂಧವೇರ್ಪಟ್ಟು ಕನ್ನಡ ಓದಿದರೆ ಉದ್ಯೋಗಾವಕಾಶ ಕಡಿಮೆ ಎಂಬ ಕಾರಣಕ್ಕಾಗಿ ಇತ್ತೀಚೆಗೆ ಸ್ನಾತಕ ಪದವಿ ತರಗತಿಗಳಲ್ಲಿ ಕನ್ನಡ ವಿಷಯದೊಡನೆ ಪತ್ರಿಕೋದ್ಯಮ, ಗಣಕ ವಿಜ್ಞಾನ ಇನ್ನಿತರೇ ವಿಷಯಗಳನ್ನು ಸೇರಿಸಲಾಗುತ್ತಿದೆ. ಪೂರ್ಣ ಸ್ವರೂಪದಲ್ಲಿ ಹೆಚ್ಚು ಹಳಗನ್ನಡ ಪಠ್ಯಗಳನ್ನು ಓದುವ ಅವಕಾಶವೂ ಕಡಿಮೆಯಾಗುತ್ತಿದೆ. ವಿಚಿತ್ರ ಸಂಗತಿಯೆಂದರೆ ಈ ಒಂದು ದಶಕದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಉದ್ಯೋಗಿಗಳು ತಮ್ಮ ಉದ್ಯೋಗದ ಜಡತ್ವವನ್ನು ಅರಿತವರಾಗಿ ಹಳಗನ್ನಡದತ್ತ ಬರುತ್ತ, ಅದನ್ನು ಓದುತ್ತ, ಹೊಸಗನ್ನಡದಲ್ಲಿ ಬರೆಯುವ ಪ್ರಯತ್ನ ಮಾಡುತ್ತಿರುವುದೂ ಕಂಡುಬರುತ್ತಿದ್ದೆ.

**" ಕಲಿಸುವುದಾಗದೇ, ಕಲಿಯುವುದಾಗದೇ ಒಟ್ಟು ಹಳಗನ್ನಡ ಪಠ್ಯಗಳನ್ನೇ ಹಿಂದೆ ಸರಿಸುವುದು ಸೂಕ್ತವೆಂಬಂತೆ ವಿಶ್ವವಿದ್ಯಾನಿಲಯಗಳ ಅಧ್ಯಯನ ಮಂಡಳಿಗಳಲ್ಲಿ ಶಾಸನ, ವ್ಯಾಕರಣ, ಹಳಗನ್ನಡ ಏಕೆ ಎಂಬ ಚರ್ಚೆ ಎದ್ದುಕೊಂಡಿದೆ. ಇಷ್ಟಲ್ಲದೆ ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯ ವಿಷಯಗಳಿಗೂ ಜಾತಿ ಮತದ ಸೋಂಕು ತಗುಲಿಕೊಂಡಿರುವುದೇ ಅಲ್ಲದೆ, ನೇಮಕಾತಿ ನಿಯಮಗಳ ಪರಿಷ್ಕರಣೆ ಇತ್ಯಾದು ಕಾರಣಗಳಿಂದಾಗಿಯೂ ಈ ಹೊತ್ತು ವಿಶ್ವವಿದ್ಯಾನಿಲಯಗಳು ಸಾಹಿತ್ಯ ತತ್ವಗಳಗಿಂತ ಹೆಚ್ಚಾಗಿ ಜಾತಿ–ಮತಗಳ ಸುತ್ತಲೇ ಚರ್ಚೆಗಳು ಗಿರಕಿ ಹೊಡೆಯುವ ಗೂಡುಗಳಾಗುತ್ತಿವೆ."**

ಇನ್ನು ಮಕ್ಕಳಿಗೆ ಇಂಗ್ಲಿಷನ್ನು ಚೆನ್ನಾಗಿ ಕಲಿಸುವ ಉದ್ದೇಶದಿಂದ ಒಂದು ಸಾವಿರ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯಲು ಸರ್ಕಾರ ಉದ್ದೇಶಿಸಿದೆ. ಸರಿ, ಕನ್ನಡ ಅಥವ ಇಂಗ್ಲಿಷನ್ನು ಚೆನ್ನಾಗಿ ಕಲಿಸುವುದು ಶಾಲಾ ಕಟ್ಟಡಗಳೇ ಅಥವಾ ಶಿಕ್ಷಕರೇ? ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಷ್ ಮತ್ತು ಕನ್ನಡವನ್ನು ಸುಸಂಬದ್ಧವಾಗಿ ಕಲಿಸುವ ಅಧ್ಯಾಪಕರು ಯಾರು? ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಮಟ್ಟದಲ್ಲಿಯೇ ಇಂಗ್ಲಿಷ್, ಕನ್ನಡ ಕಲಿಕೆಯ ಗುಣಮಟ್ಟ ಅದೆಷ್ಟು ಕುಸಿದಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಕಲಿಸುವ ಸಮಸ್ಯೆಯೇ ನಮ್ಮ ಮುಂದಿರುವ ಕಾರಣಕ್ಕೆ ಈಗ ಮಾಧ್ಯಮ ವಿಷಯದ ಗೊಂದಲ ಮುಗಿಯದ ಚರ್ಚೆಯಾಗಿ ಕೂತಿದೆ. ಯಾವ ಭಾಷೆಯಲ್ಲಿ ಕಲಿಸಬೇಕು ಎಂಬುದಕ್ಕಿಂತ ಕಲಿಸುವವರ ಶಕ್ತಿಯನ್ನು, ನಿಷ್ಠೆಯನ್ನು ಮಾಧ್ಯಮವು ಅವಲಂಬಿಸಿರುತ್ತದೆ. ಇದೇ ಮಾತು ಈ ಹೊತ್ತು ಕನ್ನಡ, ಹಳಗನ್ನಡ ಕಲಿಸುವ ಕಾಲೇಜು ವಿಶ್ವವಿದ್ಯಾನಿಲಯಗಳ ಹಂತಕ್ಕೂ ಅನ್ವಯವಾಗುತ್ತದೆ. ಇದಕ್ಕೆ ನಾನಾ ಕಾರಣಗಳನ್ನು ಹೇಳಲಾಗುತ್ತಿದೆ: ೧. ಹಳಗನ್ನಡವನ್ನು ಸರಿಯಾಗಿ ಕಲಿಸುವವರು ಇಲ್ಲ. ೨. ಕಲಿಸಿದರೂ ಅದರ ಕಲಿಕೆ ಮತ್ತು ಓದು ಕಷ್ಟ. ೩. ಅಲ್ಪಾವಧಿಯ ಸ್ಕೀಮಿನ ತರಗತಿಗಳಲ್ಲಿ ಅವನ್ನು ಕಲಿಸಲು ಸಮಯವೇ ಇಲ್ಲ. ೪. ಇಷ್ಟೊಂದು ವೇಗದ ಆಧುನಿಕ ಜಗತ್ತಿಗೆ ಪಂಪ, ರನ್ನ, ಕುಮಾರವ್ಯಾಸ ಹಳಗನ್ನಡ ಪಠ್ಯಗಳು ಪ್ರಸ್ತುತವೇ? ೫. ವಿದ್ಯಾಸಂಸ್ಥೆಗಳಲ್ಲಿ ಅರೆಕಾಲಿಕ ವೇತನದ ಅಧ್ಯಾಪಕರು ಅಧಿಕ ಸಂಖ್ಯೆಯಲ್ಲಿದ್ದು ಅವರ ವೇತನ ಅತಿ ಕಡಿಮೆ ಇರುವುದು; ಪೂರ್ಣಕಾಲಿಕ ಅಧ್ಯಾಪಕರಿಗೆ ಯುಜಿಸಿ ವೇತನ ಇದ್ದು ಇವರಿಬ್ಬರ ನಡುವೆ ಅತಿಯಾದ ತಲಬು ತಾರತಮ್ಯವಿರುವುದು.

ಮೇಲಿನ ಸಮಸ್ಯೆಗಳ ಮುಂದೆ ಕಲಿಸುವುದಾಗದೇ, ಕಲಿಯುವುದಾಗದೇ ಒಟ್ಟು ಹಳಗನ್ನಡ ಪಠ್ಯಗಳನ್ನೇ ಹಿಂದೆ ಸರಿಸುವುದು ಸೂಕ್ತವೆಂಬಂತೆ ವಿಶ್ವವಿದ್ಯಾನಿಲಯಗಳ ಅಧ್ಯಯನ ಮಂಡಳಿಗಳಲ್ಲಿ ಶಾಸನ, ವ್ಯಾಕರಣ, ಹಳಗನ್ನಡ ಏಕೆ ಎಂಬ ಚರ್ಚೆ ಎದ್ದುಕೊಂಡಿದೆ. ಇಷ್ಟಲ್ಲದೆ ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯ ವಿಷಯಗಳಿಗೂ ಜಾತಿ ಮತದ ಸೋಂಕು ತಗುಲಿಕೊಂಡಿರುವುದೇ ಅಲ್ಲದೆ, ನೇಮಕಾತಿ ನಿಯಮಗಳ ಪರಿಷ್ಕರಣೆ ಇತ್ಯಾದು ಕಾರಣಗಳಿಂದಾಗಿಯೂ ಈ ಹೊತ್ತು ವಿಶ್ವವಿದ್ಯಾನಿಲಯಗಳು ಸಾಹಿತ್ಯ ತತ್ವಗಳಗಿಂತ ಹೆಚ್ಚಾಗಿ ಜಾತಿ–ಮತಗಳ ಸುತ್ತಲೇ ಚರ್ಚೆಗಳು ಗಿರಕಿ ಹೊಡೆಯುವ ಗೂಡುಗಳಾಗುತ್ತಿವೆ.

ಮೇಲ್ಕಂಡ ವಿಷಯ ಹಾಗಿರಲಿ, ಈಗ್ಗೆ ಮೂರ್ನಾಲ್ಕು ದಶಗಳ ಹಿಂದೆಯೇ ಬೆಂಗಳೂರು ವಿಶ್ವವಿದ್ಯಾನಿಲಯ ಸೆಂಟ್ರಲ್ ಕಾಲೇಜಿನಲ್ಲಿ ನವ್ಯ ಸಾಹಿತ್ಯದ ಅಭಿಮಾನಿಗಳನ್ನು ಆಧುನಿಕ ಚಿಂತಕ, ವೈಚಾರಿಕರೆಂದು ಹೆಸರಿಸಲಾಗುತ್ತಿತ್ತು. ರನ್ನ, ಪಂಪ, ವಡ್ಡಾರಾಧನೆ ಕುರಿತು ಆ ಕಗ್ಗಗಳನ್ನು ಓದಬೇಕೆ ಎನ್ನುವವರಿದ್ದರು. ನಂತರ 'ಖಡ್ಗವಾಗಲಿ ಕಾವ್ಯ' ಎಂದು ಬಂದ ಬಂಡಾಯದವರು ನಾವು ಓದಬೇಕಿರುವುದು ಅರಮನೆಯ ಸಂಗತಿಗಳನ್ನಲ್ಲ, ಗುಡಿಸಲಿನವರ ಕಥೆಗಳನ್ನು ಎಂದರು. ಹೀಗಾಗಿ ಹಳಗನ್ನಡ ಓದಿನ ಅವನತಿಯ ಕಾಲ ಈ ದಶಕದಲ್ಲಿ ಮಾತ್ರ ಆರಂಭವಾದದ್ದೇನಲ್ಲ. ಇಷ್ಟರ ಮೇಲೆ ಹಳಗನ್ನಡ ಅಧ್ಯಯನ ಮತ್ತು ಓದುವ ಮಾದರಿಯು ಸ್ವಲ್ಪ ಮಟ್ಟಿಗೆ ಕಗ್ಗಂಟಿನದೇ ಆಗಿದ್ದಿತೆಂಬುದು ನಿಜ. ಆದರೆ ಎಲ್ಲ ಕಾಲದಲ್ಲೂ ಸೃಷ್ಟಿಯಾಗಬಹುದಾದ ಕಗ್ಗಗಳು ಹಳಗನ್ನಡದಲ್ಲೂ ಸೃಷ್ಟಿಯಾಗಿವೆ ಎಂದಷ್ಟೇ ಹೇಳಬಹುದು.

ರನ್ನನ ಗದಾಯುದ್ಧವೆಂದರೆ ಅದನ್ನು ಓದುವುದು ಸುಲಭವಲ್ಲ! ಭೀಮ, ದುರ್ಯೋಧನರ ಯುದ್ಧವನ್ನು ತೊಡೆ ತಟ್ಟಿಕೊಂಡು ಓದಬೇಕು... ಪಂಪ ಎಂದರೆ ಬನವಾಸಿಯ ವರ್ಣನೆ, ಕುಮಾರವ್ಯಾಸನೆಂದರೆ ಅವನದು ಕೃಷ್ಣಕಥೆ, ದೈವಭಕ್ತಿ. ಇನ್ನು ವಡ್ಡಾರಾಧನೆ ಎಂದರೆ ಅದರ 'ಹಾವಭಾವ ವಿಲಾಸ ವಿಭ್ರಮಂಗಳ್' ಬೇರೆ ಎಂಬ ಉತ್ಪ್ರೇಕ್ಷಾಲಂಕಾರಗಳು ಮುಖ್ಯವಾಗಿರುತ್ತಿದ್ದವು. ಸಂಶೋಧನಾ ಸಂಗತಿಗಳಾದರೂ ಅಷ್ಟೆ. ಆಯಾಯ ಮತ ಧರ್ಮದವರು ಅವರವರ ಮತ ಧರ್ಮ ಗ್ರಂಥಗಳನ್ನು ವಿಶೇಷವಾಗಿ ಅಧ್ಯಯನ ಮಾಡುವವರಾಗಿದ್ದರು. ಆ ಕಾರಣದಿಂದಾಗಿಯೇ ಕವಿಯೊಬ್ಬನ ಕಾವ್ಯವಸ್ತು ಸಂಗತಿಗಿಂತ ಅವನ ಕಾಲ, ಮತ, ಧರ್ಮ ಸಂಗತಿಗಳು ವಿದ್ವಾಂಸರ ಅಧ್ಯಯನಕ್ಕೆ ಬಹುಮುಖ್ಯ ವಸ್ತುವಾಗಿದ್ದಿತು. ಹೀಗಾಗಿ ನವ್ಯರು ಇಂತಹ ಅಧ್ಯಯನಗಳತ್ತ ಗಮನ ಹರಿಸದೇ, ಆಸಕ್ತಿ ಕಳೆದುಕೊಂಡವರಂತೆ ಆ ಕಗ್ಗಗಳನ್ನು ಓದಬೇಕ? ಎಂದಿದ್ದರೆ ಆಶ್ಚರ್ಯವೇನಿಲ್ಲ. ಆದರೆ ಕನ್ನಡ ಪರಂಪರೆ ನಿಜಕ್ಕೂ ಹಾಗಿದೆಯೇ? ಎಷ್ಟೋ ಜನ ಕನ್ನಡ ಕವಿಗಳು ತಮ್ಮ ಜಾತಿಮತವನ್ನು ಇರಲಿ, ಕಾಲವನ್ನಿರಲಿ, ಹೆಸರನ್ನೂ ಹೇಳಿಕೊಂಡಿಲ್ಲವಲ್ಲ!

ಒಂದು ಶತಮಾನದ ಕನ್ನಡ ಕಾವ್ಯವಸ್ತು ಸಂಗತಿಯನ್ನು ಇನ್ನೊಂದು ಕಾಲದ ಪಂಥ ಅರ್ಥ ಮಾಡಿಕೊಳ್ಳುತ್ತಾ, ಜೀರ್ಣಿಸಿಕೊಳ್ಳುತ್ತಾ ಅದಕ್ಕೆ ಪ್ರತಿಮಾರ್ಗ ಸೃಷ್ಟಿಸುತ್ತಾ ಅನ್ಯಸ್ವರೂಪವನ್ನು ಕಂಡುಕೊಳ್ಳುತ್ತಾ, ಅರ್ಥಪೂರ್ಣ ನಡೆಯನ್ನು 'ಹುಟ್ಟು'ಹಾಕಿಕೊಂಡು ಬಂದ ಕ್ರಮವನ್ನು ಇದೀಗಲಾದರೂ ಅಧ್ಯಾಪಕರು ಕನ್ನಡ ವಿದ್ಯಾರ್ಥಿಗಳು ಮತ್ತು ಆಸಕ್ತ ಓದುಗರ ಮುಂದೆ ವಿವರಿಸಬೇಕಾಗಿದೆ.

ಶ್ರೀಮಂತಿಕೆಯ ಆಧಿಕ್ಯದಲ್ಲಿ ಆಳುವವರನ್ನು ಸುಕುಮಾರಸ್ವಾಮಿಯು 'ನಮ್ಮನ್ ಆಳ್ವರುಂ ಒಳರೇ' ಅನ್ನುತ್ತಾನೆ. ಅಂದರೆ 'ಆಳುವ ಪ್ರಭುಗಳಿಗಿಂತ ದುಡ್ಡುಳ್ಳವರೇ ದೊಡ್ಡವರು' ಎಂಬ ಸಾರ್ವಕಾಲಿಕ ಸತ್ಯವನ್ನು ವಡ್ಡಾರಾಧನೆ ಹೇಳುತ್ತದಲ್ಲ.


ಯುದ್ಧ ಹೂಡಿ ಕುರುಕ್ಷೇತ್ರಕ್ಕೆ ಕಾರಣನಾಗಿ ಸರ್ವನಾಶವಾದ ಮೇಲೆ ಮುಖ ತಿರುವಿಕೊಂಡು ಮುಂದಣ ಹೆಜ್ಜೆ ಬಿಟ್ಟು, ಹಿಂದಣ ಹೆಜ್ಜೆಯಿಟ್ಟು ವೈಶಂಪಾಯನ ಸರೋವರದ ಕಡೆ ಬರುವ ದುರ್ಯೋಧನನನ್ನು ಕಾಣುವ ಪಕ್ಷಿಗಳು 'ಓ ನರ ಮಾನವನೇ ಇತ್ತ ಬಾರದಿರು, ಅತ್ತಲೇ ಸಾರು, ಇಲ್ಲಿ ಬಾಳುವ ನಮ್ಮಂಥವರ ಬದುಕನ್ನು ಕದಡದಿರು' ಎಂದು ಹೇಳುತ್ತವಲ್ಲ! ಬನವಾಸಿಯ ವಿವರಣೆಗಿಂತ ಪಂಪನ ಪ್ರಕೃತಿ ಪ್ರೇಮದ ತುತ್ತತುದಿ ಇರುವುದು ಇಲ್ಲಿಯೇ. ಯುದ್ಧರಂಗದಲ್ಲಿ ಪುಲ್ಮರುಳುಗಳು ಹೆಣಗಳ ಕೈಕಾಲು, ರುಂಡ, ಇದು ಇಂಥವನದು, ಈ ಮುಂಡ ಅಂಥವನದು ಬೆಲೆ ಇಷ್ಟು ಎನ್ನುತ್ತವೆ. ಇದರ ಅರ್ಥವೇನು? ಮನುಷ್ಯ ಯುದ್ಧವನ್ನು ಕೈಗೊಂಡು ಅಂಥ ವಾತಾವರಣ ಸೃಷ್ಟಿಸುವುದಾದರೆ ಅಲ್ಲಿ ವ್ಯಾಪಾರಕ್ಕೆ ತೊಡಗುವುದು ಮನುಷ್ಯರಲ್ಲ, ಪಿಶಾಚಿಗಳು ಎಂದಿದ್ದಾರೆ ಪ್ರಾಚೀನ ಕನ್ನಡ ಕವಿಗಳು. ಪಂಪ, ರನ್ನರ ಈ ಬಗೆಯ ಯುದ್ಧ ದುರಂತದ ವಿವರಣೆಗಳನ್ನು ಏರುದನಿಯಲ್ಲಲ್ಲ, ವಿಷಾದದ ಮಾತುಗಳಲ್ಲಷ್ಟೇ ಓದಿ ವಿವರಿಸಬೇಕಾಗಿದೆ.

ಕುಮಾರವ್ಯಾಸನು ತನ್ನ ಭಾರತ ಕಥಾಮಂಜರಿಯಲ್ಲಿ, ದುರ್ಯೋಧನನ ಆಸ್ಥಾನದಲ್ಲಿ ಒಳಲಂಚದವರು ಇದ್ದರು ಎನ್ನುತ್ತಾನೆ. ಕಾಸು ಕೊಟ್ಟರೆ ಕತ್ತು ಹಾರಿಸುವ ಅಮಾಯಕ ಬಾಡಿಗೆ ಭಂಟರು ಇದ್ದರೆನ್ನುತ್ತಾನೆ. ಬುದ್ಧಿವಂತರು, ಚಿಂತಕರು, ಗಂಡಸರೇ ಇಲ್ಲದ ಆಸ್ಥಾನದಲ್ಲಿ ಹೆಣ್ಣೊಬ್ಬಳ ಮಾನಹಾನಿಯಾಗುತ್ತಾ ಆಕೆ ಸಭೆಯಲ್ಲಿ ಕೂತವರನ್ನೆಲ್ಲಾ ವಸ್ತ್ರಕ್ಕಾಗಿ ಬೇಡಿದರೆ, ಅದನ್ನು ಕರುಣಿಸುವ ಕೃಷ್ಣನನ್ನು ದ್ರೌಪದಿ, ಗಂಡಂದಿರನ್ನೂ ದಾಟಿ ತನ್ನ ಅಂತರಂಗದ ಪರಮಗುರು, ಮಿತ್ರ ಎನ್ನುವಲ್ಲಿ, ಹೆಣ್ಣು–ಗಂಡಿನ ನಡುವಣ ಲೋಕೋತ್ತರ ಪ್ರೇಮ ಸಂಸ್ಥಾಪನೆಯಾಗುವ ಹೃದಯಂಗಮ ಚಿತ್ರಣವಿದೆ.

ಇನ್ನು ಗ್ರಾಮಭಾಗಗಳಲ್ಲಿ ರಾಮಾಯಣ ಮಹಾಭಾರತದ ಹಳೆಗನ್ನಡ ಮಾದರಿಯ ಸಂಭಾಷಣೆಗಳನ್ನು ಒಂದೆರಡು ತಿಂಗಳಲ್ಲಿ ಮನನ ಮಾಡಿಕೊಂಡು ಬಯಲಾಟ ಆಡುವ ಅಸಂಖ್ಯಾತ ಕಲಾವಿದರು ಇರುವಾಗ ನಮ್ಮ ಕಾಲೇಜು ಅಧ್ಯಾಪಕರ ತೊಂದರೆಗಳೇನು ಗೊತ್ತಾಗದಾಗಿದೆ!

ಕಳೆದ ದಶಕಗಳಲ್ಲಿ ಹಳಗನ್ನಡ ಪಠ್ಯಗಳು ಗಮಕಿಗಳ ರಾಗದಲ್ಲಿ, ನಾಟಕದ ಪದ್ಯಗಳು ಗ್ರಾಮಸ್ಥರ ಮನದಲ್ಲಿ ಬದುಕಿಯೇ ಇರಬೇಕಾದರೆ ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿ ಅದೆಲ್ಲವೂ ಬೇಡವೆನಿಸುವುದಾದರೆ ಅದು ಈ ಹೊತ್ತಿನ ಲಾಭ ನಷ್ಟಗಳಿಗಷ್ಟೇ ಸಿಕ್ಕಿಹಾಕಿಕೊಂಡಿದೆ. ಈಗಿನ ಇಂಗ್ಲಿಷ್, ಕನ್ನಡ ಓದುಗಾರಿಕೆ ಒಂದು ಬಗೆಯ ಸುಲಭ ಮಾರ್ಗವನ್ನಷ್ಟೇ ಹಿಡಿದಿದೆ ಎನ್ನದೆ ವಿಧಿಯಿಲ್ಲ. ಇದು ಮುಂದಿನ ಪರಿಣಾಮದಲ್ಲಿ ಫಲ ತರುವುದಿಲ್ಲವಾಗಿ ನಮ್ಮ ಪರಂಪರೆಯನ್ನು, ಅಂತಃಸತ್ವವನ್ನು ನಾಶಮಾಡುತ್ತದೆ.

ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾನಿಲಯದವರೆಗೂ ಕನ್ನಡ ಮತ್ತು ಇಂಗ್ಲಿಷ್ ಕಲಿಸುವವರು ಯಾರು, ಅವರ ತರಬೇತಿ ಯಾವ ಬಗೆಯದಾಗಿರಬೇಕು, ಅವರ ಆಸಕ್ತಿ ಯಾವ ಸ್ವರೂಪದ್ದು ಎಂಬುದರ ಕಡೆಗೆ ಯೋಚಿಸಬೇಕಿದೆ. ಯಾವುದೇ ವೇತನ ಹೆಚ್ಚಳ, ತತ್ಸಂಬಂಧದ ಅನುಕೂಲಗಳು, ಮೂವತ್ತು ವರ್ಷ ಪಾಠ ಮಾಡುವ ಅಧ್ಯಾಪಕರನ್ನು ಮೂರು ನಿಮಿಷದಲ್ಲಿ ಆಯ್ಕೆ ಮಾಡುವ ಹಣದ ವಹಿವಾಟಿನ ಆಯ್ಕೆಯ ಕ್ರಮಗಳು, ಇವೆಲ್ಲವೂ ಹಳಗನ್ನಡ ಓದಿನ ಅರಿವಿಗೆ ಅದರ ನಿರಂತರತೆಗೆ ಸಹಾಯ ಮಾಡುವುದಿಲ್ಲ.



**(ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಹನೂರು ಕೃಷ್ಣಮೂರ್ತಿಯವರು ಕನ್ನಡದ ಹಿರಿಯ ಕಥೆ–ಕಾದಂಬರಿಕಾರರೂ, ಜಾನಪದ ವಿದ್ವಾಂಸರೂ ಹೌದು)**

# ನವಿಲುಗರಿ

## ಬಾಕಿ

ಈ ಜೋಳಿಗೆ ಬರಿದಾಗುವುದು
ಭ್ರಮೆಯೇ ಸರಿ
ಹೊರೆ ಹಗುರವಾಯಿತೆನ್ನುವಾಗ
ಇನ್ನೇನು ಎಲ್ಲ ಮುಗಿಯಿತೆನ್ನುವಾಗ
ಬದುಕುವುದು ಮಾತ್ರ ಇನ್ನೂ ಉಳಿದೇ
ಇದೆ ಬಾಕಿ
ಖಾಲಿಯಾಗುವುದಿದೆ ಇನ್ನೂ ಬಾಕಿ


ಧುತ್ತನೆ ಎದುರಾಗುವುದಿದೆ
ಯಾವುದೋ ತಿರುವಿನಲ್ಲಿ
ಗೊತ್ತಿಲ್ಲ ದಾರಿ
ಗುರಿ...
ಯಾವ ಪಯಣ ಪಥ ಯಾವುದೋ
ಕಾಣದೂರಿಗೆ ನಡೆಯುವುದು
ಇನ್ನೂ ಇದೆ

ಮುಚ್ಚಿಟ್ಟ ಪುಸ್ತಕದ ಮಡಿಚಿಟ್ಟ ಹಾಳೆ
ಸವರದ ಮುಖಪುಟ ಸವೆಯದ ಅಕ್ಷರ
ಮರೆತ ಮಾತಿನ ಮೌನ
ಹಾಡದೆ ಕಾಡುವ ರಾಗ
ಎದೆಯೊಳಗಿಳಿಯುವುದು
ಇನ್ನೂ ಇದೆ ಬಾಕಿ

ಸಿಗದೇ ಸೋರಿ ಹೋದ ಆ ಸಂಜೆ
ಮೈಗಂಟದೇ ಜಾರಿದ ಸೂರ್ಯನ
ಕೆಂಪು
ಕೈಗೆಟುಕದೆ ಕಣ್ಣ ಮಿಟುಕಿಸುವ ತಾರೆ
ಆ ತುಂಬು ಚಂದಿರ ಹೊರಳುವಾಗ
ಕಡಲಾಗಿ ಮೊರೆಯುವುದು
ಇನ್ನೂ ಉಳಿದಿದೆ
ಖಾಲಿಯಾಗುವುದಿದೆ

**–ಕಾವ್ಯಶ್ರೀ ಹೆಚ್.**





ಚಿತ್ರ: ವಿಜಯಶ್ರೀ ಪಾಲಾಡಿ



## ದೇವರು ಅತ್ತ

ನಡು ಹಗಲು, ಸುಡು ಬಿಸಿಲು
ಜನ ಜಂಗುಳಿ ರಸ್ತೆ, ಹೆಣ್ಣಿನ
ಚೀತ್ಕಾರಕ್ಕೆ ಹಸಿರೆಲೆಗಳು
ಹಳದಿಯಾಗಿ ನೆಲಕ್ಕೆ ಉದುರಿದವು

ಈಗೀಗ ಕಡು ಕಾಮಿಗಳು
ಹಾವಾಗಿ ಸಿಕ್ಕ ಸಿಕ್ಕಲ್ಲಿ
ಕಚ್ಚಿ ವಿಷಕಾರುವ ಹೊತ್ತಿಗೆ
ಮುಂಗುಸಿ ಮಲಗಿಕೊಂಡಿತ್ತು

ಮದಗಜದ ಅಂಗಾಲಿಗೆ ಸಿಕ್ಕ ಇರುವೆ
ಮತ್ತೆ ಜೀವಸಹಿತ ಹುಡುಕಲಾದೀತೆ?
ಕಡಲ ಬಾಯಿಗೆ ಊರ ಹಳ್ಳ ಯಾವ ಲೆಕ್ಕ?

ಗಾಳಿಗೂ ಉಸಿರುಗಟ್ಟಿದೆ
ಕಾಮುಕರ ಕಾಮಕೇಳಿಗೆ !
ಮುಗಿಲ ಮೋಡಗಳ  ಕಣ್ಣೂ
ಒದ್ದೆಗೊಂಡಿವೆ ಹೆಣ್ಣಿನ
ಪಡಿಪಾಟಲಿಗೆ

ಈಗೀಗ ಶಾಲಾ ಬಸ್ಸುಗಳೂ
ಕಾಮುಕರ ಅಟ್ಟಹಾಸಕ್ಕೆ
ಜಗಲಿಯಾಗಿ, ಎಳೆಯ ಹೆಣ್ಣು
ಕುಡಿಗಳಿಗೆ ಸ್ಮಶಾನದಂತೆ
ಕಣ್ಣೆದುರು ದುತ್ತೆನ್ನುತ್ತವೆ

ಭೂಮಿ ಕಂಪಿಸಿದರೂ,
ಗಾಳಿ ಬಿರುಗಾಳಿಯಾದರೂ,
ಮಳೆ ಮರಣವಾದರೂ
ಮನುಷ್ಯ ನಿಷ್ಕರುಣಿಯಾದ ದಿನ
ದೇವರು ಅತ್ತ.



**–ಶಿ.ಕಾ. ಬಡಿಗೇರ**

---

**೧೦ನೇ ಪುಟದಿಂದ)**

ಅಧಿಕಾರಿಗಳ ಕೊಲೆ ಆಗುತ್ತದೆ. ಅದಕ್ಕೆ ಜಲಿಯನ್‌ವಾಲಾಬಾಗ್‌ನಲ್ಲಿ ಬ್ರಿಟಿಷರು ಸೇಡು ತೀರಿಸಿಕೊಳ್ಳುತ್ತಾರೆ. ಈ ಅವಳಿ ಘಟನೆಗಳು ನಡೆದ ಮೇಲೆ ಅದೇ ವರ್ಷದ ಕೊನೆಗೆ ಅಂದರೆ ೧೯೧೯ರ  ಡಿಸೆಂಬರ್ ತಿಂಗಳಲ್ಲಿ ಕಾಂಗ್ರೆಸ್ ಅಧಿವೇಶನ ಅಮೃತಸರದಲ್ಲೇ ನಡೆಯುತ್ತದೆ.

ಮೋತಿಲಾಲ್ ನೆಹರೂ ಈ ಅಧಿವೇಶನದ ಅಧ್ಯಕ್ಷರಾಗಿದ್ದರು. ಗಾಂಧಿ ಆಗ ಏನೂ ಅಷ್ಟೊಂದು ಜನಪ್ರಿಯರಾಗಿರಲಿಲ್ಲ ಮತ್ತು ಪ್ರಶ್ನಾತೀತ ನಾಯಕರೂ ಆಗಿರಲಿಲ್ಲ. ಆ ಅಧಿವೇಶನದಲ್ಲಿ ಎರಡು ನಿರ್ಣಯಗಳನ್ನು ಮಂಡಿಸಲಾಯಿತು. ಒಂದು, ಜಲಿಯನ್ ವಾಲಾ ಭಾಗ್‌ನಲ್ಲಿ ನಡೆದ ನರಹತ್ಯೆಯನ್ನು ಕಟುವಾಗಿ ಖಂಡಿಸಿ. ಇನ್ನೊಂದು, ಅದಕ್ಕಿಂತ ಮೂರು ದಿನ ಮೊದಲು ನಡೆದ ಬ್ರಿಟಿಷ್ ಅಧಿಕಾರಿಗಳ ಹತ್ಯೆಯನ್ನೂ ಕಟುವಾಗಿ ಖಂಡಿಸಿ. ಆ ಅಧಿವೇಶನದಲ್ಲಿ ಅನಿಬೆಸೆಂಟ್ ಕೂಡ ಇದ್ದರು. ಆಗ ಅನೇಕ ಮಂದಿ ಭಾವಾವೇಶದಿಂದ ಮಾತಾಡುತ್ತಾ ಮೊದಲನೆಯ ನಿರ್ಣಯ ಅತ್ಯಂತ ಸರಿಯಾದುದು ಎಂದೂ, ಎರಡನೆಯ ನಿರ್ಣಯ ಸೋಲೊಪ್ಪಿಕೊಳ್ಳುವಂತಹ ನಿರ್ಣಯ, ಆತ್ಮಾಭಿಮಾನಕ್ಕೆ ಧಕ್ಕೆ ತರುವಂತಹ ನಿರ್ಣಯ ಎಂದೂ ವಾದಿಸುತ್ತಾರೆ. ಈ ಎರಡನೆಯ ನಿರ್ಣಯವನ್ನು ಸಿದ್ಧಪಡಿಸಿದವನು ಮತ್ತು ಮಂಡಿಸಿದವನು ಭಾರತೀಯನೇ ಅಲ್ಲ ಎಂದು ವಾದಿಸುತ್ತಾರೆ. ಪ್ರತಿಯೊಬ್ಬರೂ ಈ ಎರಡನೆಯ ನಿರ್ಣಯವನ್ನು ವಿದೇಶೀ ಮಹಿಳೆಯಾದ ಅನಿಬೆಸೆಂಟ್ ಮಾಡಿದ್ದಿರಬೇಕು ಎಂಬ ಊಹೆಯಿಂದ ಮಾತಾಡುತ್ತಾರೆ. ಈ ಚರ್ಚೆ ಬಿಸಿಬಿಸಿಯಾಗಿ ನಡೆದು ಮೊದಲ ಠರಾವ್ ಅನ್ನು ಪಾಸು ಮಾಡಬೇಕೆಂದೂ ಎರಡನೇ ಠರಾವನ್ನು ರದ್ದು ಮಾಡಬೇಕೆಂದು ವಾದಿಸಿದರು.

ಅಂದಿನ ದಿನ ಮುಗಿದು ಮರುದಿನ ಅಧಿವೇಶನ ಆರಂಭ ಆಗುತ್ತಿದ್ದಂತೆಯೇ ಗಾಂಧಿಯವರು ಕಾರ್ಯಕ್ರಮ ಸೂಚಿಯಲ್ಲಿ ತಮ್ಮ ಹೆಸರಿಲ್ಲದಿದ್ದರೂ ತಮಗೆ ಮಾತಾಡಬೇಕಿದೆ ಎಂದು ಹೇಳುತ್ತಾರೆ.  ಮಾತಾಡುವುದಕ್ಕೆ ಅಧ್ಯಕ್ಷರು ಅನುಮತಿ ಕೊಡುತ್ತಾರೆ. ಗಾಂಧಿ ಹೀಗೆ ಹೇಳುತ್ತಾರೆ: **“ ನಾನು ನಿನ್ನೆ ಇಡೀ ರಾತ್ರಿ ನಿದ್ದೆ ಮಾಡಲಿಲ್ಲ. ಈ ಎರಡು ಠರಾವುಗಳ ಬಗೆಗೇನೇ ಯೋಚನೆ ಮಾಡಿದೆ. ಬಹಳ ಯೋಚನೆ ಮಾಡಿದ ನಂತರ ನನಗನ್ನಿಸಿದ್ದು ಇದು. ಈ ಎರಡು ಠರಾವುಗಳಲ್ಲಿ ಎರಡನೆಯ ಠರಾವೇ ಅಪ್ಪಟ ಭಾರತೀಯ ಠರಾವು ಮತ್ತು ಅದನ್ನು ಸಿದ್ಧಪಡಿಸಿದ್ದು ನಾನೇ. ಈ ಠರಾವನ್ನು ಅವಿರೋಧವಾಗಿ ಅನುಮೋದಿಸುವುದು ನಮ್ಮೆಲ್ಲರ ಧರ್ಮ. ಒಂದು ವೇಳೆ ಈ ಠರಾವು ಇಂದು ಪಾಸು ಆಗದಿದ್ದರೆ ನಾನು ಕಾಂಗ್ರೆಸ್ ತ್ಯಜಿಸುತ್ತೇನೆ”**

ಗಾಂಧಿ ಹೀಗೆ ಹೇಳಿ ಕುಳಿತುಕೊಳ್ಳುತ್ತಾರೆ.  ದಿಙ್ಮೂಢಗೊಂಡ ಸಭೆ ವ್ಯಾಪಕ ಸ್ವ–ವಿಮರ್ಶೆಯ ಬಳಿಕ  ಎರಡೂ ಠರಾವುಗಳನ್ನೂ ಅಂಗೀಕರಿಸುತ್ತದೆ. ಈ ಘಟನೆಯಲ್ಲಿ ನನಗನ್ನಿಸಿರೋದು ಇದು. ‘ಮೊದಲನೆಯ ಠರಾವು ಅದ್ಭುತವಾದದ್ದು ಮತ್ತು ಎರಡನೆಯ ಠರಾವು ತಿರಸ್ಕಾರಕ್ಕೆ ಯೋಗ್ಯ’ ಎಂದು ಪ್ರತಿಪಾದಿಸುವುದು ಹಿಂದುತ್ವ.. ಅದು ಹಾಗಲ್ಲ; ಎರಡನೆಯ ಠರಾವು ಅಪ್ಪಟ ಭಾರತೀಯವಾದದ್ದು’ ಎಂದು ಹೇಳುವುದು ಹಿಂದೂ ಧರ್ಮ.

ಹಿಂದುತ್ವವು ದೇಶಪ್ರೇಮವಾಗಿಯೂ, ಹಿಂದೂ ಧರ್ಮವು ದೇಶದ್ರೋಹವಾಗಿಯೂ ಕಂಡು ಬರುತ್ತಿರುವ ಇಂದಿನ ದಿನಗಳಲ್ಲಿ ಗಾಂಧಿ ಭಾಗಿಯಾಗಿರುವ ಈ ಘಟನೆ ನಮಗೊಡ್ಡುವ ಸವಾಲು ಎಂತಹುದು?



**(ತುಮಕೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಲೇಖಕ ನಿತ್ಯಾನಂದ ಬಿ. ಶೆಟ್ಟಿಯವರು ನಮ್ಮ ನಡುವಿನ ಗಂಭೀರ ರಾಜಕೀಯ–ಸಾಂಸ್ಕೃತಿಕ ಚಿಂತಕರೂ ಹೌದು)**

# ಸಾಹಿತ್ಯ–ಸಂಸ್ಕೃತಿ–ನಾಟಕ–ರಾಜಕಾರಣ ಇತ್ಯಾದಿ: ಕೆಲ ಟಿಪ್ಪಣಿಗಳು

## ನಾನು ನೋಡಿದ ಎರಡು ನಾಟಕಗಳು



**ಶಿ**ವಮೊಗ್ಗ ರಂಗಾಯಣವು ವಿಶ್ವ ರಂಗಭೂಮಿ ದಿನಾಚರಣೆಯ ಪ್ರಯುಕ್ತ ಕಳೆದ ಮಾರ್ಚ್ ೨೭ರಿಂದ ೩೧ರವರೆಗೆ ಶಿವಮೊಗ್ಗದಲ್ಲಿ 'ಪಿ. ಲಂಕೇಶ್ ರಂಗನಮನ–೨೦೧೯' ಎಂಬ ಶೀರ್ಷಿಕೆಯಡಿಯಲ್ಲಿ ಐದು ನಾಟಕಗಳ ಪ್ರದರ್ಶನವನ್ನು ಆಯೋಜಿಸಿತ್ತು. ಇವುಗಳಲ್ಲಿ ಕೊನೆಯ ಎರಡನ್ನು ಮಾತ್ರ ನಾನು ನೋಡಲು ಸಾಧ್ಯವಾಗಿದ್ದು ಈ ನಾಟಕಗಳ ಬಗ್ಗೆ ನನ್ನ ಟಿಪ್ಪಣಿಗಳು ಇಲ್ಲಿವೆ.

ಮಾರ್ಚ್ ೩೦ರಂದು ಪ್ರದರ್ಶಿತವಾದ ನಾಟಕ, ವಾಮನರಾಯ ಎಂಬುವವರು ರಚಿಸಿದ, ಮಂಜುನಾಥ ಬಡಿಗೇರರು ನಿರ್ದೇಶಿಸಿದ, ಹೆಗ್ಗೋಡಿನ ಕೆ.ವಿ. ಸುಬ್ಬಣ್ಣ ರಂಗಸಮೂಹ ಪ್ರಸ್ತುತಪಡಿಸಿದ 'ಸಂದೇಹ ಸಾಮ್ರಾಜ್ಯ'. ಪ್ರತಿಪದೆ, ಶತತಾರೆ, ಸಪ್ತಮಿ ಮುಂತಾದ ಹೆಸರಿನ ಪಾತ್ರಗಳ ಮತ್ತು ರಮಾಕಾಂತ ಎಂಬ ದೇವತೆಯ ಹೆಸರಿನಲ್ಲಿನ ದೇವಸ್ಥಾನದ ಹಿನ್ನೆಲೆಯುಳ್ಳ ಈ ನಾಟಕ ಸಮಕಾಲೀನ ಸಾಮಾಜಿಕತೆಯ ಯಾವ ವಾಸನೆಯೂ ಇಲ್ಲದಿದ್ದರೂ ಮತ್ತು ಮೂಲತಃ ಕನ್ನಡದಲ್ಲವೆನ್ನಿಸಿದರೂ, ತನ್ನ ಸರಳ ಸುಂದರ ರಂಜನಾತ್ಮಕತೆಯಿಂದ ನೋಡುಗರ ಮೆಚ್ಚುಗೆ ಗಳಿಸಿತು. ಒಂದು ಸಣ್ಣ ಪಟ್ಟಣದ ವಿಜಯರಾಯ ಎಂಬ ನಾಟಿವೈದ್ಯ ಮತ್ತು ಆತನ ಹೆಂಡತಿ ಪೂರ್ಣಿಮಾದೇವಿಯ ಅನುಕೂಲಸ್ಥ ಕುಟುಂಬ ಒಮ್ಮೆ ಪರಸ್ಪರ ಸಂಶಯದ ಸುಳಿಗೆ ಸಿಕ್ಕಿದ ಕಾರಣದಿಂದಾಗಿ ಸೃಷ್ಟಿಯಾಗುವ ಈ ನಾಟಕ ಒಂದು ಸರಳ ಪ್ರೇಮ ಪ್ರಕರಣವನ್ನೂ ಒಳಗೊಂಡು ಒಂದು ನವಿರಾದ ಹಾಸ್ಯದ ಸ್ಪರ್ಶದೊಂದಿಗೆ ಕುತೂಹಲ ಕೆರಳಿಸುತ್ತಾ ಬೆಳೆದು, ಎಲ್ಲೂ ಅತಿಗೆ ಹೋಗದೆ ಶುದ್ಧ ಲಲಿತ ಮನರಂಜನೆಯನ್ನು ಒದಗಿಸುವಲ್ಲಿ ಯಶಸ್ವಿಯಾಯಿತು. ಇದಕ್ಕೆ ಬಡಿಗೇರರು ಪಠ್ಯವನ್ನು ಹೆಚ್ಚು ರಂಗತಂತ್ರಗಳ ಭಾರವಿಲ್ಲದ ಸರಳವಾಗಿ ನಿರ್ವಹಿಸಿರುವುದು ಎಷ್ಟು ಕಾರಣವೋ ಅಷ್ಟೇ ಕಾರಣ, ಎಲ್ಲ ನಟ–ನಟಿಯರ ಪಳಗಿದ ಅಭಿನಯ ಕೌಶಲ. ಶೈಲಜಾ ಪ್ರಕಾಶ್, ಭಾಗೀರಥಿ, ಗುರುರಾಜ ಮತ್ತು ಏಸು ಪ್ರಕಾಶ್ ಅಭಿನಯ ವಿಶೇಷ ಉಲ್ಲೇಖಕ್ಕೆ ಅರ್ಹವಾದದ್ದು. ನಿರ್ದೇಶಕ ಬಡಿಗೇರರು ನಾಟಕವನ್ನು ನಿರೂಪಿಸಲು ಬಳಸಿರುವ ತಂಬೂರಿ ಪದಕಾರನ ಪಾತ್ರ ಮತ್ತು ದಾಸರ ಕೀರ್ತನೆಗಳು ಹಾಗೂ ಒಂದೆರಡು ಮಧುರ ಹಳೆಯ ಕನ್ನಡ ಚಿತ್ರಗೀತೆಗಳು ಪಠ್ಯದ ಸಾಧಾರಣತೆಯನ್ನು ಮೇಲೆತ್ತಲು ಸಹಾಯಕವಾಯಿತು. ಆದರೆ ಕೊನೆಯಲ್ಲಿ ಬಳಸಲಾದ ಕನಕದಾಸರ 'ನೀನು ಮಾಯೆಯೋ. ನಿನ್ನೊಳು ಮಾಯೆಯೋ' ಪದ ನಾಟಕ ಹೇಳಿದ ಸರಳ ಕಥೆಗೆ ಅತಿಯಾದ ವ್ಯಾಖ್ಯಾನದಂತೆ ಕೇಳಿಸಿದ್ದಂತೂ ನಿಜ.

ಈ ನಾಟಕ ನೋಡಿ ಬರುತ್ತಿದ್ದಂತೆ ಪ್ರೇಕ್ಷಕ ಸಮೂಹದ ಮಧ್ಯದಿಂದ ಕೇಳಿಬಂದ ಈ ಮಾತು ಅರ್ಧ ಸತ್ಯದ ಮಾತೆನಿಸಿದರೂ ಕುತೂಹಲಕಾರಿಯಾಗಿತ್ತು: 'ಇತ್ತೀಚಿನ ತಲೆಶಿರೋಭಾರಗಳ ಬೌದ್ಧಿಕ ನಾಟಕಗಳಿಗಿಂತ ಇವೇ ಮೇಲು!'

ಇನ್ನು ೩೧ರಂದು ಪ್ರದರ್ಶಿತವಾದದ್ದು ಕನ್ನಡದ ಹಿರಿಯ ಲೇಖಕ ಶ್ರೀನಿವಾಸ ವೈದ್ಯರ ಲಲಿತ ಪ್ರಬಂಧಗಳನ್ನು ಆಧರಿಸಿ ಬಿ.ಪಿ. ಅರುಣ್ ಸಿದ್ಧಪಡಿಸಿ, ಪ್ರಶಾಂತ್ ಹಿರೇಮಠ ಅವರು ನಿರ್ದೇಸಿದ 'ಪಾರ್ಶ್ವ ಸಂಗೀತ' ಎಂಬ ನಾಟಕ. ಪ್ರಸ್ತುತಿ ಮೈಸೂರಿನ 'ರಂಗವಲ್ಲಿ' ತಂಡ. ವೈದ್ಯರ ಬಾಲ್ಯದ ನೆನಪುಗಳ ಕಥಾನಕಕ್ಕೆ ಹಿನ್ನೆಲೆ ಒದಗಿಸಿರುವ ಅವರ ಕಾಲದ, ಅಂದರೆ ೫೦–೬೦ರ ದಶಕದ ಹಿಂದಿ ಚಿತ್ರಗೀತೆಗಳನ್ನು ಬಳಸಿಕೊಂಡು ಕಟ್ಟಲಾಗಿರುವ ಈ ನಾಟಕಕ್ಕೆ ಇಲ್ಲಿ ರಂಗದ ಮೇಲೆ ಕೇಳಿಸಲಾಗುವ ಆ ಚಿತ್ರಗೀತೆಗಳ ಮಾಧುರ್ಯವವೇ ಜೀವಾಳವಾಗಿದೆ. ಇದಕ್ಕೊಂದು ಶ್ಯಾಂ ಚಿಕ್ಕಪ್ಪನ ಪಾತ್ರದ ಸುತ್ತ ಹೆಣೆಯಲಾಗಿರುವ ಒಂದು ಕೌಟುಂಬಿಕ ಪರಿಸರ ಮತ್ತು ಕ್ಷಣವಾದರೂ



ನಮ್ಮ ಕಣ್ಣುಗಳನ್ನು ಒದ್ದೆ ಮಾಡುವಂತಹ ದುರಂತದಲ್ಲಿ ಕೊನೆಗೊಳ್ಳುವ ಒಂದು ಪ್ರೇಮ ಪ್ರಸಂಗದ ಕಥಾ ಚೌಕಟ್ಟು ಇದೆ. ಜೊತೆಗೆ ಆ ಕುಟುಂಬದ ಹಾಗೂ ಅದು ನೆಲೆಸಿರುವ ಆ ಕಾಲದ ಧಾರವಾಡದ ಸಾಂಸ್ಕೃತಿಕ ವಿವರಗಳನ್ನು ರಂಗದ ಮೇಲೆ ತಂದು ನಾಟಕಕ್ಕೆ ಅದರದ್ದೇ ಆದ ಕಥೆಯ ಆಧಾರ ಒದಗಿಸುವ ಸೃಜನಶೀಲ ಪ್ರಯತ್ನವನ್ನೂ ಇಲ್ಲಿ ಮಾಡಲಾಗಿದೆ. ಆದರೆ ಅವುಗಳ ನಿರ್ವಹಣೆಯ ಚೌಚೌತನದಿಂದಾಗಿ ನಾಟಕದ ಸಮಗ್ರತೆ ಮುಕ್ಕಾಗಿ ಪರಿಣಾಮ ಚದುರಿಹೋದಂತೆನಿಸುತ್ತದೆ.

ಇದರ ಜೊತೆಗೆ ಶಾಸ್ತ್ರಿಗಳು, ಶ್ಯಾಂ ಚಿಕ್ಕಪ್ಪ, ಬಾಲಕ ಮತ್ತು ವೃದ್ಧ ಶ್ರೀನಿವಾಸರ ಪಾತ್ರದಾರಿಗಳ ಹೊರತಾಗಿ ಬಹುಪಾಲು ನಟ ನಟಿಯರ –ಮಾತಿಲ್ಲದ ಸಮಯದಲ್ಲಿ ಜಡವಾಗಿ ಕಾಣುವ–ಯಾಂತ್ರಿಕವೆನ್ನಿಸುವ ಅಭಿನಯ ಮತ್ತು ಅಷ್ಟೇನೂ ಕಲ್ಪನಾಶೀಲತೆಯಿಲ್ಲದ ದೃಶ್ಯ ಸಂಯೋಜನೆ (ಕನಿಷ್ಟ ಹತ್ತು ಹದಿನೈದು ಪಾತ್ರಗಳ ಉಪಸ್ಥಿತಿ ಇರುವ ಒಂದೆರಡು ದೃಶ್ಯಗಳಲ್ಲಿನ ಜಡತೆಯಲ್ಲಿ ಇದು ಎದ್ದು ತೋರುತ್ತದೆ) ಈ ಮುಕ್ಕಿಗೆ ತಮ್ಮ ಕೊಡುಗೆಯನ್ನು ಸಲ್ಲಿಸಿವೆ. ಅಲ್ಲದೆ ಗೀತೆಗಳ ಲಯಕ್ಕೆ ಹೆಜ್ಜೆ ಹಾಕುವ ಆರಂಭದ ಒಂದೆರಡು ದೃಶ್ಯಗಳ ಹೊರತಾಗಿ ಮಿಕ್ಕಂತೆ ಹಾಡುಗಳ ಇಂಪಿಗೆ ಭಂಗ ತರುವ ರೀತಿಯಲ್ಲಿ ರಂಗದ ಮೇಲಿನ ಸಮೂಹ ನೃತ್ಯದ ದಾಂಧಲೆಗಳು ಈ ನಾಟಕ ನಿರ್ಮಾಣದ ಹಿಂದಿನ ಉದ್ದೇಶವನ್ನೇ ಅನುಮಾನಾಸ್ಪದಗೊಳಿಸುತ್ತದೆ. ಸಂಗೀತ ಮತ್ತು ರಂಗ ಸಜ್ಜಿಕೆ ಇದಕ್ಕೆಲ್ಲ ತಕ್ಕಂತಿದೆ ಎಂದಷ್ಟೇ ಹೇಳಿದರೆ ಸಾಕೆಂದು ಕಾಣುತ್ತದೆ.

ನಾಟಕ ನೋಡಿದ ನಂತರ ಒಟ್ಟಾರೆ ನನಗನ್ನಿಸಿದ್ದು, ವೈದ್ಯರ ಬರಹಗಳನ್ನು ಹಳೇ ಹಿಂದಿ ಚಿತ್ರಗೀತೆಗಳನ್ನು ಕೇಳುತ್ತಾ ಓದಿದಾಗ ಆಗುವ ಅನುಭವವೇ ಹೆಚ್ಚು ಆನಂದದಾಯಕವೆನ್ನಿಸೀತು. ಅಂದಹಾಗೆ ಇಲ್ಲಿ ನಿರೂಪಿತವಾಗುವ ಧಾರವಾಡದ ಸಾಂಸ್ಕೃತಿಕ ಲೋಕದಿಂದ ಬೇಂದ್ರೆ ಕಾಣೆಯಾಗಿರುವುದೇಕೆಂದು ಕೇಳಿಕೊಂಡರೇ ಈ ನಾಟಕದ ಕಟ್ಟಡದಲ್ಲಿನ ಕಂಡೂ ಕಾಣದಂತಿರುವ ಬಿರುಕು ಕಂಡೀತು.


**ಕೊನೆಯದಾಗಿ**: ಶಿವಮೊಗ್ಗ ರಂಗಾಯಣದ ತಂಡಕ್ಕೆ ಒಂದು ದುಶ್ಚಟ ಅಂಟಿಕೊಂಡಂತಿದೆ. ಇದರ ಸದಸ್ಯರು ಪ್ರೇಕ್ಷಕರ ಮಧ್ಯೆ ಕೂತು ಚಪ್ಪಾಳೆ–ಶಿಳ್ಳೆಗಳ ಮೂಲಕ ಪ್ರದರ್ಶನವನ್ನು ಉತ್ತೇಜಿಸುವ ಕೃತಕ ಪ್ರಯತ್ನವನ್ನು ನಿಲ್ಲಿಸಿದರೆ ಜನ ನಾಟಕಗಳನ್ನು ತಮ್ಮದೇ ಸಹ–ಅನುಭೂತಿಯೊಂದಿಗೆ ನೋಡಲು ನೆರವಾಗಬಹುದು.

## ಅಹಿಂದ ಕಥೆಗಾರಿಕೆ: ಇನ್ನೊಂದೆರಡು ಮಾತುಗಳು

**ಕ**ಳೆದ ಸಂಚಿಕೆಯ ಈ ಟಿಪ್ಪಣಿಗಳಲ್ಲಿ ಅಹಿಂದ ಕಥೆಗಾರರನ್ನು ಕುರಿತ ಸಂಶೋಧನೆಯ ಬಗ್ಗೆ ನಾನು ಬರೆದ ಮಾತುಗಳ ಬಗ್ಗೆ ನನ್ನ ಒಂದಿಬ್ಬರು ಗೆಳೆಯರು, ಅಂಥಹ ಸಂಶೋಧನೆಯಲ್ಲಿ ತಪ್ಪೇನಿದೆ ಎಂದು ಕೇಳಿದ್ದಾರೆ. ಈ ಪ್ರಶ್ನೆಯೇ ನಮ್ಮ ಸಾಹಿತ್ಯ ಚರ್ಚೆಗಳು ಹೇಗೆ ಅಪ್ಪಟ ಜಾತಿ ಚರ್ಚೆಗಳಾಗಿ ಮೈಮರೆತು ತಮ್ಮ ಸಾಹಿತ್ಯ ಕೇಂದ್ರವನ್ನು ಕಳೆದಿಕೊಂಡಿವೆ ಎಂಬುದನ್ನು ಸೂಚಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಮೊದಲಾಗಿ ಅಹಿಂದ ಎನ್ನುವುದು ಓರ್ವ ರಾಜಕಾರಣಿ ತನ್ನ ತತ್ಕಾಲೀನ ರಾಜಕೀಯ ಭವಿಷ್ಯದ ದೃಷ್ಟಿಯಿಂದ ಮಾಡಿಕೊಂಡ ಒಂದು ಜಾತಿ ಸಂಯೋಜನೆಯೇ ಹೊರತು ಅದೊಂದು ಸುಸಂಗತ ಚಾರಿತ್ರಿಕ ಅಥವಾ ಸಾಂಸ್ಕೃತಿಕ ರಚನೆಯಲ್ಲ. ಇದನ್ನು ಅರಿಯದೆ ಅದನ್ನು ಹಾಗೇ ಒಂದು ಸಾಹಿತ್ಯ ಸಂವೇದನೆಯ ವಿಶಿಷ್ಟ ವಿಂಗಡಣೆಯಾಗಿ ಅಧ್ಯಯನಕ್ಕಾಗಿ ಸ್ವೀಕರಿಸುವುದು ಅಪ್ಪಟ ರಾಜಕೀಯ ಪ್ರಣೀತವೆನ್ನಿಸಿಕೊಳ್ಳುವುದೇ ಹೊರತು ಸಾಹಿತ್ಯ ಸಂಶೋಧನೆ ಎನಿಸಿಕೊಳ್ಳುವುದಿಲ್ಲ ಎಂಬುದೇ ನನ್ನ ಅಭಿಪ್ರಾಯವಾಗಿದೆ ಎಂದು ಈ ಗೆಳೆಯರಿಗೆ ತಿಳಿಸಬಯಸುತ್ತೇನೆ.

–ಡಿಎಸ್ನೆನ್

# ದಲೈಲಾಮಾ ಅವರ ಬುದ್ಧವಾಣಿ



ಇಂದು ಜಗತ್ತಿನಲ್ಲಿ ಬೌದ್ಧ ಧರ್ಮ ಅತ್ಯಂತ ಜನಪ್ರಿಯವಾಗಿರುವುದು ಅದರ ಟಿಬೆಟ್ಟಿನ ಆವೃತ್ತಿಯಲ್ಲಿ. ಟಿಬೆಟ್ಟಿನ ಆವೃತ್ತಿ ಎಂದರೆ ನಾಗಾರ್ಜುನ ಪ್ರಣೀತ ಮಹಾಯಾನದಿಂದಲೇ ಸ್ಫೂರ್ತಿ ಪಡೆದ ವಜ್ರಯಾನ. ಬೌದ್ಧ ಧರ್ಮವು ತನ್ನ ವಿವಿಧ ಆವೃತ್ತಿಗಳಲ್ಲಿ ಭಾರತದ ಹೊರಗೆ, ವಿಶೇಷವಾಗಿ ಚೀನಾ, ಮಂಗೋಲಿಯಾಗಳನ್ನೊಳಗೊಂಡ ಒಳ ಏಷ್ಯಾದಲ್ಲಿ. ೮ನೇ ಶತಮನಾದಲ್ಲಿಯೇ ಶಾಂತರಕ್ಷಿತ ಮತ್ತು ಪದ್ಮಸಂಭವ ಎಂಬ ಇಬ್ಬರು ಬೌದ್ಧ ಗುರುಗಳು ಮಹಾಯಾನ ಬೌದ್ಧ ತತ್ವವನ್ನು, ವಿಶೇಷವಾಗಿ ವಜ್ರಯಾನವನ್ನು ಹರಡಿದ್ದರು. ಅದು ಮಧ್ಯೆ ರಾಜಕೀಯ ಕಾರಣಗಳಿಗಾಗಿ ನಶಿಸಿದ್ದಾಗ ೧೦ನೇ ಶತಮಾನದಲ್ಲಿ ಅತಿಶ ಎಂಬ ಭಾರತದ ಬೌದ್ಧ ಸಂನ್ಯಾಸಿಯ ನೆರವಿನಿಂದ ಟಿಬೆಟ್‌ನ ಲ್ಹಾಸಾದಲ್ಲಿ ಲೌಕಿಕ ಮತ್ತು ಆಧ್ಯಾತ್ಮಿಕ ವಲಯಗಳೆರಡರ ಒಡೆಯರಾಗಿದ್ದ ದಲೈಲಾಮಾ (ಅಂದರೆ ಮಹಾಗುರು) ಪರಂಪರೆ ಇದನ್ನು ತಮ್ಮದೇ ರೀತಿಯಲ್ಲಿ ಬೆಳೆಸಿ ಪೋಷಿಸುತ್ತಾ ಬಂದಿತು.. ೧೯೫೦ರಲ್ಲಿ ಚೀನಾ ಜನತಾ ಗಣರಾಜ್ಯ ಟಿಬೆಟ್‌ನ್ನು ಆಕ್ರಮಿಸಿಕೊಂಡು ಅದರ ಧರ್ಮ ಸಂಸ್ಕೃತಿಗಳಿಗೆ ಭಂಗ ತರತೊಡಗಿದಾಗ, ಆಗ ತಾನೇ ಅಧಿಕಾರಕ್ಕೆ ಬಂದಿದ್ದ ೧೪ನೇ ದಲೈಲಾಮಾ ತಮ್ಮ ಕೊಲೆಗೆ ಸಂಚುನಡೆಯುತ್ತಿದೆ ಎಂಬ ಸುದ್ದಿಯನ್ನಾಧರಿಸಿ ೧೯೫೯ರ ಏಪ್ರಿಲ್‌ನಲ್ಲಿ ತಮ್ಮ ಆಪ್ತ ಅನುಯಾಯಿಗಳೊಂದಿಗೆ ಹಿಮಾಲಯವನ್ನು ದಾಟಿ ಭಾರತಕ್ಕೆ ಬಂದು ಭಾರತದ ಸರ್ಕಾರದ ಆಶ್ರಯ ಪಡೆದರು. ಹಿಮಾಚಲ ಪ್ರದೇಶದ ಧರ್ಮಶಾಲಾದಲಿ ತಮ್ಮ ಅನುಯಾಯಿಗಳೊಂದಿಗ್ಗೆ ನೆಲೆಗೊಂಡ ದಲೈಲಾಮಾ ಅವರು ಅಲ್ಲಿಯೇ ದೇಶಭ್ರಷ್ಟ ಟಿಬೆಟ್ ಸರ್ಕಾರವೊಂದನ್ನು ಸ್ಥಾಪಿಸಿ ಚೀನಾದೊಡನೆ ಒಂದು ಸ್ವಾಯತ್ತ ಟಿಬೆಟ್ ರಾಜ್ಯಕ್ಕಾಗಿ ನಿರಂತರ ಸಂಧಾನಗಳಲ್ಲಿತೊಡಗಿದ್ದಾರೆ.

ತಮ್ಮ ಪರಂಪರೆಯ ಮುಂದುವರಿಕೆಯಾಗಿ ಇಂದಿನ ದಲೈಲಾಮಾ ಬುದ್ಧನ ಧರ್ಮವನ್ನು ತಾವು ಕಂಡುಕೊಂಡ ರೀತಿಯಲ್ಲಿ ಜಗತ್ತಿನಾದ್ಯಂತ–ವಿಶೇಷವಾಗಿ ಆಧುನಿಕ ಬದುಕಿನಿಂದ ಆಯಾಸಗೊಂಡಿರುವ ಪಶ್ಚಿಮದ ದೇಶಗಳ ಜನಸಮುದಾಯದ ಮಧ್ಯೆ–ಹರಡುತ್ತಿದ್ದಾರೆ.. ಅದು ಈ ಸೃಷ್ಟಿ ಸದಾ ಬದಲಾಗುತ್ತಿದ್ದು, ಆ ಕಾರಣದಿಂದಾಗಿಯೇ ಅದನ್ನು ಶಾಶ್ವತ ರೂಪದಲ್ಲಿ ಗ್ರಹಿಸಲು, ಪಡೆದುಕೊಳ್ಳಲು ಯತ್ನಿಸುವ ಮನುಷ್ಯ ಅದರಲ್ಲಿ ವಿಫಲನಾಗಿ ಅಶಾಂತನಾಗಿರುವುದು. ಮತ್ತು ಆ ಅಶಾಂತಿಯನ್ನು ತನ್ನನ್ನು ತಾನು ಅರಿತುಕೊಳ್ಳುವ ಮೂಲಕ ಪರಿಹರಿಸಿಕೊಳ್ಳಬಹುದು ಹಾಗೂ ಆ ಅರಿವಿಗೆ ಸಾಧನ, ದಯೆ ಅಥವಾ ಕರುಣಾ ಎಂಬ ಬುದ್ಧನ ಮೂಲ ಸತ್ಯವನ್ನೇ ಆಧರಿಸಿದ್ದು. ಆ ಕರುಣಾವನ್ನು ಸಿದ್ಧಿಸಿಕೊಳ್ಳುವ ಮಾರ್ಗವಷ್ಟೇ ಟಿಬೆಟ್‌ನ ಈ ವಜ್ರಯಾನದ ವಿಶಿಷ್ಟತೆಯಾಗಿದೆ. ಅದು ಮನಸ್ಸಿನ ವಿವಿಧ ವಲಯಗಳ ಅಧಿಪತಿಗಳೆಂದು ಗುರುತಿಸುವ ಅವಲೋಕಿತೇಶ್ವರ, ಮಂಜುಶ್ರೀ, ತಾರಾ, ಸಮಂತಭದ್ರ, ವಜ್ರಪಾದ ಮುಂತಾದ ದೇವತೆಗಳ ಸಾಕ್ಷಾತ್ಕಾರಕ್ಕಾಗಿ ವಿವಿಧ ಮಂಡಲ ರಚನೆ, ಧ್ಯಾನ ಮತ್ತು ಮಂತ್ರಜಪ ಇತ್ಯಾದಿ ಮಾರ್ಗಗಳನ್ನು ಅನುಸರಿಸುತ್ತದೆ. ಗುರುವಿನ ಆಪ್ತ ವಲಯದಲ್ಲಿ ಮಾತ್ರ ಕಲಿಯಬಹುದಾದ ಈ ತ್ವರಿತ ಸಾಧನಾ ಮಾರ್ಗಗಳನ್ನು ಅನುಸರಿಸುವುದರಿಂದಲೇ ಅದನ್ನು ತಂತ್ರವಾದ ಅಥವಾ ತಾಂತ್ರಿಕ ಮಾರ್ಗ ಎಂದೂ ಗುರುತಿಸಲಾಗುತ್ತದೆ. ಅದೇನೇ ಇರಲಿ, ದಲೈಲಾಮಾ ಅವರು ಸಾಮಾನ್ಯ ಜನರಿಗೆ ಅರ್ಥವಾಗುವ ಭಾಷೆಯಲ್ಲಿ ಹೇಳಿರುವ ಕೆಲ ಆಯ್ದ ಉಕ್ತಿಗಳನ್ನು ಇಲ್ಲಿ ಆಯ್ದು ನೀಡಿದ್ದೇವೆ.–ಸಂ.

–**ಈ** ಅಸ್ತಿತ್ವದಲ್ಲಿ ಯಾವುದೂ ಅಳಿಯುವುದಿಲ್ಲ, ಯಾವುದೂ ಬದಲಾಗದೆ ಉಳಿಯುವುದಿಲ್ಲ.

–ಯಾವುದೂ ಸ್ಥಿರವಾದದ್ದೂ, ಶಾಶ್ವತವಾದದ್ದೂ ಇಲ್ಲ. ಹಾಗಾಗಿ ಮತ್ತೆ ಮತ್ತೆ ಹುಟ್ಟಬಹುದಾದ ಆತ್ಮವೆಂಬುದು ಇಲ್ಲ.

–ಪುನರ್ಜನ್ಮ ಅಂದರೆ ದೀಪದಿಂದ ದೀಪ ಹೊತ್ತಿಕೊಂಡಂತೆ. ಹೊಸ ಜ್ವಾಲೆ ಹಳೆಯ ಜ್ವಾಲೆಯ ಪುನರಾವೃತ್ತಿಯೂ ಅಲ್ಲ, ಹೊಚ್ಚಹೊಸ ಜ್ವಾಲೆಯೂ ಅಲ್ಲ. ಗುರುವಿನ ಮಂತ್ರ ಶಿಷ್ಯನ ಕಂಠದ ಮೂಲಕ ಪುನರುತ್ಪತ್ತಿಯಾದಂತೆ ಅದು ಅರಿವಿನ ಪುನರುತ್ಪತ್ತಿ.

–ಇರುವುದು ಸದಾ ಹಾರುವ ಮನಸ್ಸು. ಅದರ ಈ ಗುಣವೇ ದುಃಖದ ಮೂಲ.

–ದುಃಖಕ್ಕೆ ಸಿಕ್ಕಿಹಾಕಿಕೊಂಡ ಕದಡಿದ ಮನಸ್ಸು ಮತ್ತೆ ಪುನರುತ್ಪತ್ತಿಯ ಚಕ್ರಕ್ಕೆ ಸಿಲುಕಿಕೊಳ್ಳುತ್ತದೆ.

–ಹಾರುವ ಮನಸ್ಸನ್ನು ನಿಶ್ಚಲಗೊಳಿಸುವುದೇ ಧರ್ಮ.

–ಮನಸ್ಸನ್ನು ನಿಶ್ಚಲಗೊಳಿಸಿದಾಗ ಗೊತ್ತಾಗುವ ಸತ್ಯವೆಂದರೆ, ಅಸ್ತಿತ್ವ ಎನ್ನುವುದು ಮಾನಸಿಕ ರಚನೆ ಮಾತ್ರವಾಗಿದೆ ಎಂಬುದು.

–ಮನಸ್ಸು ನಿಶ್ಚಲವಾಗುವುದು ಎಂದರೆ ಮನಸ್ಸು ಕರಗಿ ಇಲ್ಲವಾಗುವುದು. ಅಸ್ತಿತ್ವವು ನಾಮ ರೂಪಗಳನ್ನು ಕಳೆದುಕೊಂಡು ನಿರ್ಗುಣವಾಗುವುದು.

–ಹೀಗೆ ನಿರ್ಮಲವಾದ ಮನಃಸ್ಥಿತಿಯೇ ನಿರ್ವಾಣ.

–ಸರ್ವ ಜೀವ ದಯೆಯೇ ನಿರ್ವಾಣಕ್ಕೆ ದಾರಿ.

–ನೀವು ಸದಾ ಆನಂದದಲ್ಲಿರಬೇಕಾದರೆ ಸದಾ ದಯಾವಂತರಾಗಿರಿ.

–ನಿಜವಾದ ಧರ್ಮಕ್ಕೆ ಹೃದಯವೇ ದೇವಾಲಯ, ದಯೆಯೇ ತತ್ವ.

–ನಿಜವಾದ ದಯೆ ಬರೀ ಭವ್ಯ ತತ್ವವಾಗುಳಿಯದೆ ಕ್ಷಮಾ ರೂಪದಲ್ಲಿಯೂ ದಿನನಿತ್ಯದ ನಮ್ಮ ವರ್ತನೆಗಳಲ್ಲಿ ಸಾಕಾರವಾಗಬೇಕು.

–ಸಂತೋಷ ಅಥವಾ ಆನಂದ ಅಥವಾ ನೆಮ್ಮದಿ ಎನ್ನುವುದು ಎಲ್ಲೋ ಸಿಗುವ ಅಥವಾ ಯಾರೋ ಕೊಡಬಹುದಾದ ಸಿದ್ಧ ವಸ್ತುವಲ್ಲ. ಅದನ್ನು ನಿಮ್ಮ ವರ್ತನೆಗಳ ಮೂಲಕ ಪಡೆಯಬೇಕಾಗುತ್ತದೆ.

–ಧರ್ಮಾಚರಣೆ ಅಥವಾ ಧ್ಯಾನವಿಲ್ಲದೆ ಮಾನವತೆ ಉಳಿಯಬಲ್ಲುದು. ಆದರೆ ದಯೆ ಮತ್ತು ಕ್ಷಮೆಗಳಿಲ್ಲದೆ ಅದು ಉಳಿಯಲಾರದು.

–ಇನ್ನೊಬ್ಬರು ಸಂತೋಷದಿಂದರಬೇಕೆಂದಿದ್ದರೆ ದಯೆಯಿಂದಿರಿ. ನೀವೂ ಸಂತೋಷದಿಂದರಬೇಕಾದರೂ ದಯೆಯಿಂದಿರಿ.

–ಮನಸ್ಸು ಪ್ಯಾರಾಚೂಟ್‌ನಂತೆ. ಅದು ಬಿಚ್ಚಿಕೊಂಡಾಗಲೇ ಅದರ ಅತ್ಯುತ್ತಮ ಪ್ರಯೋಜನ ದೊರೆಯುವುದು.

–ನಿಮಗೆ ನೀವು ಬಯಸಿದ್ದು ಸಿಗದಿರುವುದು ಕೆಲವೇಳೆ ನಿಮ್ಮ ಅದೃಷ್ಟದ ಬಾಗಿಲು ತೆಗೆಯಲು ಕಾರಣವಾಗಬಹುದು.

–ಕಷ್ಟ ಮತ್ತು ಪ್ರತಿಕೂಲತೆಗಳು ಸಹನೆ ಬೆಳೆಸಿಕೊಳ್ಳಲು ಅಗತ್ಯ. ಸಿಟ್ಟು ಮತ್ತು ದ್ವೇಷಗಳಂತಹ ಋಣಾತ್ಮಕ ಭಾವನೆಗಳನ್ನು ಕಳೆದುಕೊಳ್ಳಲು ಈ ಸಹನೆಯ ಪೋಷಣೆ ಅಗತ್ಯ. ಎಲ್ಲ ಸರಿಯಾಗಿ ನಡೆದುಬಿಟ್ಟರೆ ಇದು ಬೆಳೆಯುವುದಿಲ್ಲ. ಸಹನೆಯನ್ನು ನಾವು ಅಂತರ್ಗತಗೊಳಿಸಿಕೊಂಡುಬಿಟ್ಟರೆ ನಮ್ಮಿಂದ ದಯೆ ಎಂಬುದು ತಂತಾನೇ ಹರಿಯುತ್ತದೆ.

–ದಯೆ ಎನ್ನುವುದು ತಾನೂ ಶಾಂತಿಯಿಂದಿದ್ದು ಇತರರೂ ಶಾಂತಿಯಿಂದರಬೇಕೆಂಬ ಮನುಷ್ಯತ್ವದ ಮೂಲಬಯಕೆಯ ಅಭಿವ್ಯಕ್ತಿ.

–ಮನುಷ್ಯ ಭವಿಷ್ಯದ ಬಗ್ಗೆಯೇ ಆತಂಕಿತನಾಗಿ ಆ ಆತಂಕಗಳನ್ನು ನಿವಾರಿಸಿಕೊಳ್ಳುವಲ್ಲೇ ಸದಾ ವ್ಯಸ್ತನಾಗಿ ವರ್ತಮಾನದಲ್ಲಿ ಇರುವುದನ್ನೇ ಮರೆತಿರುವುದೇ ಅವನ ನಿಜವಾದ ದುರಂತ.

–ಅಯ್ಯೋ, ನಾನೆಷ್ಟರವನು, ನನ್ನಿಂದೇನಾಗುವುದು ಎನ್ನುವವರು ಒಂದು ರಾತ್ರಿ ಸೊಳ್ಳೆ ಪರದೆ ಇಲ್ಲದೆ ಮಲಗಿ ನಂತರ ಮಾತಾಡಲಿ!

–ಪ್ರತಿ ದಿನ ಒಂದಷ್ಟು ಕಾಲ ಒಬ್ಬರೇ ಇರಲು ಪ್ರಯತ್ನಿಸಿ.

–ಒಳ್ಳೆಯ ನಿದ್ರೆಯೇ ಅತ್ಯುತ್ತಮ ಧ್ಯಾನ.


–ಮೌನವೇ ಕೆಲ ಬಾರಿ ಜಟಿಲ ಸಮಸ್ಯೆಗಳಿಗೆ ಅತ್ಯುತ್ತಮ ಉತ್ತರವನ್ನು ಒದಗಿಸಬಲ್ಲುದು.

–ಎಲ್ಲ ಬುದ್ಧರ, ಬೋಧಿಸತ್ವರ ಗುರಿ ಎಲ್ಲರಲ್ಲೂ ದಯೆಯನ್ನು ಬೆಳೆಸಿ ಎಲ್ಲರೊಂದಿಗೆ ತಾವೂ ಆನಂದದಿಂದ ತುಂಬಿಕೊಂಡ ನಿರ್ವಾಣ ಸಾಧಿಸುವುದು.

# ಪುಸ್ತಕಾವಲೋಕನ

ಪು: **ಭಾರತದ ಸಂಸತ್ತು** ಲೇ: **ಡಾ. ಬಿ.ಎಲ್. ಶಂಕರ್** ಮತ್ತು **ವಲೇರಿಯನ್ ರೊಡ್ರಿಗಸ್** ಕನ್ನಡಕ್ಕೆ : **ಪ್ರೊ. ಜಿ.ಎಸ್. ಸದಾನಂದ** ಪ್ರ: **ಅಂಕಿತ ಪುಸ್ತಕ,** ಬೆಂಗಳೂರು, ಪು: **೬೮೦** ಬೆಲೆ: **ರೂ. ೮೦೦/-**

## ನಮ್ಮ ಸಂಸತ್ತು ನಡೆದುಬಂದ ದಾರಿಯ ಸಮಗ್ರ ಪರಿಚಯ



**ಭಾ**ರತವು ರಾಜಕೀಯವಾಗಿ ಸ್ವತಂತ್ರಗೊಂಡು ಎಪ್ಪತ್ತೆರಡು ವರ್ಷಗಳು ಕಳೆದರೂ ನಾವು ಅಳವಡಿಸಿಕೊಂಡಿರುವ ರಾಜಕೀಯ ವ್ಯವಸ್ಥೆಯನ್ನು ಕುರಿತ ಕನಿಷ್ಠ ಜ್ಞಾನವಾದರೂ ನಮ್ಮ ವಿದ್ಯಾವಂತ ವರ್ಗಕ್ಕೆ ಇದೆ ಎಂದು ಹೇಳಲಾಗದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕೃತಿ ಮಹತ್ವ ಪಡೆಯುತ್ತದೆ. ನಮ್ಮ ಸಂಸತ್ತು ರೂಪುಗೊಂಡ ರೀತಿ, ನಡೆದುಬಂದ ದಾರಿ, ಎದುರಿಸಿದ ಸವಾಲುಗಳು, ಅದರ ರಚನೆ ಮತ್ತು ಧೋರಣೆಗಳ ವಿಚಾರದಲ್ಲಿ ಅದು ಒಳಗಾದ ಬದಲಾವಣೆಗಳು, ಅದರ ಸಾಧನೆ ಹೀಗೆ ವಿವರವಾಗಿ ವಿಶ್ಲೇಷಣಾತ್ಮಕವಾಗಿ ನಮ್ಮ ಸಂಸತ್ತನ್ನು ವಿವಿಧ ಆಯಾಮಗಳಲ್ಲಿ ಪರಿಚಯಿಸುವ ಕೃತಿಯಿದು.


. ಆರು ನೂರಕ್ಕೂ ಹೆಚ್ಚು ಪುಟಗಳಲ್ಲಿ, ಎಂಟು ಅಧ್ಯಾಯಗಳಲ್ಲಿ ಹರಡಿರುವ ಈ ಬೃಹತ್ ಅಧ್ಯಯನ ೫೦ರಿಂದ ೯೦ರ ದಶಕಗಳ ನಡುವೆ ಸಂಸತ್ತಿನ ಸಾಮಾಜಿಕ ಸ್ವರೂಪದಲ್ಲಿನ ಬದಲಾವಣೆ, ೧೯೫೦ರಿಂದ ಇತ್ತೀಚಿನವರೆಗೆ ಸಂಸತ್ತಿನ ಚಿಂತನೆಗಳಲ್ಲಾಗಿರುವ ಸ್ಥಿತ್ಯಂತರ, ಸದನದಲ್ಲಿ ಸಂವಹನದ ಮಾಧ್ಯಮವಾಗಿ ಬಳಕೆಯಾದ ಭಾಷೆಯ ಬಗೆಗಿನ ಜಿಜ್ಞಾಸೆ, ಸಂಸತ್ತು ಪ್ರತಿನಿಧಿಸಿದ ರಾಷ್ಟ್ರೀಯ ಅಸ್ಮಿತೆಯ ಸ್ವರೂಪ ಕ್ರಮೇಣ ವಿವಿಧ ಭಾಷಿಕ, ಪ್ರಾದೇಶಿಕ ಅಸ್ಮಿತೆಗಳ ಕಡೆಗೆ ಸ್ಥಿತ್ಯಂತರಗೊಂಡ ರೀತಿ; ಹಾಗೆಯೇ ನ್ಯಾಯಾಂಗ ಮತ್ತು ಸಂಸತ್ತಿನ ನಡುವಿನ ಸಂಬಂಧಗಳಲ್ಲಿ ಉಂಟಾದ ಪಲ್ಲಟ, ಮೇಲಾಟಗಳು ಮೊದಲ ಆರು ಅಧ್ಯಾಯಗಳಲ್ಲಿ ವಿಶ್ಲೇಷಣೆಗೊಂಡಿವೆ. ಏಳನೆಯ ಅಧ್ಯಾಯದಲ್ಲಿ ರಾಜ್ಯಸಭೆಯ ರೂಪುರೇಷೆ ಅದರ ಅಗತ್ಯದ ಸಮರ್ಥನೆ ವಿವಿಧ ದೃಷ್ಟಿಕೋನಗಳ ವಿಶ್ಲೇಷಣೆ ಇದೆ. ಎಂಟನೆಯ ಅಧ್ಯಾಯವು ಕಾಲಕ್ರಮದಲ್ಲಿ ಸದನವು ಕಾರ್ಯ ನಿರ್ವಹಿಸುತ್ತಾ ಬಂದ ರೀತಿಯನ್ನು ವಿಶ್ಲೇಷಿಸುತ್ತದೆ. ಈ ಎಂಟು ಅಧ್ಯಾಯಗಳಿಗೆ ಪೂರಕವಾಗಿ ಇಲ್ಲಿರುವ ಕೋಷ್ಟಕಗಳು, ಅಡಿ ಟಿಪ್ಪಣಿಗಳು ಕುತೂಹಲಕರವೂ ಮತ್ತು ಉಪಯುಕ್ತವೂ ಆದ ಮಾಹಿತಿಗಳನ್ನು ನೀಡುತ್ತವೆ. ಸ್ವಾತಂತ್ರ ಪೂರ್ವದ, ಸ್ವಾತಂತ್ರ್ಯೋತ್ತರದ ಪ್ರಾರಂಭದ ದಿನಗಳ ರಾಜಕಾರಣವು ವಿಶಾಲ ದೃಷ್ಟಿಕೋನವನ್ನು ಪ್ರತಿನಿಧಿಸಿದರೆ ಮುಂದಿನ ದಿನಗಳಲ್ಲಿ ಕಂಡುಬರುವ ಭಾಷಿಕ, ಪ್ರಾದೇಶಿಕ ಹಿತಾಸಕ್ತಿಗಳಿಂದ ಹರಡಿಹೋದ ಪರಿಯನ್ನು ಒಂದು ಋಣಾತ್ಮಕ ದೃಷ್ಟಿಯಿಂದಲೇ ನೋಡಲಾಗುತ್ತದೆ. ಆದರೆ ಈ ಪಲ್ಲಟ ಪ್ರಾದೇಶಿಕ ಸಂಗತಿಗಳಿಗೆ ಒತ್ತು ನೀಡುತ್ತಾ ದೇಶದ ವೈವಿಧ್ಯತೆಯ ಪೋಷಣೆಗೆ ಸಹಕಾರಿಯಾದ ಧನಾತ್ಮಕ ಆಯಾಮವೊಂದನ್ನು ಹೊಂದಿರುವುದು ಕೂಡ ನಮಗೆ ಇಲ್ಲಿನ ಅಧ್ಯಯನದಿಂದ ಗೋಚರವಾಗುತ್ತದೆ. ಈ ರಾಜ್ಯಶಾಸ್ತ್ರದ ಕೃತಿಯನ್ನು ಆಧುನಿಕ ಭಾರತದ ರಾಜಕೀಯ ಇತಿಹಾಸದ ದಾಖಲೆಯನ್ನಾಗಿ ಕೂಡ ನೋಡಬಹುದು. ಹಾಗೇ ಇಲ್ಲಿನ ಅಂಕಿ ಅಂಶಗಳನ್ನು ಬಳಸಿ ಈ ಕೃತಿಗಿರುವ ಸಮಾಜಶಾಸ್ತ್ರೀಯ ಆಯಾಮವನ್ನೂ ಶೋಧಿಸಬಹುದು

ಇಂದಿನ ಸಂಸದರ ಕುಸಿಯುತ್ತಿರುವ ನೈತಿಕತೆ, ಸಾಮಾಜಿಕ ಬದ್ಧತೆ, ರಾಜಕೀಯ ಜ್ಞಾನದ ಕಾರಣಗಳಿಗಾಗಿ ಸಂಸತ್ತು ಕಾರ್ಯಾಂಗದ ನಿಯಂತ್ರಣಕ್ಕೆ ಒಳಗಾಗುತ್ತಾ ಅದು ಕ್ರಮೇಣ ಅವನತಿಯ ಹಾದಿ ಹಿಡಿದಿರುವುದು ಸಾಮಾನ್ಯರಿಗೂ ಗೋಚರವಾಗುತ್ತಿದೆ. ಅದರೂ ಈ ಸಂಸ್ಥೆಗೆ ಪರ್ಯಾಯ ಹುಡುಕುವ ಅಗತ್ಯವಿಲ್ಲ. ದಕ್ಷತೆಯೊಂದೇ ಸಂಸತ್ತಿನ ಮಾನದಂಡವಾಗಬಾರದು. ಅದರ ಬದಲಾಗುತ್ತಿರುವ ಪ್ರಾತಿನಿಧ್ಯದ ಸ್ವರೂಪ ಪ್ರತಿಬಿಂಬಿಸುವ ವಿವಿಧ ಹಿತಾಸಕ್ತಿಗಳನ್ನೂ ನಾವು ಪರಿಗಣಿಸಬೇಕು ಎನ್ನುವ ಈ ಕೃತಿ, ಅದರ ಕೆಲವು ದೋಷಗಳನ್ನು ಸರಿಪಡಿಸಿಕೊಂಡು ಮುಂದುವರಿಸಬಹುದು ಎಂದು ಅಭಿಪ್ರಾಯಪಡುತ್ತದೆ. ನಮ್ಮ ಕೆಲವೇ ಕೆಲವು ಅಧ್ಯಯನಶೀಲ ರಾಜಕಾರಣಿಗಳಲ್ಲೊಬ್ಬರಾದ ಬಿ.ಎಲ್. ಶಂಕರ್ ಖ್ಯಾತ ರಾಜ್ಯಶಾಸ್ತ್ರಜ್ಞ ಪ್ರೊ॥ ವೆಲೆರಿಯನ್ ರಾಡ್ರಿಗಸ್ ಅವರೊಡಗೂಡಿ ಇಂಗ್ಲಿಷ್‌ನಲ್ಲಿ ರಚಿಸಿರುವ ಈ ಕೃತಿಯು ಯಾವುದೇ ತಾತ್ವಿಕ ಭಾರಗಳಿಲ್ಲದೆ ಸುಳಭವಾಗಿ ಓದಿಸಿಕೊಂಡು ಹೋಗುತ್ತದೆ. ಇದಕ್ಕೆ ಪ್ರೊ॥ ಜಿ.ಎಸ್. ಸದಾನಂದ ಅವರ ಸಮರ್ಥ ಅನುವಾದವೂ ಕಾರಣವಾಗಿದೆ.

**-ಎಂ. ರಾಜು**

ಪು: **ಚಿತ್ರದ ಕುದುರೆ** (ಲೇಖನಗಳ ಸಂಗ್ರಹ) ಲೇ: **ಕೆ.ವಿ. ಅಕ್ಷರ** ಪ್ರ: **ಅಕ್ಷರ ಪ್ರಕಾಶನ,** ಹೆಗ್ಗೋಡು ಪು: **೨೨೮** ಬೆಲೆ: **ರೂ. ೨೦೦/-**

## ಜಿಜ್ಞಾಸೆಗೆ ಒತ್ತಾಯಿಸುವ ಬರಹಗಳು



**ಖ್ಯಾ**ತ ರಂಗಕರ್ಮಿ ಮತ್ತು ಲೇಖಕ ಕೆ.ವಿ ಅಕ್ಷರ ಅವರ ಇತ್ತೀಚಿನ ಲೇಖನಗಳ ಈ ಸಂಗ್ರಹ ಅದರ ಜಿಜ್ಞಾಸು ಸ್ವರೂಪಿ ಆಯಾಮದಿಂದ ನಮ್ಮ ಗಮನ ಸೆಳೆಯುತ್ತದೆ. 'ಚಿತ್ರದ ಕುದುರೆ' ಎಂಬ ಶೀರ್ಷಿಕೆಯೆ ಹಲವು ಬಗೆಯ ಕಾಣ್ಕೆಗಳನ್ನು ನಮ್ಮೆದುರಿಗಿಡುತ್ತದೆ ಮೂರು ಭಾಗಗಳಲ್ಲಿ ಕಥನಗಳು, ಸಂಗತಿಗಳು ಮತ್ತು ಚಿತ್ರಗಳು ಎಂಬ ಶೀರ್ಷಿಕೆಗಳಲ್ಲಿ ಹರಡಿಕೊಂಡಿರುವ ಇಲ್ಲಿನ ಲೇಖನಗಳು ಲೇಖಕರ ತಾತ್ತ್ವಿಕ ಮತ್ತು ನೈತಿಕ ನೆಲಗಟ್ಟನ್ನು ನಮಗೆ ಪರಿಚಯಿಸಲು ಸಫಲವಾಗಿವೆ. ಆಧುನಿಕತೆಗಿರುವ ಏಕಸ್ವರೂಪಿ ನಿರೂಪಣೆಗಳನ್ನು ಇಲ್ಲಿನ ಬರಹಗಳು ತೀವ್ರವಾಗಿ ಪ್ರಶ್ನಿಸುತ್ತವೆ. ಯಾವುದೇ ಒಂದು ವಿಚಾರ ಅಥವಾ ಘಟನೆಯನ್ನು ಅದರ ವಿಭಿನ್ನ ಆಯಾಮಗಳ ಮೂಲಕ ಪ್ರವೇಶಿಸುವುದು ಮತ್ತು ವ್ಯಾಖ್ಯಾನಿಸುವುದು ಇಲ್ಲಿನ ಬಹುತೇಕ ಬರಹಗಳಲ್ಲಿ ಕಾಣಿಸಿಕೊಳ್ಳುವ ಮುಖ್ಯ ಗುಣಲಕ್ಷಣವಾಗಿದೆ.


ಯಾವುದೇ ಒಂದು ಬಗೆಯ ವಾದ ಅಥವಾ ಸಿದ್ಧಾಂತವನ್ನು ಒಪ್ಪಿಕೊಳ್ಳದ ಲೇಖಕರು ಸಮಕಾಲೀನ ಸಮಾಜದ ಅನೇಕ ವಿದ್ಯಮಾನಗಳಿಗೆ ತಮ್ಮ ಪ್ರತಿಕ್ರಿಯೆಯನ್ನು ಇಲ್ಲಿ ದಾಖಲಿಸಿದ್ದಾರೆ. ಹೀಗೆ ಪ್ರತಿಕ್ರಿಯಿಸುವಾಗ ಅವರಿಗೆ ತತ್ತ್ವಶಾಸ್ತ್ರದ ಕುರಿತಾಗಿ ಇರುವ ಆಕರ್ಷಣೆಯನ್ನು ಸಹ ನಾವು ಗಮನಿಸಬಹುದು. ಅವರು ಕಟ್ಟಿಕೊಡುವ ವ್ಯಕ್ತಿಚಿತ್ರಗಳೂ ಕೂಡ ಕೇವಲ ವ್ಯಕ್ತಿಗಳ ಜೀವನವನ್ನು ಮಾತ್ರ ಕುರಿತಾಗಿರದೆ ಅವರು ಪ್ರತಿನಿಧಿಸುವ ಯೋಚನಾ ಕ್ರಮದ ರೀತಿಯನ್ನು ವಿಶ್ಲೇಷಿಸುತ್ತದೆ. ಉದಾಹರಣೆಗೆ ಸಾಗರದ ನೀ.ನಾ ಮಧ್ಯಸ್ಥರ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತಾ ಲೇಖಕರು ಮಧ್ಯಸ್ಥರಿಗಿರುವ ವಿದ್ವತ್ತು ತಮಗೆ ಹೊಸಬಗೆಯ ಓದುವ ಕ್ರಮವನ್ನು ಪರಿಚಯಿಸಿತು ಎನ್ನುತ್ತಾರೆ. ಜೊತೆಗೆ ಆಧುನಿಕಮನಸ್ಸುಗಳ ಅವಸರದ ಓದನ್ನು ಟೀಕಿಸುತ್ತಾ ಸಂಯಮದ ಓದನ್ನು ಪುರಸ್ಕರಿಸುತ್ತಾರೆ, ಅವರ 'ಸಾಹಿತ್ಯವೆಂದರೆ ಅದು ಮಾರುವೇಷದಲ್ಲಿ ಅಡಗಿ ಕುಳಿತಿರುವ ಸಿದ್ಧಾಂತವೆಂದೂ ಮತ್ತು ಸಾಹಿತ್ಯವನ್ನು ಅದರ ಪರ್ಯಾವರಣದಿಂದ ಬೇಧಿಸಿದಾಗ ಮಾತ್ರವೇ ಅದೊರಳಗಿನ ಅರ್ಥಗಳು ನಿರಚನಗೊಳ್ಳುತ್ತವೆಂದೂ ನಾವು ಭಾವಿಸಲು ತೊಡಗಿದ್ದ ಆಧುನಿಕೋತ್ತರ ಹವಾಮಾನದಲ್ಲಿ ಮಧ್ಯಸ್ಥರ ಓದುವ ವಿಧಾನವು ನಮಗೆಲ್ಲ ಚಿಕಿತ್ಸೆಯಾಗಿ ಕೆಲಸ ಮಾಡಿತು' ಎಂಬ ಮಾತುಗಳು ಚಿಂತನಾರ್ಹವೇ ಹೌದು. ಸ್ವತಃ ರಂಗಕರ್ಮಿಗಳಾದ ಕೆ.ವಿ ಅಕ್ಷರ ಅವರು ಇಂಗ್ಲೆಂಡಿನ ನಾಟಕಕಾರ ಶೇಕ್ಸ್‌ಪಿಯರ್ ಕನ್ನಡಕ್ಕೆ ಬಂದ ರೀತಿಯನ್ನು ಸುದೀರ್ಘವಾದ ಲೇಖನವೊಂದರಲ್ಲಿ ಚರ್ಚಿಸಿದ್ದಾರೆ. ಶೇಕ್ಸ್‌ಪಿಯರನ ನಾಟಕಗಳನ್ನು ಕನ್ನಡ ಜಗತ್ತು ಒಂದೇ ಬಾಗಿಲಿನಿಂದ ಅಥವಾ ಅವು ಇರುವಂತೆಯೇ ಹಾಗೆಯೇ ಬರವಮಾಡಿಕೊಂಡಿಲ್ಲ. ಬದಲಾಗಿ ಕಾಲಕ್ರಮದ ಒತ್ತಡಗಳಿಗಳಿಗನುಗುಣವಾಗಿ ಮರುರೂಪಿಸಿವೆ ಎಂದು ತಿಳಿಸುತ್ತಾ ಪೂರ್ವದ ಜಗತ್ತು ಯಾವ ಬಗೆಯಲ್ಲಿ ಶೇಕ್ಸ್‌ಪಿಯರ್‌ನನ್ನು ಅನುಸಂಧಾನ ಮಾಡಿವೆ ಎಂಬುದು ಮುಖ್ಯ ಎಂದು ಅಭಿಪ್ರಾಯ ಪಡುತ್ತಾರೆ. ಅನುವಾದ ಅಥವಾ ಪ್ರಯೋಗಗಳ ಯಶಸ್ಸಿಗಿಂತ ಹೆಚ್ಚಾಗಿ ಹೊಸ ಹುಡುಕಾಟ ಮತ್ತು ಹೊಸ ಸವಾಲುಗಳನ್ನು ಎದುರಿಸುವುದು ರಂಗಕರ್ಮಿಗಳಿಗೆ ಬಹಳ ಮುಖ್ಯ ಎಂಬ ಮಾತು ಗಮನಾರ್ಹವಾಗಿದೆ.

ಈ ಜಿಜ್ಞಾಸು ಸ್ವರೂಪಿ ಲೇಖನಗಳನ್ನು ಗಮನಿಸಿದಾಗ ನವ್ಯೋತ್ತರ ಕಾಲಘಟ್ಟದಲ್ಲಿ ಯಾವುದೂ ವಾದವಾಗಿ ಬರಬೇಕಿಲ್ಲ. ಕನ್ನಡ ಸಾಹಿತ್ಯ ಜಗತ್ತು ಆಧುನಿಕೋತ್ತರ ಕಾಲಘಟ್ಟದ ಸಂಕೀರ್ಣತೆಗೆ ಪ್ರತಿಕ್ರಿಯಿಸುತ್ತವೆಯೇನೋ ಎಂಬ ಅನುಮಾನ ಉದ್ಭವಿಸುತ್ತದೆ. ಕನ್ನಡದ ಯಾವ ಲೇಖಕರೂ ತಮ್ಮನ್ನು ಆಧುನಿಕೋತ್ತರವಾದಿಗಳು ಎಂದು ಕರೆದುಕೊಂಡಿಲ್ಲ. ಆದರೆ ನಟರಾಜ ಹುಳಿಯಾರ್, ಕೆ.ವೈ ನಾರಾಯಣಸ್ವಾಮಿಯವರ ಬರಹಗಳು, ಗಿರೀಶ ಕಾರ್ನಾಡರ 'ಒಡಕಲುಬಿಂಬ'ದಂತಹ ರಚನೆಗಳು ಅಥವಾ ಕೆ.ವಿ ಅಕ್ಷರ ಅವರ ಬರಹಗಳ ತಾತ್ವಿಕ ನೆಲಗಟ್ಟನ್ನು ಗಮನಿಸಿದರೆ ಆಧುನಿಕೋತ್ತರವಾದವಿಲ್ಲ ಎಂಬ ಮಾತನ್ನು ಸಹ ಒಪ್ಪಲಾಗುವುದಿಲ್ಲ. ಇದರ ಅರ್ಥ ಕನ್ನಡದ ಲೇಖಕರನ್ನು ಯಾವುದೇ ಒಂದು ನಿರ್ದಿಷ್ಟ ಸಿದ್ಧಾಂತಕ್ಕೆ ಲೇಬಲ್ ಮಾಡುವುದಲ್ಲ. ಬದಲಾಗಿ ಸಮಕಾಲೀನ ವಿದ್ಯಮಾನವು ಇವರ ಪದ್ಯಗಳಲ್ಲಿ ಹೇಗೆ ಪ್ರತಿಫಲನಗೊಳ್ಳುತ್ತಿದೆ ಎಂಬುದನ್ನು ಅರಿಯುವುದಷ್ಟೇ ಆಗಿದೆ.

**-ಟಿ. ಅವಿನಾಶ್**

ಪು: **ಹಲವು ಬಣ್ಣದ ಹಗ್ಗ** ಲೇ: **ಸುರೇಶ ನಾಗಲಮಡಿಕೆ** ಪ್ರ: **ದೀಪಂಕರ ಪುಸ್ತಕ**, ಬೆಂಗಳೂರು ಪು: ೧೮೮ ಬೆಲೆ: ರೂ. ೧೮೦/

## ಹೊಸ ತಲೆಮಾರಿನ ಕಾವ್ಯದ ಬಹುಮುಖ ಅಧ್ಯಯನ



**ಸ**ಮಕಾಲೀನ ಕಾವ್ಯವನ್ನು ಆಸಕ್ತಿಯಿಂದ ಓದುವ ಸುರೇಶ್ ನಾಗಲಮಡಿಕೆಯವರ ಈ ಕೃತಿ ಹೊಸ ತಲೆಮಾರಿನ ಕಾವ್ಯ ಕುರಿತು ಅಧ್ಯಯನ ನಡೆಸಿದ ಒಂದು ಗಂಭೀರ ಪ್ರಯತ್ನವಾಗಿದೆ. ಕನ್ನಡದಲ್ಲಿ ಇಂದು ಶಕ್ತವಾಗಿ ಬರೆಯುತ್ತಿರುವ ಹೊಸ ತಲೆಮಾರಿನ ಕವಿಗಳ ಸಂಖ್ಯೆ ಸುಮಾರು ಐವತ್ತರ ಮೇಲೆ ಇದ್ದು ಅವರೆಲ್ಲರ ಕಾವ್ಯವನ್ನು ಆಸಕ್ತಿಯಿಂದ ಓದುವ, ಹಿಂಬಾಲಿಸುವುದು ಕಠಿಣಸಾಧ್ಯ. ಹಲವು ಐಡಿಯಾಲಾಜಿಗಳ, ಹಲವು ಸಂವೇದನೆಗಳ ಯುಗಧರ್ಮದ ಇಂದಿನ ಕಾವ್ಯವು ಒಂದು ಚೌಕಟ್ಟಿಗೆ ಒಳಪಡುವುದು ಕಷ್ಟ. ಸುರೇಶರು ತಮ್ಮ ಈ ಕೃತಿಯಲ್ಲಿ ಚದುರಿದ ಸಂವೇದನೆಗಳ ಹೊಸ ತಲೆಮಾರಿನ ಕಾವ್ಯವನ್ನು ಓದಿ ಸ್ಥಾನ ನಿರ್ದೇಶನ ಮಾಡುವ ನೀಡುವ ಪ್ರಯತ್ನ ಮಾಡಿದ್ದಾರೆ. ಹಾಗೆಯೇ ಅವರ ಕಾವ್ಯಗಳ ಆಶಯ, ಆಕೃತಿಗಳನ್ನು ಕುರಿತು ಕೆಲವು ಒಳನೋಟಗಳನ್ನು ನೀಡಿದ್ದಾರೆ.

ಈ ಅಧ್ಯಯನದ ಮೊದಲ ಭಾಗದಲ್ಲಿ ಹೊಸಬರ ಕಾವ್ಯದ ಆಶಯ, ಆಕೃತಿಗಳನ್ನು ತಾತ್ವಿಕ ನೆಲೆಗಟ್ಟಿನಿಂದ ಬಿಡಿಸಿಡುವ ಕ್ರಮವಿದೆ. ಹೊಸ ತಲೆಮಾರಿನ ವಸ್ತುಗಳು ಜಾಗತೀಕರಣ ಸೇರಿದಂತೆ ಏನೆಲ್ಲಾ ಇವೆ ಎನ್ನುವುದನ್ನು ಸುರೇಶ್ ಅವರು ವಿಫುಲವಾದ ಉದಾಹರಣೆಗಳ ಮೂಲಕ ನಿರೂಪಿಸುವ ಯತ್ನ ಮಾಡಿದ್ದಾರೆ. ಈ ಮೂಲಕ ಹೊಸಬರಲ್ಲಿ ಸಾಮಾಜಿಕವಾದ ಸಂವೇದನೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಸಿಕ್ಕಿದೆ ಎನ್ನುವುದನ್ನು ಅವರು ಗುರುತಿಸಿದ್ದಾರೆ.

ಇಲ್ಲಿ ಇವರು ಗುರುತಿಸುವ ಹೊಸ ತಲೆಮಾರಿನ ಸಮಸ್ಯೆಗಳಲ್ಲಿ ಭಾಷೆಯ ಬಳಕೆಯೂ ಒಂದಾಗಿದೆ. ಹೊಸ ಕಾವ್ಯದ ಅಭಿವ್ಯಕ್ತಿಯಲ್ಲಿ ಕಾಣುವ ವಾಚಾಳಿತನ, ಸಡಿಲ ನಿರೂಪಣೆಗಳನ್ನು ಅವರು ಗುರುತಿಸುತ್ತಾ ಕವಿಗಳಲ್ಲಿ ಗೈರು ಹಾಜರಾದ ರೂಪಕ ಬಳಕೆಯನ್ನು ಕುರಿತು ಹೇಳುತ್ತಾರೆ. ಅಂತಿಮವಾಗಿ ಕಾವ್ಯ ಮುಖ್ಯವಾಗುವುದು ಕವಿ ಪ್ರತಿಭೆಯು ಸೃಷ್ಟಿಸುವ ಮಾಂತ್ರಿಕತೆಯಿಂದ. ಕೌಶಲತೆಯ ಸಂಗತಿ ಎರಡನೆಯದು. ಆದರೆ ಆಶಯ ಆಕೃತಿಗಳ ಬಗೆಗೆ ಅವರು ಹೇಳುವ ಮಾತುಗಳನ್ನು ಒಪ್ಪುತ್ತಲೇ ಅವರು ಇದನ್ನು ಇನ್ನಷ್ಟು ಸ್ಪಷ್ಟ ಶಬ್ದಗಳಲ್ಲಿ ಹೇಳಬೇಕಿತ್ತು ಎನ್ನಿಸುತ್ತದೆ.

ಕನ್ನಡ ಕಾವ್ಯದ ಓದು ಇಂದು ದಲಿತ, ಸ್ತ್ರೀ, ಸಬಾಲ್ಟ್ರನ್ ಇತ್ಯಾದಿ ಅಂಶಗಳನ್ನು ಮುನ್ನೆಲೆಯಲ್ಲಿಟ್ಟು ನೋಡುವಂತದ್ದಾಗಿದೆ. ಅದರಂತೆ ನಾಗಲಮಡಿಕೆಯವರು ಸಹ ಸೂಕ್ಷ್ಮ(micro) ಓದಿಗೆ ಮಹತ್ವ ನೀಡಿದ್ದಾರೆ. ಈ ಕೃತಿಯ ಒಂದು ಅಧ್ಯಾಯವು ದಲಿತ ಮೀಮಾಂಸೆಯನ್ನೇ ಪ್ರಧಾನವಾಗಿ ಚರ್ಚಿಸುತ್ತದೆ. ಹೊಸ ತಲೆಮಾರಿನ ದಲಿತ ಕವಿಗಳ ವಸ್ತು, ಆಕೃತಿಗಳ ಜೊತೆ ದಲಿತ ಕಾವ್ಯ ಮೀಮಾಂಸೆಯನ್ನು ಇಟ್ಟು ನೋಡಲಾಗಿದೆ. ನಗರ ಬದುಕಿನ ದಲಿತರ ಮತಾಂತರದ ಹಿಂದಿನ ಅಸ್ಮಿತೆಯ ಪ್ರಶ್ನೆ, ಸ್ಲಂ ವಾಸ ಇತ್ಯಾದಿಗಳು ಅಸ್ಪೃಶ್ಯತೆಯ ಹೊಸ ವ್ಯಾಖ್ಯಾನವನ್ನು ಬೇಡುತ್ತಿವೆ ಎನ್ನುವುದನ್ನು ಗುರುತಿಸಲಾಗಿದೆ. ಇದೇ ರೀತಿ ಸುರೇಶ್ ಅವರ ಆಸಕ್ತಿ ಮಹಿಳಾ ಕಾವ್ಯದ ಬಗೆಗೂ ಇದೆ ಎನ್ನುವುದನ್ನು ಅವರು ಓದಿಗೆಂದು ಎತ್ತಿಕೊಳ್ಳುವ ಕಾವ್ಯಗಳು ದೃಢ ಪಡಿಸುತ್ತವೆ.


ಈ ಕೃತಿಯ ಮೊದಲ ಅಧ್ಯಾಯಗಳು ಕಾವ್ಯ ಮೀಮಾಂಸೆಯನ್ನು ಚರ್ಚಿಸಿದರೆ, ಕೃತಿಯ ಆನಂತರದ ಭಾಗಗಳು ಕವಿತೆಗಳ ಪಾತ್ಯಕ್ಷಿಕ ಅಧ್ಯಯನಗಳಾಗಿವೆ. ಒಟ್ಟಾರೆ ಈ ಲೇಖಕರ ಇಂಗಿತ ಕನ್ನಡದ ಹೊಸ ತಲೆಮಾರಿನ ಕಾವ್ಯವನ್ನು ಈಗಾಗಲೇ ಹೇಳಿದಂತೆ ಸೂಕ್ಷ್ಮ ಮತ್ತು ಸಮಗ್ರವಾಗಿ ನೋಡುವುದು.

ಸುರೇಶರ ಈ ಅಧ್ಯಯನದಲ್ಲಿ ಸಮಸ್ಯೆ ಎನಿಸುವುದು ಅವರು ವಸ್ತುವಿನ ಸಮಕಾಲೀನತೆಯ ಬಗೆಗೆ ತಳೆಯುವ ನಿಲುವು. ವಸ್ತು ಎನ್ನುವುದು ಜಾಗತೀಕರಣ, ಕೋಮುಭಾವನೆಗಳಂತಹ ಸಂಗತಿಗಳನ್ನು ತೆಗೆದುಕೊಂಡ ಮಾತ್ರಕ್ಕೆ ಸಮಕಾಲೀನವಾಗುವುದು ಎನ್ನಬಹುದೇ? ಎನ್ನುವುದನ್ನು ಅವರು ಗೊಂದಲದಿಂದ ಗ್ರಹಿಸುತ್ತಾರೆ ಎನ್ನಿಸುತ್ತದೆ. ಅಲ್ಲದೆ ಆಧುನಿಕೋತ್ತರ ಎನ್ನುವ ಪರಿಭಾಷೆಯು ನವ್ಯೋತ್ತರವೋ ಅಥವಾ ಪೋಸ್ಟ್‌ಮಾರ್ಡನ್ ತತ್ವದ ಪರಿಭಾಷೆಯೋ ಎನ್ನುವುದು ಇಲ್ಲಿ ಎಲ್ಲರಂತೆ ಸುರೇಶರಿಗೂ ಕಾಡಿದ ಸಂಗತಿಯೆನಿಸುತ್ತದೆ. ಅಲ್ಲದೆ ಬಹುಮುಖಿಯಾದ ಬಹುಜನರ ಕಾವ್ಯಗಳನ್ನು ಓದಿಗಾನಿಸಿಕೊಳ್ಳುವಾಗ ಉಲ್ಲೇಖಗಳೇ ಒಂದು ಸಮಸ್ಯೆಯಾಗಿ ಕಾಡಿದಂತೆ ತೋರುತ್ತದೆ.

**–ಆರ್. ತಾರಿಣಿ ಶುಭದಾಯಿನಿ**

ಪು : **ನೆನಪೇ ಸಂಗೀತ** ಲೇ : **ವಿದ್ಯಾಭೂಷಣ** ಪ್ರ : **ಪ್ರಕೃತಿ ಪ್ರಕಾಶನ**, ಬೆಂಗಳೂರು ಪು :೧೫೨ ಬೆಲೆ: **ರೂ.೧೮೦/–**

## .ಸಾಂಸಾರಿಕತೆಗೆ ಘನತೆ ತಂದ ಸ್ವಾಮಿಯೊಬ್ಬರ ಆತ್ಮಕಥನ



**ದಾ**ಸರ ಕೀರ್ತನೆಗಳ ಸುಶ್ರಾವ್ಯ ಗಾಯನಕ್ಕೆ ಹೆಸರಾದ ವಿದ್ಯಾಭೂಷಣರು ಸಂನ್ಯಾಸವನ್ನು ತ್ಯಜಿಸಿ ಗೃಹಸ್ಥರಾಗುವುದರ ಮೂಲಕ ಕರ್ನಾಟಕದ ಮನೆಮಾತಾದವರು. ಅವರ ಈ ಕೃತಿ ಸಂಗೀತ ಮತ್ತು ಮಠೀಯ ಅನುಭವಗಳ ವಿಭಿನ್ನ ಜೀವನ ಕಥನ. ಕೃತಿಯ ಮೊದಲ ಕೆಲವು ಅಧ್ಯಾಯಗಳು ಬಾಲ್ಯದಲ್ಲಿ ಅವರ ಮೇಲಾದ ಸಂಗೀತದ ಪ್ರಭಾವವನ್ನು ದಾಖಲಿಸುತ್ತವೆ. ತಂದೆಯಿಂದಲೇ ಮೊದಲ ಸಂಗೀತ ಪಾಠಗಳನ್ನು ಕಲಿತದ್ದು, ಪುತ್ತೂರಿನ ವೆಂಕಟಪ್ಪ ಡೋಗ್ರ ಎಂಬ ವಾದ್ಯಗಾರ ವಿದೇಶಿ ವಾದ್ಯವಾದ ಸ್ಯಾಕ್ಸೋಫೋನನ್ನು ಮೊದಲಬಾರಿಗೆ ಶಾಸ್ತ್ರೀಯ ಸಂಗೀತಕ್ಕೆ ಅಳವಡಿಸಿದ್ದು; ಶ್ರೀರಂಗಪಟ್ಟಣದ ಪುಟ್ಟುಸ್ವಾಮಿ ಎಂಬ ನಾದಸ್ವರವಾದಕರು ಕಲೋಪಾಸನೆಯನ್ನು ದೈವೋಪಾಸನೆ ಎಂದು ನಂಬಿ ನದಿಗಳ ಮುಂದೆ, ದೇವಸ್ಥಾನದ ಆನೆ, ಹಸುಗಳ ಮುಂದೆ ನಾದಸ್ವರ ನುಡಿಸುತ್ತಿದ್ದುದು ಮುಂತಾದ ಕುತೂಹಲಕರ ಸಂಗತಿಗಳು ಇಲ್ಲಿವೆ.

ಕುಕ್ಕೆ ಸುಬ್ರಹ್ಮಣ್ಯ ಮಠಕ್ಕೆ ವಿದ್ಯಾಭೂಷಣರ ಬಲವಂತದ ಪೀಠಾರೋಹಣ ಕೃತಿಯ ಪ್ರಮುಖ ಘಟ್ಟಗಳಲ್ಲೊಂದು. ಧಾರ್ಮಿಕ ನಡೆಯ ಮಾರ್ಗದರ್ಶನಕ್ಕಾಗಿ ಸಮುದಾಯಗಳೇ ಮಠಗಳನ್ನು ನಿರ್ಮಿಸಿಕೊಂಡಿರುತ್ತವೆ. ಮಠದ ಸ್ವಾಮೀಯಾಗಿ ಬರುವವರು ಸಾಧಕರಾಗಿದ್ದು ಸನ್ಯಾಸವನ್ನು ಒಪ್ಪಿ ಬಂದವರಾದರೆ ಸಮಸ್ಯೆ ಇರದು. ಆದರೆ ಮಠವೆಂದರೇನು, ಸನ್ಯಾಸವೆಂದರೇನೆಂದರಿಯದ ಮುಗ್ಧ ಬಾಲಕರನ್ನು ಅವರ ಭಿಪ್ರಾಯವನ್ನೂ ಕೇಳದೆ ಸ್ವಾಮಿಯನ್ನಾಗಿಸುವುದು ಕ್ರೌರ್ಯವೇ ಸರಿ. ಕಿರಿಯ ಸ್ವಾಮೀಜಿಯಾಗಿ ನಿಯುಕ್ತರಾದಾಗ ವಿದ್ಯಾಭೂಷಣರಿಗೆ ಇನ್ನೂ ಹದಿನೈದರ ವಯಸ್ಸು. ಚಡ್ಡಿ ತೊಡುತ್ತಿದ್ದ ಬಾಲಕ ಕಾಲೇಜಿಗೆಂದು ಆಸೆಪಟ್ಟು ಹೊಲಿಸಿದ್ದ ಪ್ಯಾಂಟನ್ನು ಒಮ್ಮೆಯೂ ಧರಿಸಲಾಗದೆ ಕಾವಿ ಬಟ್ಟೆ ಬಲವಂತವಾಗಿ ಆಕ್ರಮಿಸಿಬಿಡುತ್ತದೆ.

ಪೇಜಾವರ ಮಠದ ವಿಶ್ವೇಶ್ವರತೀರ್ಥರು ವಿದ್ಯಾಭೂಷಣರಿಗೆ ನೆಚ್ಚಿನ ಗುರುಗಳು. ಹೈದ್ರಾಬಾದಿನ ವಾಸ್ತವ್ಯದಲ್ಲಿ ವಿಶ್ವೇಶ್ವರತೀರ್ಥರು ಭಾಗವತದ ಪ್ರವಚನ ನೀಡುವಾಗ ಆಯ್ದ ಶ್ಲೋಕಗಳಿಗೆ (ತಾವು ಬಲ್ಲ ಕೆಲವೇ ರಾಗಗಳಲ್ಲಿ) ಹಾಡಿದ್ದೇ ವಿದ್ಯಾಭೂಷಣರು ಹಾಡುಗಾರರೆಂದು ಗುರುತಿಸಲ್ಪಟ್ಟರು. ಆಕಾಶವಾಣಿಯಿಂದಲೂ ಕರೆ ಬರುವಷ್ಟು ಜನಪ್ರಿಯರಾದರು. ಸಂಗೀತವೇ ಮುಂದೆ ತಮ್ಮ ಜೀವನಾಧಾರವಾಗಬಹುದೆಂದು ಅವರಾಗ ಎಣಿಸಿರಲೂ ಇಲ್ಲ. ಒಲ್ಲದ ನೊಗ ಹೊತ್ತೇ ೩೦ ವರ್ಷ ಮಠವನ್ನು ಮುನ್ನಡೆಸಿದ ವಿದ್ಯಾಭೂಷಣರು ತಮ್ಮ ಹಾಡುಗಾರಿಕೆಯಿಂದ ಮತ್ತು ನಿರಂತರ ಸಾಂಸ್ಕೃತಿಕ ಚಟುವಟಿಕೆಗಳಿಂದ ಮಠದ ಜನಪ್ರಿಯತೆಯನ್ನು ಹೆಚ್ಚಿಸುತ್ತಾರೆ. ಆದರೆ ಎಲ್ಲರಂತೆ ಸಂಸಾರಿಕ ಜೀವನ ನಡೆಸುವ ಆಸೆ ಅವರೊಳಗೆ ಜೀವಂತವಾಗಿ ಉಳಿದೇ ಇರುತ್ತದೆ. ಸ್ವಲ್ಪ 'ಹೊಂದಾಣಿಕೆ' ಮಾಡಿಕೊಂಡಿದ್ದರೂ ಮಠದೊಳಗೇ 'ಸುಖೀ' ಜೀವನ ನಡೆಸಬಹುದಿತ್ತೇನೊ! ಆದರೆ ಬದುಕಿನ ಆದರ್ಶ ಮತ್ತು ಮೌಲ್ಯಗಳ ಕುರಿತಾದ ಬದ್ಧತೆಯಿಂದಾಗಿ ಅವರು ಉದ್ದಕ್ಕೂ ಪೀಠತ್ಯಾಗದ ಬಗೆಗೇ ಯೋಚಿಸುತ್ತಾರೆ. ಬಳ್ಳಾರಿಯ ರಮಾ ಎಂಬ ಯುವತಿಯ ಪರಿಚಯದಿಂದಾಗಿ ವಿದ್ಯಾಭೂಷಣರ ಬದುಕು ಹೊಸ ದಿಕ್ಕಿಗೆ ಹೊರಳುತ್ತದೆ. ಈ ಸಂದರ್ಭದ ಅವರ ತಳಮಳ, ತಾಕಲಾಟಗಳು ಓದುಗರ ಮನಮುಟ್ಟುವಂತಿದ್ದು ಅವರ ನಿಸ್ಪೃಹ ನಡೆ ಪ್ರಾಮಾಣಿಕ ನಿಲುವುಗಳು ಅವರ ಬಗೆಗಿನ ಗೌರವವನ್ನು ಹೆಚ್ಚಿಸುತ್ತವೆ. ಲಕ್ಷ್ಮೀಶ ತೋಳ್ಪಾಡಿಯವರೊಂದಿಗಿನ ವಿದ್ಯಾಭೂಷಣರ ಆತ್ಮೀಯ ಸಂಬಂಧವೂ ಇಲ್ಲಿ ಹಲವು ಸಂದರ್ಭಗಳಲ್ಲಿ ಹಲವು ತೆರನಾಗಿ ವ್ಯಕ್ತವಾಗಿದೆ. ಮುಖ್ಯವಾಗಿ ಪೀಠತ್ಯಾಗದ ವಿಷಯದಲ್ಲಿ ತೋಳ್ಪಾಡಿಯವರು ತೋರುವ ವಿರೋಧ ನಿಜವಾಗಿಯೂ ಸೋಜಿಗವೆನಿಸುತ್ತದೆ. ಈ ಬಗ್ಗೆ ತೋಳ್ಪಾಡಿಯವರೇ ಬರೆದ ಮುನ್ನುಡಿಯಲ್ಲಿ ಸಮಜಾಯಿಷಿ ಮಾತುಗಳಿವೆ.

ವಿದ್ಯಾಭೂಷಣರು ತಮ್ಮ ಆತ್ಮಕಥನದ ಮೂಲಕ ತಮ್ಮದೇ ಆದ ಜೀವನ ದರ್ಶನವನ್ನು ತೆರೆದಿಟ್ಟಿದ್ದಾರೆ. ಅವರು ಉತ್ತಮ ಸಂಗೀತಗಾರರು ಮಾತ್ರವಲ್ಲದೆ ಉತ್ತಮ ಸಾಹಿತಿಯೂ ಹೌದೆನಿಸುವಂತೆ ಅವರ ಬರಹದ ಸೊಗಸಿದೆ. ಅವರದ್ದು ಬೌದ್ಧಿಕ .ಭಾಷೆಯಲ್ಲ, ಹೃದಯದ ಭಾಷೆ. 'ನೆನಪೇ ಸಂಗೀತ' ಯಾರೂ ಓದಬಹುದಾದ ಸರಳ ಸುಂದರ ಆತ್ಮಕಥೆ.

**–ಎನ್.ಎಂ. ಕುಲಕರ್ಣಿ**

**'ಹೊಸ ಮನುಷ್ಯ' ಓದುಗರೆಲ್ಲರಿಗೂ**
**ಬುದ್ಧಪೂರ್ಣಿಮೆಯ ಶುಭಾಶಯಗಳು**



**ಪ್ರೊ. ಎಂ.ಎಸ್. ಶ್ರೀರಾಮ್**
ಮತ್ತು **ಕುಟುಂಬ**
ಬೆಂಗಳೂರು

---

**'ಹೊಸ ಮನುಷ್ಯ' ಓದುಗರೆಲ್ಲರಿಗೂ**
**ಬಸವ ಜಯಂತಿ ಶುಭಾಶಯಗಳು**



**ಬಿ.ವಿ. ಸುರೇಂದ್ರ**
ಮತ್ತು **ಕುಟುಂಬ**
**ಶಿವಮೊಗ್ಗ**

**‘ಹೊಸ ಮನುಷ್ಯ’ದ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**




**ಶಾರದಾದೇವಿ ಪದವಿಪೂರ್ವ ಕಾಲೇಜು**

ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ

**ಬೆಂಗಳೂರು**


HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**ತಿಂಗಳ ಸಾಲುಗಳು...**



ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ
ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ
ಲಿಂಗವಂತನು ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ
ಅವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ
ಲಿಂಗಭಕ್ತನು ಲಿಂಗಪಥವ ಹೇಳಿದಡೆ
ಮಚ್ಚರಿಸುವರ ಮೆಚ್ಚ ಕೂಡಲಸಂಗಮದೇವ

–ಬಸವಣ್ಣ


*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**

**ಲೆಕ್ಕ ಪರಿಶೋಧಕರು, ಮೈಸೂರು**

ಮೊಬೈಲ್ : ೯೪೪೮೦೮೪೭೯೩


**Regd. News Paper** RNI No. KARKAN/2012/47568
Rgd No. KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor,
‘Hosa Manushya’, ’HIG-5, ‘Nudi’, Kallahalli Extension,
Vinoba Nagara, Shivamogga -577204 ( Karnataka)